2. ವಿತ್ತೀಯ ಕಾರ್ಯಕಲಾಪಗಳು :

2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸರ್ಕಾರದ ಉತ್ತರ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕದ 2010–11ನೇ ಸಾಲಿನ ಆಯವ್ಯಯದ ಮೇಲೆ ಈ ಸದನದಲ್ಲಿ ವ್ಯಾಪಕವಾಗಿ ಚರ್ಚೆ ನಡೆದಿದೆ. ವಿರೋಧ ಪಕ್ಷದ ನಾಯಕರಾದ ಸಿದ್ಧರಾಮಯ್ಯನವರು, ಟಿ.ಬಿ. ಜಯಚಂದ್ರರವರು, ಮಹದೇವಪ್ಪನವರು, ಯೋಗೀಶ್‌ಭಟ್‌ರವರು, ಶಿವಲಿಂಗೇಗೌಡರವರು, ಎ.ಎಸ್. ಪಾಟೀಲ್ ರವರು, ಮುನಿಯಪ್ಪನವರು, ಸಿದ್ದುಸವದಿಯರು, ಕರಡಿ ಸಂಗಣ್ಣನವರು, ಕಿಮ್ಮನೆ ರತ್ನಾಕರ್‌ರವರು, ಸೈಯದ್ ಯಾಸೀನ್‌ರವರು, ರೇವಣ್ಣನವರೂ ಸೇರಿದಂತೆ ಹಲವಾರು ಜನ ವಿರೋಧ ಪಕ್ಷದ ಸದಸ್ಯರು, ಆಡಳಿತ ಪಕ್ಷದ ಸದಸ್ಯರು ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಹಲವಾರು ವಿಷಯಗಳ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಚರ್ಚೆಯ ಕಾಲದಲ್ಲಿ ಗೌರವಾನ್ವಿತ ಸದಸ್ಯರು ಮಾಡಿದಂಥ ಸಲಹೆಗಳು ಮತ್ತು ಟೀಕೆ ಟಿಪ್ಪಣಿಗಳನ್ನು ನಾನು ಮುಕ್ತ ಮನಸ್ಸಿನಿಂದ ಮತ್ತು ಸಮಚಿತ್ತದಿಂದ ಸ್ವೀಕರಿಸಿದ್ದೇನೆ. ಬಹಳಷ್ಟು ಉತ್ತಮ ಸಲಹೆಗಳನ್ನು ಗೌರವನ್ವಿತ ಪ್ರತಿಪಕ್ಷದ ನಾಯಕರು ಕೊಟ್ಟಿದ್ದಾರೆ. ಬರುವ ದಿವಸಗಳಲ್ಲಿ ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆನ್ನುವ' ಭರವಸೆಯನ್ನು ಈ ಸದನದಲ್ಲಿ ಕೊಡುತ್ತಿದ್ದೇನೆ. ಒಟ್ಟಾರೆ ರಾಜ್ಯದ ಹಿತದೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಯನ್ನು ಚುರುಕುಗೊಳಿಸುವಂಥ ದೃಷ್ಟಿಯಿಂದ ಎಲ್ಲಿ ಕೊರತೆ ಯಿದೆಯೋ ಅವುಗಳನ್ನು ಸರಿಪಡಿಸಿಕೊಂಡು ಸರ್ಕಾರದ ಖಜಾನೆಗೆ ಇನ್ನೂ ಹೆಚ್ಚು ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಪ್ರಯತ್ನ ಮಾಡಿ ಈ ನಾಡಿನ ಜನ ನಮ್ಮ ಮೇಲಿಟ್ಟಿರುವ ನಂಬಿಕೆ, ವಿಶ್ವಾಸವನ್ನು ಉಳಿಸಿಕೊಂಡು ಹೋಗವಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆನ್ನುವ ಭರವಸೆಯನ್ನು ಈ ಸದನದಲ್ಲಿ ನಮೆಲ ಗೌರವಾನ್ವಿತ ಸದಸ್ಯರಿಗೆ ಕೊಡುತ್ತೇನೆ. ನಾನು ಮತ್ತೆ ಮತ್ತೆ ಒಂದು ಮಾತು ಹೇಳುತ್ತಿರುತ್ತೇನೆ. ಏನೆಂದರೆ, ಸಾಧನೆ ಮಾತನಾಡಬೇಕು, ಮಾತನಾಡುವುದೇ ಸಾಧನೆಯಾಗಬಾರದು. ನಾನು ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಗೌರವಾನ್ವಿತ ಸದಸ್ಯರಲ್ಲಿ ಒಂದೇ ವಿನಂತಿ ಮಾಡುತ್ತೇನೆ.

ಜಗತ್ತಿನಲ್ಲೇ ಆರ್ಥಿಕ ಹಿನ್ನಡೆಯಾಗಿರುವ ಸಂದರ್ಭದಲ್ಲಿ ಜಗತ್ತಿನ ಅನೇಕ ದೇಶಗಳು ಈ ಸಂಕಷ್ಟಕ್ಕೆ ಸಿಲುಕಿದಂತೆ ನಮ್ಮ ದೇಶವೂ ಅದಕ್ಕೆ ಹೊರತಾಗಿರಲಿಲ್ಲ. ನಮ್ಮ ದೇಶದ ಅನೇಕ ರಾಜ್ಯಗಳೂ ಸಹ ಆ ಸಮಸ್ಯೆಯನ್ನು ಸಹಜವಾಗಿ ಎದುರಿಸಬೇಕಾಯಿತು. ಇದೆಲ್ಲದರ ಮಧ್ಯೆಯೂ ಸಹ ಹಣಕಾಸಿನ ನಿರ್ವಹಣೆಯಲ್ಲಿ ಅಭಿವೃದ್ಧಿ ಕಾರ್ಯದಲ್ಲಿ ತೆರಿಗೆ ಸಂಗ್ರಹದಲ್ಲಿ, ಅದು commercial tax, excise, motor vehicle, ಮತ್ತೊಂದು ಇಲಾಖೆಗಳಾಗಿರಬಹುದು, ಅಧಿಕಾರಿಗಳು ಅತ್ಯಂತ ಪ್ರಾಮಾಣಿಕವಾಗಿ ಈ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಕಡೆ ಅಭಿವೃದ್ಧಿ ಕಾರ್ಯದ ಕಡೆ ಕೆಲಸ ಮಾಡಿದ್ದಾರೆ. ಕೆಲವೇ ದಿವಸಗಳಲ್ಲಿ ನಮ್ಮ ಶ್ರೀನಿವಾಸಮೂರ್ತಿಯವರು ನಿವೃತ್ತಿಯಾಗುತ್ತಿದ್ದಾರೆ. ಈ ಸ್ಥಾನದಿಂದ ಬೇರೆ ಕಡೆ ಹೋಗುತ್ತಿದ್ದಾರೆ. ಅವರ ಪರಿಶ್ರಮದಿಂದ ಮತ್ತು ಅವರ ವಿಶೇಷ ಕಾಳಜಿ ಈ ಒಂದು ಆಯವ್ಯಯವನ್ನು ಮಂಡಿಸಲಿಕ್ಕೆ ಸಾಧ್ಯವಾಯಿತು. ಎಲ್ಲರ ಶ್ರಮದಿಂದ ಸಾಧನೆ ಮಾಡುವುದಕ್ಕೆ ಸಾಧ್ಯವಾಯಿತು. ವಿರೋಧ ಪಕ್ಷದ ನಾಯಕರು ಈ ರಾಜ್ಯದ ಯೋಜನಾ ವೆಚ್ಚ ಸಂಪನ್ಮೂಲ ಸಂಗ್ರಹಣೆ ಆದ್ಯತಾ ವಲಯಗಳಿಗೆ ಬಜೆಟ್ ಅನುದಾನದ ಹಂಚಿಕೆ ವಿತ್ತೀಯ ನಿರ್ವಹಣೆ ಮತ್ತಿತರ ವಿಚಾರಗಳಲ್ಲಿ ತಮ್ಮದೇ ಆದಂಥ ಅನಿಸಿಕೆಗಳನ್ನು ಪ್ರಸ್ತಾಪಿಸಿದ್ದಾರೆ. ನಾನು ಈಗಾಗಲೇ ಹೇಳಿದಂತೆ, ಸುಮಾರು ಎರಡು ವರ್ಷಗಳಿಂದ ಪ್ರಪಂಚದಾದ್ಯಂತ ಹಣಕಾಸಿನ ಬಿಕ್ಕಟ್ಟಿನಿಂದ ಆರ್ಥಿಕ ಬೆಳವಣಿಗೆಯಲ್ಲಿ ಏನು ಹಿನ್ನಡೆ ಉಂಟಾಯಿತು, ಇದು ನಿಮಗೆಲ್ಲಾ ಗೊತ್ತಿರುವಂಥ ಸಂಗತಿ. ಈಗಾಗಲೇ ಹೇಳಿದಂತೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಬಿಸಿ ನಮ್ಮ ದೇಶದ ಮೇಲಷ್ಟೇ ಅಲ್ಲ, ರಾಜ್ಯಗಳ ಮೇಲೆ ತಟ್ಟಿರುವಂಥದ್ದು. ನಿರೀಕ್ಷಿಸಿದಂತೆ ನಮ್ಮ ಸಂಪನ್ಮೂಲವನ್ನು ಕ್ರೋಡೀಕರಿಸುವುದಕ್ಕೆ ಸಂಪನ್ಮೂಲ ಸಂಗ್ರಹಣೆಯಲ್ಲಿ ಸ್ವಲ್ಪ ಹಿನ್ನಡೆಯಾಗುವುದಕ್ಕೆ ಈ ಪ್ರಮುಖವಾದ ವಿಚಾರ ಕಾರಣ ಎನ್ನುವುದನ್ನು ನಾನು ಗೌರವಾನ್ವಿತ ಸದಸ್ಯರಿಗೆ ಮನವರಿಕೆ ಮಾಡುವುದಕ್ಕೆ ಇಚ್ಛಿಸುತ್ತೇನೆ. ತಾವು ಅತ್ಯಂತ ಪ್ರಾಮಾಣಿಕವಾಗಿ ಈ ಆಯವ್ಯಯವನ್ನು ಪರಿಶೀಲಿಸಿದರೆ ಇಂಥ ಆರ್ಥಿಕ ಹದಗೆಟ್ಟು ಪರಿಸ್ಥಿತಿಯಲ್ಲಿಯೂ ಸಹ ಪ್ರಾರಂಭದ ನಾಲ್ಕೈದು ತಿಂಗಳು ಸಂಗ್ರಹಣೆಯಲ್ಲಿ ನಮಗೆ ಅನೇಕ ರೀತಿಯ ಆರ್ಥಿಕ ಹಿನ್ನಡೆ ಆದ ಮೇಲೂ ಸಹ ನಮ್ಮ ಸರ್ಕಾರ ತೆರಿಗೆ ಸಂಗ್ರಹಣೆಯಲ್ಲಿ, ಜಯಚಂದ್ರರವರೆ, ಸುಮಾರು ಶೇಕಡ 6 ರಷ್ಟು ಬೆಳವಣಿಗೆಯನ್ನು ದಾಖಲಿಸುವುದರ ಜೊತೆಗೆ ವಿತ್ತೀಯ ಕೊರತೆಯನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದ ಮಿತಿಯೊಳಗೆ

ನಿರ್ಬಂಧಿಸುವುದರಲ್ಲಿ ಯಶಸ್ವಿಯಾಗಿದೆ ಎನ್ನುವ ಮಾತನ್ನು ಅತ್ಯಂತ ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛಿಸುತೇನೆ. ನಮ್ಮ ರಾಜ್ಯದ ಆರ್ಥಿಕ ನಿರ್ವಹಣೆಯ ಬಗ್ಗೆ ಕೇಂದ್ರ ಯೋಜನಾ ಆಯೋಗ, 13ನೇ ಹಣಕಾಸು ಆಯೋಗ, ಭಾರತೀಯ ರಿಸರ್ವ್ ಬ್ಯಾಂಕ್, ಮುಕ್ತ ಕಂಠದಿಂದ ಶ್ಲಾಘಿಸಿವೆ ಎಂದು ಈ ಸದನಕ್ಕೆ ಹೇಳುವುದಕ್ಕೆ ನಾನು ಸಂತೋಷಪಡುತ್ತೇನೆ. ಬರುವ ದಿವಸಗಳಲ್ಲಿ ನಮ್ಮ ಸರ್ಕಾರದ ಆದ್ಯತೆಗಳು ಹೀಗಿವೆ. ಒಂದು, ತತಕ್ಷಣದಿಂದ ಇವತ್ತು ಆಯವ್ಯಯ ಪಾಸ್ ಆಗುತ್ತಿದ್ದಂತೆ ಈ ಮುಂಗಡ ಪತ್ರದ ಪೂರ್ಣ ಅನುಷ್ಠಾನದ ಒಂದು ಸಂಕಲ್ಪ ನಮ್ಮದಾಗಿದೆ. 2010–11 ನೇ ಸಾಲಿನ ಮುಂಗಡ ಪತ್ರವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಎಲ್ಲ ರೀತಿಯ ಪ್ರಾಮಾಣಿಕ ಪ್ರಯತ್ನ ನಾವು ಮಾಡುತ್ತೇವೆ. ಈ ಗುರಿಯನ್ನು ಮುಟ್ಟುವುದಕ್ಕೆ ಇದನ್ನು ಸಾಧಿಸುವುದಕ್ಕೆ ಸಂಪನ್ಮೂಲ ಸಂಗ್ರಹಣೆ ಪ್ರಕ್ರಿಯೆ ಯನ್ನು ತೀವ್ರಗೊಳಿಸಿ, ಸೋರಿಕೆ ತಡೆಗಟ್ಟಿ, ತೆರಿಗೆಯೇತರ ಆದಾಯವನ್ನು ಹೆಚ್ಚಿಸಿ, ಬಜೆಟ್‌ನಲ್ಲಿ ಪ್ರಕಟಿಸಿರುವ ಎಲ್ಲಾ ಕಾರ್ಯಕ್ರಮಗಳಿಗೆ ಸಮಯಕ್ಕೆ ಸರಿಯಾಗಿ ಸಂಪನ್ಮೂಲವನ್ನು ಒದಗಿಸುವಂಥ ಒಂದು ದೃಢ ನಿರ್ಧಾರ ನಾವು ಮಾಡಿದ್ದೇವೆ. ನನ್ನ ಒಂದು ಕನಸು ಮತ್ತು ಆಸೆ ಇದೆ. ನಮ್ಮ ಸರ್ಕಾರದ ಅವಧಿಯಲ್ಲಿ ಇನ್ನು ಮೂರು ವರ್ಷಗಳೊಳಗೆ ರಾಜ್ಯದ ವಾರ್ಷಿಕ ಮುಂಗಡ ಪತ್ರದ ಗಾತ್ರವನ್ನು ಒಂದು ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಿಸುವಂಥದ್ದು ನಮ್ಮ ಸರ್ಕಾರದ ಗುರಿಯಾಗಿದೆ, ಈ ಗುರಿಯನ್ನು ತಲುಪುವುದಕ್ಕೆ ಮುಂದಿನ ಮೂರು ವರ್ಷಗಲ್ಲಿ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇನೆ. ಅದರಲ್ಲಿ ಯಶಸ್ವಿಯಾಗುತ್ತೇನೆ ಎನ್ನುವ ದೃಢ ವಿಶ್ವಾಸ ನಂಬಿಕೆ ನನಗಿದೆ. ಕಾರಣ ನಮ್ಮ ರಾಜ್ಯದಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿ ಸುವುದಕ್ಕೆ ಹೇರಳವಾದ ಅವಕಾಶಗಳಿವೆ. ಇನ್ನು ನಮ್ಮ ಬಿಗಿ ನಿಲುವಿನಿಂದ ನಿಮ್ಮೆಲ್ಲರ ಸಹಕಾರದಿಂದ ನಾವು ದೃಢ ಹೆಜ್ಜೆಯನ್ನಿಟ್ಟರೆ ಆ ಗುರಿಯನ್ನು ಮುಟ್ಟಬಹುದು, ರಾಜ್ಯದ ಅಭಿವೃದ್ಧಿ ಮಾಡಬಹುದು ಎನ್ನುವ ವಿಶ್ವಾಸ ನನಗಿದೆ. ಎರಡನೆಯದು, ವಿದ್ಯುತ್ ಕ್ಷೇತ್ರಕ್ಕೆ ಅಧಿಕ ಆದ್ಯತೆ, ಈಗಾಗಲೇ ನಾವು ಈ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ ಪ್ರಕಟಿಸಿರುವಂತೆ ಆ ಎಲ್ಲಾ ಯೋಜನೆಗಳನ್ನು ನಮ್ಮ ಸರ್ಕಾರದ ಈ ಅವಧಿ ಪೂರ್ಣಗೊಳ್ಳುವುದರೊ ಳಗಾಗಿ ಅನುಷ್ಠಾನಗೊಳಿಸಲಿಕ್ಕೆ ಕ್ರಮವನ್ನು ನಿಶ್ಚಿತವಾಗಿ ತೆಗೆದುಕೊಳ್ಳುತ್ತೇವೆ. ಅಲ್ಪಾವಧಿ ಮತ್ತು ದಿರ್ಘಾವಧಿ ಎರಡೂ ರೀತಿಯ ಪ್ರಯತ್ನಗಳನ್ನು ಕೈಗೊಳ್ಳುತ್ತೇವೆ. ತತ್‌ಕ್ಷಣದ ಆದ್ಯತೆ ಎಂದರೆ, ಹಣಕಾಸಿನ ಎಷ್ಟೇ ಭಾರ

ಬಿದ್ದರೂ ಪರವಾಗಿಲ್ಲ, ಹೊರಗಿನಿಂದ ವಿದ್ಯುತ್‌ನ್ನು ಖರೀದಿಸಿ ನಾವು ಈಗೇನು ಭರವಸೆ ಕೊಟ್ಟಿದ್ದೇವೆ, ಆ ಸಮಯದಲ್ಲಾದರೂ ನಿಶ್ಚಿತವಾಗಿ ವಿದ್ಯುತ್ ಅನ್ನು ಕೊಡುವುದಕ್ಕೆ ಎಲ್ಲಾ ರೀತಿಯ ಕ್ರಮಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ನಿಮ್ಮ ಮೂಲಕ ಈ ನಾಡಿನ ಜನತೆಗೆ ಕೊಡುವುದಕ್ಕೆ ಬಯಸುತ್ತೇನೆ. ವಿದ್ಯುತ್ ಕ್ಷೇತ್ರದಲ್ಲಿ ವಿಶೇಷವಾಗಿ ನಮ್ಮ ಸರ್ಕಾರ ಪವನ ವಿದ್ಯುತ್ ಮತ್ತು ಕಿರು ಜಲ ವಿದ್ಯುತ್ ಯೋಜನೆಗಳಿಗೆ ಹೆಚ್ಚು ಗಮನ ಕೊಡಬೇಕೆಂದು ತೀರ್ಮಾನಿಸಿದ್ದೇವೆ. ಈ ರಾಜ್ಯ ಅಭಿವೃದ್ಧಿ ಪಥದಲ್ಲಿ ಹೋಗಬೇಕೆಂದರೆ, ಅಗತ್ಯವಾದಂಥ ವಿದ್ಯುತ್‌ನ ಅಗತ್ಯತೆ ಇದೆ. 70ರ ದಶಕದಲ್ಲಿ Power surplus ರಾಜ್ಯವಾಗಿದ್ದ ಕರ್ನಾಟಕ ಇಂದು ತೀವ್ರತರವಾದ ವಿದ್ಯುತ್ ಕೊರತೆಯನ್ನು ಎದುರಿಸುತ್ತಿದ್ದೇವೆ. ನಾನು ಅಧಿಕಾರಕ್ಕೆ ಬಂದ ದಿವಸ ಒಂದು ಮಾತನ್ನು ಹೇಳಿದ್ದೇನೆ. ನಮ್ಮ ಸರ್ಕಾರದ ಅಧಿಕಾರದ ಅವಧಿ ಪೂರ್ಣಗೊಳ್ಳುವ ವೇಳೆಗೆ ಅಂದರೆ ಈ ಐದು ವರ್ಷದ ಅವಧಿಯಲ್ಲಿ ಇನ್ನು ಮೂರು ವರ್ಷದೊಳಗೆ ವಿದ್ಯುತ್ ಜಾಲಕ್ಕೆ ಹೊಸದಾಗಿ ಕನಿಷ್ಠ ಐದು ಸಾವಿರ ಮೆ.ವ್ಯಾ. ವಿದ್ಯುತ್ ಸೇರ್ಪಡೆ ಮಾಡುವಂಥ ಮಹತ್ವಾಕಾಂಕ್ಷೆಯ ಮಾತುಗಳನ್ನು ಏನು ಹೇಳಿದ್ದೇನೆ, ಅದನ್ನು ನಿಶ್ಚಿತವಾಗಿ ಕಾರ್ಯರೂಪಕ್ಕೆ ತರುತ್ತೇವೆ.

2008-09ನೇ ಸಾಲಿನಲ್ಲಿ 1252 ಮೆ.ವ್ಯಾ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೆಚ್ಚಾಗಿದೆ. 2009-10ನೇ ಸಾಲಿನಲ್ಲಿ ಸುಮಾರು 1300 ಮೆ.ವ್ಯಾ. ಉತ್ಪಾದನೆ ಸಾಮರ್ಥ್ಯ ಹೆಚ್ಚಿಸುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ವಿದ್ಯುತ್ ಕೊರತೆ ನೀಗಿಸುವುದಕ್ಕೆ ತಕ್ಷಣದ ಕ್ರಮವಾಗಿ ಈ ತಿಂಗಳಿಂದ 1000 ಮೆ.ವ್ಯಾ. ವಿದ್ಯುತ್ ಅನ್ನು ಕೊಂಡುಕೊಳ್ಳಲಾಗುತ್ತಿದೆ. ಬೆಂಗಳೂರು ನಗರಕ್ಕೆ ಕನಿಷ್ಟ 23 ಗಂಟೆ, ಇತರೇ ನಗರಗಳಿಗೆ 22 ಗಂಟೆ ಮತ್ತೆ ಗ್ರಾಮೀಣ ಪ್ರದೇಶದಲ್ಲಿ ತಲಾ 6 ಗಂಟೆ three phase ನಲ್ಲಿ ಮತ್ತು 6 ಗಂಟೆ Single Phase ನಲ್ಲಿ ವಿದ್ಯುತ್ ಸರಬರಾಜು ಮಾಡುವುದಕ್ಕೆ ಈಗಾಗಲೇ ಸಮಯವನ್ನು ನಿಗದಿ ಮಾಡಿ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಮಾನ್ಯ ಶಾಸಕರೂ ಸಹ ಯಾವುದೇ ಸಂದರ್ಭದಲ್ಲಿ ನಮ್ಮ ಸಂಪರ್ಕ ಮಾಡಬಹುದು. ಈಗ ಹೇಳಿರುವ ಈ ಅವಧಿಯಲ್ಲಿ ವಿದ್ಯುತ್ ಅನ್ನು ಕೊಡುವುದಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ಹಾಗೆ ಕಟ್ಟೆಚ್ಚರ ವಹಿಸುವುದರ ಬಗ್ಗೆ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂಬ ಭರವಸೆಯನ್ನು ಈ ಮನೆಯಲ್ಲಿ

ನಾನು ಕೊಡುತ್ತೇನೆ. ಕಳೆದ ನಾಲ್ಕಾರು ದಿವಸಗಳಿಂದ ಕುಡಿಯುವ ನೀರಿನ ಬಗ್ಗೆ ಮತ್ತು ವಿದ್ಯುತ್ ಅಭಾವದ ಬಗ್ಗೆ ಒಂದಲ್ಲೊಂದು ರೀತಿಯಲ್ಲಿ ಪ್ರತಿಯೊಬ್ಬ ಶಾಸಕರೂ ತಮ್ಮ ಕಳಕಳಿ ಮತ್ತು ನೋವನ್ನು ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹ ದೂರದೃಷ್ಟಿಯ ಕೊರತೆಯಿಂದ ನಮಗೆ ಅಗತ್ಯವಾಗಿರುವ ವಿದ್ಯುತ್‌ನ್ನು ಉತ್ಪಾದನೆ ಮಾಡಿಕೊಳ್ಳಲಿಲ್ಲ. ಅಗತ್ಯ ಇರತಕ್ಕಂಥ ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣ ಮಾಡಲಿಲ್ಲವೆಂಬ ಆತಂಕ, ನೋವು ನನ್ನನ್ನೂ ಸಹ ಕಾಡಿಸುತ್ತಿದೆ. ಆದರೆ, ನಮ್ಮ ಸರ್ಕಾರ ಬರುವ ದಿವಸಗಳಲ್ಲಿ ವಿದ್ಯುತ್ ಉತ್ಪಾದನೆ ಜೊತೆಗೆ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚು ಗಮನ ಹರಿಸುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಸ್ವಾತಂತ್ರ್ಯ ನಂತರ ಅಂದರೆ ಆರು ದಶಕಗಳಲ್ಲಿ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ ಕೂಡ ಕಾಲಕಾಲಕ್ಕೆ ಬಂದಂಥ ಸರ್ಕಾರಗಳು ಎಷ್ಟೇ ಪ್ರಯತ್ನ ಮಾಡಿದರೂ ಸಹ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸುವುದಕ್ಕೆ ಸಾಧ್ಯವಾಗಲಿಲ್ಲ. ಕುಡಿಯುವ ನೀರಿನ ಯೋಜನೆಗಳಿಗೆ ಸಾಕಷ್ಟು ಹಣ ವೆಚ್ಚವಾಗಿದ್ದರೂ ಕೂಡ ನಿರೀಕ್ಷಿತವಾದಂತ ಒಂದು ಫಲ ದೊರಕಿರಲಿಲ್ಲ. ಆದ್ದರಿಂದ, ಕುಡಿಯುವ ನೀರಿನ ಯೋಜನೆ ಮೇಲೆ ಮಾಡುವ ಹಣಕಾಸಿನ ವೆಚ್ಚದಲ್ಲಿ ಒಂದು ಗರಿಷ್ಠ ಪ್ರಯೋಜನ ಪಡೆದು ಕಾಲಬದ್ಧವಾಗಿ ಯೋಜನೆಗಳನ್ನು ಪೂರ್ಣ ಮಾಡುವುದಕ್ಕೆ ಪ್ರಥಮ ಆದ್ಯತೆಯನ್ನು ನಮ್ಮ ಸರ್ಕಾರ ಕೊಡುತ್ತದೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಿದ್ದೇನೆ. ನಾನು ಒಬ್ಬ ರೈತನ ಮಗನಾಗಿದ್ದೇನೆ. ಮತ್ತೆ ಇಲ್ಲಿ ರೈತರ ಪ್ರತಿನಿಧಿಯಾಗಿ ಹಳ್ಳಿಯಿಂದ ಬಂದಿರುವಂಥ ಬಹಳಷ್ಟು ಜನ ಪ್ರತಿನಿಧಿಗಳು ಇಲ್ಲಿದ್ದೇವೆ. ನೀರಿನ ಅಗತ್ಯತೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಪೂರೈಸುವುದಕ್ಕೆ ಈ ಪಾರಂಪರಿಕ ಕೆರೆಗಳ ಪುನರುಜ್ಜೀವನ ಮತ್ತು ಭೂಮಿ ಮೇಲಿನ ಜಲ ಮೂಲಗಳ ಸಂರಕ್ಷಣೆಗೆ ಹೆಚ್ಚು ಒತ್ತನ್ನು ನೀಡಬೇಕಾಗಿದೆ. ನಿನ್ನೆ ಸಾಯಂಕಾಲ ಕೋಲಾರ ಜಿಲ್ಲೆಯವರ ಹತ್ತಿರ ನಾನು ಮಾತನಾಡಿದೆ. ನಮ್ಮ ಅಧಿಕಾರಿಗಳು ಇದನ್ನು ಗಮನಿಸಬೇಕು. ಮುಖ್ಯ ಕಾರ್ಯದರ್ಶಿಯವರೂ ಕೂಡ ಇಲ್ಲಿಯೇ ಇದ್ದಾರೆ. ಕೋಲಾರದಲ್ಲಿ ಕುಡಿಯುವ ನೀರಿನ ಒಂದು ಯೋಜನೆ ಮಂಜೂರಾಗಿದೆ. ಸುಮಾರು 60 ರಿಂದ 70 ಕೋಟಿ ರೂಪಾಯಿ ಖರ್ಚು ಮಾಡಿ ಅಲ್ಲಿ ಪೈಪ್ ಲೈನ್ ಹಾಕಿದ್ದಾರೆ. ಅದರ, ಪ್ರಾಜೆಕ್ಟ್‌ಗೆ ಅಗತ್ಯವಾದಂಥ ಭೂಮಿಯನ್ನು ಪಡೆದು ಅದನ್ನು ಜಾರಿಗೆ ತರಬೇಕಾಗಿದೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾಲೂರು ತಾಲ್ಲೂಕಿನ 184 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ಪೈಪ್‌ಲೈನ್ ಮಾಡುತ್ತಿದ್ದೇವೆ. ಆದರೆ, ಇದು ಏನಾಗಿದೆ ಎಂದರೆ, "ಕೂಸು ಹುಟ್ಟುವುದಕ್ಕಿಂತ ಮುಂಚಿತವಾಗಿಯೇ ಕುಲಾವಿ ಹೊಲಿಸುವ ರೀತಿಯಲ್ಲಿದೆ."

ಡಾ: ಎಂ.ಸಿ.ಸುಧಾಕರ್ ರಾವ್ : ಮಾನ್ಯ ಮುಖ್ಯಮಂತ್ರಿಯವರೆ, ಅದು ಯರಗೋಡು ಯೋಜನೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯರಗೋಡು ನೀರಾವರಿ ಯೋಜನೆಗೆ ಆ ಪ್ರಾಜೆಕ್ಟ್‌ಗೆ ಭೂಮಿಯನ್ನು ತೆಗೆದುಕೊಂಡು ಅಲ್ಲಿ ಕೆಲಸ ಪ್ರಾರಂಭ ಮಾಡಿ ಅದು ಅರ್ಧಕ್ಕೆ ಬಂದ ಮೇಲೆ ಪೈಪ್‌ಲೈನ್ ಹಾಕಬೇಕಾಗಿತ್ತು. ಆದರೆ, ಪೈಪ್‌ಲೈನ್ ಅನ್ನು ಮೊದಲೇ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ನಮ್ಮ ಆದ್ಯತೆ ಮತ್ತು ನಮ್ಮ ಗಮನ ಏನೆಂಬುದರ ಬಗ್ಗೆ ಈ ಒಂದು ಉದಾಹರಣೆ ಕೊಟ್ಟಿದ್ದೇನಷ್ಟೆ. ನಾನು ಅಂಕಿ–ಅಂಶಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ಕೆರೆಗಳ ಹೂಳು ತೆಗೆಯುವುದಕ್ಕೆ ಬೇರೆ ಬೇರೆ ಯೋಜನೆಗಳಲ್ಲಿ ಮಾಡಿರುವಂಥ ಖರ್ಚು ವೆಚ್ಚಗಳ ಅಂಕಿ ಅಂಶಗಳನ್ನು ನಾವು ಹೇಳಿದರೆ ಖಂಡಿತಾ ಆಘಾತವಾಗುತ್ತದೆ. ಆದರೆ, ಕೆರೆಗಳಲ್ಲಿ ಹೂಳು ತೆಗೆದಿಲ್ಲವೆಂಬ ಮಾತು ಮತ್ತು ಅಂತರ್ಜಲ ಕುಸಿದು ಹೋಗುತ್ತಿದೆ ಎಂಬ ಮಾತು ಇವತ್ತೂ ಸಹ ಕೇಳಿ ಬರುತ್ತದೆ. ಕುಡಿಯುವ ನೀರಿಗೆ ಅಲ್ಲಿ ವಿಶೇಷವಾದ ಸಮಸ್ಯೆ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ನಾವು ಏನು ಖರ್ಚು ಮಾಡಿದ್ದೇವೆಯೋ ಅದಕ್ಕೆ ತಕ್ಕಂತೆ ನಿರೀಕ್ಷೆ ಮಾಡಿದಷ್ಟು ಫಲ ಕೊಡುತ್ತಿಲ್ಲ ಮತ್ತು ಗಮನ ಕೊಡುವುದಕ್ಕೆ ಆಗುತ್ತಿಲ್ಲ ಎನ್ನುವುದಕ್ಕೋಸ್ಕರ ಈ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ನನ್ನ ಸರ್ಕಾರ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಬೇಕೆಂಬುದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂಬ ಸಂಕಲ್ಪ ಮಾಡಿದೆ. 11ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ GSDP ಬೆಳವಣಿಗೆ ದರವನ್ನು ಶೇಕಡ 9ರಷ್ಟಕ್ಕೆ ಹೆಚ್ಚಿಸುವಂಥದ್ದು ನಮ್ಮ ಗುರಿಯಾಗಿದೆ. ಇದನ್ನು ತಲುಪಬೇಕಾದರೆ, ಅತ್ಯಂತ ಪ್ರಮುಖ ಮತ್ತು ಪ್ರಾಥಮಿಕ ವಲಯವಾದಂಥ ಕೃಷಿ ಕ್ಷೇತ್ರದಲ್ಲಿ ಕನಿಷ್ಠ ಶೇಕಡ 4 ರಷ್ಟಾದರೂ ಬೆಳವಣಿಗೆಯನ್ನು ಸಾಧಿಸಲೇಬೇಕಾಗಿದೆ. ಈ ಬಗ್ಗೆ ಹೆಚ್ಚಿನ ಗಮನ ಹರಿಸಲಾಗುತ್ತದೆ. ಮುಖ್ಯವಾಗಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಂಥದ್ದು ಮತ್ತು ಆಹಾರಧಾನ್ಯದ ಉತ್ಪಾದನೆಯಲ್ಲಿ

ಸ್ವಾವಲಂಬನೆ ಸಾಧಿಸುವಂಥದ್ದು ನಮ್ಮ ಆದ್ಯತೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಆಹಾರಧಾನ್ಯಗಳು ಮತ್ತು ಎಣ್ಣೆ ಬೀಜಗಳ ಉತ್ಪಾದನೆ ಆತಂಕ ತರುವಂಥ ರೀತಿಯಲ್ಲಿ ಕುಗ್ಗಿದೆ ಎಂದು ಹೇಳುವುದಕ್ಕೆ ತುಂಬಾ ನೋವಾಗುತ್ತದೆ. ಮಾನ್ಯ ಶಾಸಕ ಸ್ನೇಹಿತರೆಲ್ಲರೂ ವಿಶೇಷ ಪ್ರಯತ್ನ ಮಾಡಿದರೆ, ರೈತರಲ್ಲಿ ಒಂದು ಜಾಗೃತಿ ಮತ್ತು ವಿಶ್ವಾಸವನ್ನು ಮೂಡಿಸಿ ಸಕಾಲಕ್ಕೆ ಉತ್ತಮವಾದಂಥ ಬಿತ್ತನೆ ಬೀಜ ಕೊಟ್ಟು, ಸಾಲ ಸವಲತ್ತುಗಳ ವ್ಯವಸ್ಥೆ ಮಾಡಿ ಹೆಚ್ಚು ಉತ್ಪಾದನೆಯ ಕಡೆಗೆ ಗಮನ ಕೊಡಬೇಕಾಗಿದೆ. ಈ ಪ್ರವೃತಿಯನ್ನು ವಿಶೇಷವಾಗಿ ಆಹಾರ ಧಾನ್ಯ ಮತ್ತು ಎಣ್ಣೆ ಬೀಜಗಳ ಉತ್ಪಾದನೆ ಆತಂಕಗೊಳ್ಳುವ ರೀತಿಯಲ್ಲಿ ಕುಗ್ಗುತ್ತಿರುವುದನ್ನು ಸರಿಪಡಿಸು ವುದಕ್ಕೆ ಭೂ ಚೇತನ ಯೋಜನೆಯ ವಿಸ್ತರಣೆ ಬಗ್ಗೆ ಮಾನ್ಯ ಜಯಚಂದ್ರ ರವರು ಮಾತನಾಡುವಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರು. ನಾಂದಾರ್ ಮೊದಲಾದ ಜಲಪೂರ್ಣ ಸ್ಥಾವರಗಳ ನಿರ್ಮಾಣಕ್ಕೆ ಒತ್ತು ನೀಡಿ ಅಂತರ್ಜಲ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಆದ್ಯತೆಯನ್ನು ಕೊಡುತ್ತೇವೆ ಎಂಬ ಭರವಸೆಯನ್ನು ಈ ಸದನದಲ್ಲಿ ಹೇಳುತ್ತೇನೆ. ಇನ್ನೊಂದು ಸಮಸ್ಯೆ ನಮಗೆ ಕಾಡುತ್ತಿರುವುದು ಏನೆಂದರೆ, ಈ ಶತಮಾನದಲ್ಲಿ ಕಂಡರಿಯದ ನೆರೆಹಾವಳಿ. ನಾನು ಬಹುಶಃ 1ನೇ ಅಥವಾ 2ನೇ ತಾರೀಖಿನ ನಂತರ 8–10 ದಿವಸ ಭಾಗಕ್ಕೆ ಹೋಗಿ ಕ್ಯಾಂಪ್ ಮಾಡಬೇಕೆಂದು ಇದ್ದೇನೆ. ಆ ಭಾಗಗಳ ಜಿಲ್ಲೆಯ ಶಾಸಕರು ಮತ್ತು ಸಚಿವರೆಲ್ಲರೂ ಒಟ್ಟಾಗಿ ಸೇರಿ ಈ ಆಸರೆ ಯೋಜನೆಯಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ಎಷ್ಟು ಮನೆಗಳನ್ನು ಕಟ್ಟಬೇಕೆಂದು ಇದ್ದೇವೆಯೋ ಆ ಮನೆಗಳನ್ನು ಕಟ್ಟುವುದಕ್ಕೆ ಅಲ್ಲಿಬೇಕಾದಂಥ ಮೂಲಭೂತ ಸವಲತ್ತುಗಳನ್ನು ಒದಗಿಸುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇವೆ. ನಾನು ಈಗ ಹೇಳತಕ್ಕಂಥ ಮಾತನ್ನು ತಾವುಗಳು ಒಪ್ಪುತ್ತೀರೆಂದು ತಿಳಿದುಕೊಂಡಿದ್ದೇನೆ. ಅದೇನೆಂದರೆ, ಬಹಳ ವರ್ಷಗಳಿಂದ ಸುಮಾರು 300 ಹಳ್ಳಿಗಳಲ್ಲಿ 200 ಹಳ್ಳಿಗಳು ಒಂದಲ್ಲ ಒಂದು ಕಾರಣಕ್ಕಾಗಿ ಎರಡು–ಮೂರು ವರ್ಷಕ್ಕೊಮ್ಮೆ ನೀರಿನಿಂದ ಮುಳುಗಡೆ ಆಗುತ್ತಿತ್ತು. ಜಲಾವೃತವಾಗುತ್ತಿತ್ತು. ಬೇರೆ ಬೇರೆ ಕಾರಣಗಳಿಂದ ಅದನ್ನು ಎತ್ತರದ ಸ್ಥಳಕ್ಕೆ ಸ್ಥಳಾಂತರ ಮಾಡುವ ಚಿಂತನೆಯನ್ನು ಯಾರು ಮಾಡುವುದಕ್ಕೆ ಆಗಲಿಲ್ಲ. ಆದರೆ, ನಾವು ಇದರ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದೇವೆ. ಇದು ಕಠಿಣವಾದಂಥ ಕೆಲಸ ಎಂದು ನನಗೆ ಗೊತ್ತಿದೆ. ನಾನು ಎಲ್ಲರಂತೆ ಅಲ್ಲಿನ ಜನರಿಗೆ ಪರಿಹಾರ ಕೊಟ್ಟು ಕೈ ತೊಳೆದುಕೊಳ್ಳಬಹುದಾಗಿತ್ತು. ಆದರೆ, ಒಬ್ಬ

ರೈತ ಮಗನಾಗಿ ಅವರ ಋಣ ತೀರಿಸದಿದ್ದರೆ ದೇವರು ನನ್ನನ್ನು ಕ್ಷಮಿಸುವುದಿಲ್ಲವೆಂಬ ಅರಿವು ನನಗೆ ಇದೆ. ಆದ್ದರಿಂದ ನಿರಂತರವಾಗಿ ಪ್ರವಾಹ ಪೀಡಿತವಾಗುತ್ತಿರುವ ಗ್ರಾಮಗಳ ಸ್ಥಳಾಂತರ ಮತ್ತು ಮನೆಗಳ ನಿರ್ಮಾಣಕ್ಕೆ ಆಸರೆ ಯೋಜನೆಯಲ್ಲಿ ನಮ್ಮ ಸರ್ಕಾರ ವಿಶೇಷ ಪ್ರಯತ್ನ ಮಾಡುತ್ತಿದೆ. ಬರುವ ದಿವಸಗಳಲ್ಲಿ ಪ್ರತಿವಾರ ಪರಿಶೀಲನಾ ಸಭೆಯನ್ನು ನಡೆಸಿ ಈ ಗೃಹ ನಿಮಾಣದ ಕಾರ್ಯವನ್ನು ಚುರುಕುಗೊಳಿಸುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಿದ್ದೇನೆ. ಈ ರೀತಿಯಾದ ಮಳೆ ಪ್ರವಾಹಕ್ಕೆ 15 ಜಿಲ್ಲೆಗಳು ಪೀಡಿತವಾಗಿ ಸುಮಾರು 18,568 ಕೋಟಿಗಿಂತ ಅಧಿಕ ನಷ್ಟ ಉಂಟಾಯಿತು. ಅನಿರೀಕ್ಷಿತವಾಗಿ ಈ ವಿಪತ್ತಿನಿಂದ ಕಂಗಾಲಾದ ಸಂತ್ರಸ್ತರ ರಕ್ಷಣೆ ಮತ್ತು ಪರಿಹಾರ ಒದಗಿಸುವುದಕ್ಕೆ ಹೆಚ್ಚು ಒತ್ತನ್ನು ದೇವರು ಮೆಚ್ಚುವ ರೀತಿಯಲ್ಲಿ ನನ್ನ ಆತ್ಮ ಸಾಕ್ಷಿಯ ಅನುಗುಣವಾಗಿ ಮಾಡಿದ್ದೇನೆ.

ಸರ್ಕಾರದ ಸಹಕಾರದೊಂದಿಗೆ ನಡೆಸಿದ್ದೇವೆ. ನಾಳೆ 21ನೇ ತಾರೀಖು ಆ ನೆರೆ ಸಂತ್ರಸ್ಥರ ಜನರು ನೆನಪು ಇಡುವಂತಹ ಒಂದು ಐತಿಹಾಸಿಕ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಈ ನಿರಂತರ ನೆರೆಪೀಡಿತವಾಗಿರುವಂತಹ 305 ಗ್ರಾಮಗಳನ್ನು ಶಾಶ್ವತವಾಗಿ ಸ್ಥಳಾಂತರವನ್ನು ಮಾಡಿ 63,000 ಕುಟುಂಬಗಳಿಗೆ ಇವತ್ತು ಮನೆಗಳನ್ನು ನಿರ್ಮಿಸಿಕೊಡುವ ಬಗ್ಗೆ ಸುಮಾರು 55 ಹಳ್ಳಿಗಳಲ್ಲಿ 18,000 ಮನೆಗಳ ನಿರ್ಮಾಣ ಕಾರ್ಯ ದಾನಿಗಳಿಂದ ಪ್ರಾರಂಭವಾಗಿದೆ. ಈ ತಿಂಗಳು 21ನೇ ತಾರೀಖು ನಾನು ಮತ್ತು ನಮ್ಮ ವಸತಿ ಸಚಿವರು ಒಂದೇ ದಿವಸ ಈ 50 ಹಳ್ಳಿಗಳಲ್ಲೂ ಸಹ ಮನೆಗಳನ್ನು ಕಟ್ಟುವಂತಹ ಕಾರ್ಯಕ್ಕೆ ನಾವು ಚಾಲನೆಯನ್ನು ನೀಡುತ್ತೇವೆ. ಆಯಾಯ ಹಳ್ಳಿಗಳಲ್ಲಿ ಅಲ್ಲಿಯ ಪ್ರಮುಖರು ನಿಂತು ಆ ಕೆಲಸವು ಪ್ರಾರಂಭವಾಗುತ್ತಿದೆ. 45 ಹಳ್ಳಿಗಳಲ್ಲಿ ವಸತಿ ನಿಗಮದಿಂದ 5 ಹಳ್ಳಿಗಳಲ್ಲಿ ಕಟ್ಟಾ ಪ್ರತಿಷ್ಠಾನದ ಮೂಲಕ ಮನೆಗಳನ್ನು ಕಟ್ಟಬೇಕೆಂದು ಮಾಡಿದ್ದೇವೆ. ಇದನ್ನು ನಾನು ತಮ್ಮ ಗಮನಕ್ಕೆ ತರಬೇಕಾದುದು ಎಂದರೆ ನಾವು ಒಂದು ಮನೆಗೆ ಒಂದು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೇವೆ. ಆದರೆ ಅಲ್ಲಿ foundation ತೆಗೆಯುವುದಕ್ಕೆ ಹೊರಟ ಮೇಲೆ ಅದರ ವೆಚ್ಚ ಇನ್ನು 20 ರಿಂದ 25 ಸಾವಿರ ರೂಪಾಯಿಗಳು ಜಾಸ್ತಿಯಾಯಿತು. ನಾವುಗಳು ದಾನಿಗಳಲ್ಲಿ ವಿನಂತಿಯನ್ನು ಮಾಡಿ ಬೇರೆ ಯಾವುದೇ ರೀತಿಯಲ್ಲಾದರೂ ಹಣವನ್ನು ತುಂಬಿ ಒಂದು ಮನೆಗೆ ಒಂದುಕಾಲು ಲಕ್ಷ ವೆಚ್ಚವಾದರೂ

ಪರವಾಗಿಲ್ಲ. ಕೆಲವು ಕಡೆಯಲ್ಲಿ ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮನೆಯನ್ನು ಕಟ್ಟಬಹುದು. ಭೂಮಿಯ ಸ್ಥಿತಿಯು ಸರಿಯಿಲ್ಲದೆ ಇನ್ನೂ ಕೆಲವು ಕಡೆಗಳಲ್ಲಿ ಆಗುತ್ತಿಲ್ಲ. ಉತ್ತಮವಾದಂತಹ ಗಟ್ಟಿ ಮನೆಗಳನ್ನು ಕಟ್ಟಬೇಕೆಂದು ನಾವು ನಿರ್ಧಾರವನ್ನು ಮಾಡಿದ್ದೇವೆ. ಬಹುಶಃ ಜುಲೈ ತಿಂಗಳೊಳಗೆ ಕನಿಷ್ಠ 60 ರಿಂದ 75 ಸಾವಿರ ಮನೆಗಳನ್ನು ಪೂರ್ಣ ಮಾಡುವುದಕ್ಕೆ ಮತ್ತೆ ಈ ನೂತನ ಗ್ರಾಮಗಳನ್ನು ರಸ್ತೆ ಮತ್ತು ಕುಡಿಯುವ ನೀರು, ವಿದ್ಯುತ್, ಶಾಲಾ ಕೊಠಡಿಗಳು, ಇಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಈಗಿನಿಂದಲೇ ಮನೆಗಳನ್ನು ಕಟ್ಟುವುದರ ಜೊತೆಗೆ ಆ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ, ಇದಕ್ಕೆ ಹೆಚ್ಚು ಒತ್ತನ್ನು ನಾವು ಕೊಡುತ್ತೇವೆ, ಆಯಾ ಭಾಗದ ನಮ್ಮ ಶಾಸಕರು ಸ್ವಲ್ಪ ಅಲ್ಲಿಗೆ ಹೋಗಿ ಬಂದು ಯಾರು ಹೊರಗಡೆಯಿಂದ ಗುತ್ತಿಗೆದಾರರು ಬಂದಿರುತ್ತಾರೆ. ಅವರಿಗೆ ಯಾರು ಪರಿಚಯವಿರುವುದಿಲ್ಲ. Raw-materials ಮತ್ತೊಂದು ಮಗದೊಂದು, ಇದಕ್ಕೆ ಜಿಲ್ಲಾಡಳಿತವು ಸಹಕಾರವನ್ನು ಕೊಡುತ್ತಿದೆ. ನಿಮ್ಮ ಸಹಕಾರವೂ ಇದ್ದರೆ ಇನ್ನು ಒಳ್ಳೆಯ ರೀತಿಯಲ್ಲಿ ಆದಷ್ಟು ಬೇಗನೆ ಮನೆಗಳನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಭಾವನೆ. ಈಗಾಗಲೇ ನಾನು ಅನೇಕ ಬಾರಿ ಹೇಳಿದ್ದೇನೆ, ಆ ಪ್ರಯತ್ನದಲ್ಲಿ ನಾವು ಯಾವುದೇ ಕಾರಣಕ್ಕೂ ಹಿಂದೆ ಬೀಳುವುದಿಲ್ಲ. ಒಂದು ಸಂತ್ರಸ್ತರಿಗೆ ಪರಿಹಾರ ಮತ್ತು ಪುನರ್ ವಸತಿ ಕಾರ್ಯಗಳಿಗೆ ಕೇಂದ್ರ ಸರ್ಕಾರದ ನೆರವು ಸೇರಿ ರಾಜ್ಯ ಸರ್ಕಾರವು 1,878 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 1500 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವು ವೆಚ್ಚವಾಗಿದೆ. ಆದರೆ ಬಹಳ ಮುಖ್ಯವಾಗಿ ಒಟ್ಟು ನಷ್ಟವಾಗಿರುವ 18568 ಕೋಟಿ ರೂಪಾಯಿಗಳ ಅಂದಾಜಿನಲ್ಲಿ 7047.34 ಕೋಟಿ ರೂಪಾಯಿಗಳ ಆರ್ಥಿಕ ನೆರವು ಆ ಗೈಡ್ ಲೈನ್ಸ್ ಪ್ರಕಾರ ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ. ಬಹುಶಃ ಈ ಹಣವು ಸಕಾಲದಲ್ಲಿ ದೊರೆತರೆ ಮೊನ್ನೆ ತಾನೆ ಅಂದರೆ ಒಂದು ವಾರದ ಹಿಂದೆ ಗೃಹಸಚಿವರನ್ನು ಭೇಟಿ ಮಾಡಿದ್ದೇನೆ ಆದರೆ ಪ್ರಧಾನಮಂತ್ರಿಯವರನ್ನು ಭೇಟಿ ಮಾಡುವುದಕ್ಕಾಗಲಿಲ್ಲ. ಅವರೂ ಸಹಾ ಭರವಸೆಯನ್ನು ಕೊಟ್ಟಿದ್ದಾರೆ. ಆಗ ನಾವು ನಿಶ್ಚಿತವಾಗಿ ನಮ್ಮ ಗುರಿಯನ್ನು ತಲುಪುವುದಕ್ಕೆ ಮೂಲಭೂತ ಸವಲತ್ತನ್ನು ಒದಗಿಸುವುದಕ್ಕೆ ಅನುಕೂಲವಾಗಬಹುದು ಎಂದು ನನ್ನ ಭಾವನೆಯಾಗಿದೆ. ಇನ್ನು ನಮ್ಮ ಕಣ್ಮುಂದೆ ಇರುವಂತಹದ್ದು ಬಹಳ ಪ್ರಮುಖವಾದುದು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು

ಮಾಡುವುದು. ಈ ವರ್ಷದ ಜೂನ್ 3 ಮತ್ತು 4ನೇ ತಾರೀಕಿನಂದು ನಡೆಯುವಂತಹ ಈ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಯಶಸ್ವಿಗೊಳಿಸುವುದಕ್ಕೆ ನಮ್ಮ ಸರ್ಕಾರವು ಎಲ್ಲಾ ಪ್ರಯತ್ನವನ್ನು ಈಗಾಗಲೇ ಮಾಡುತ್ತಿದೆ. ಇದಕ್ಕೆ ಬದ್ಧತೆಯುಳ್ಳಂತಹ ಒಂದು ಅಧಿಕಾರಿಗಳ ಒಂದು ತಂಡವನ್ನು ರಚಿಸಿದ್ದೇವೆ. ರಾಜ್ಯದ ಬಡತನ ನಿವಾರಣೆ ಮತ್ತು ನಿರುದ್ಯೋಗ ನಿವಾರಣೆಗೆ ಇದರಿಂದ ಸಹಾಯವಾಗುತ್ತದೆಂದು, ಅಧಿಕಸಂಖ್ಯೆಯಲ್ಲಿ ಉದ್ಯೋಗವನ್ನು ಸೃಜಿಸುವಂತಹ labour intensive ಉದ್ದಿಮೆಗಳನ್ನು ಸ್ಥಾಪಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತೇವೆ. ರಾಜ್ಯದಲ್ಲಿ ಬಹಳ ದೊಡ್ಡಪ್ರಮಾಣದಲ್ಲಿ ವಿದ್ಯಾವಂತ ಮತ್ತು ಅವಿದ್ಯಾವಂತ ಯುವಕರು ಲಕ್ಷಾಂತರ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಆ ಯುವ ಸಮೂಹಕ್ಕೆ ಸಾಕಷ್ಟು ಉದ್ಯೋಗವನ್ನು ಸೃಷ್ಟಿ ಮಾಡುವಂತಹದ್ದು ನನ್ನ ಸರ್ಕಾರದ ಒಂದು ಆದ್ಯತೆಯಾಗಿದೆ. ಅದಕ್ಕಾಗಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಕೈಗಾರಿಕಾ ಕಂಪನಿಗಳನ್ನು ನಮ್ಮ ರಾಜ್ಯದಲ್ಲಿ ಬಂಡವಾಳವನ್ನು ಹೂಡುವುದಕ್ಕೆ ಆಹ್ವಾನಿಸಿದ್ದೇವೆ. ನಾವು ಮತ್ತು ನೀವುಗಳು ಆಶ್ಚರ್ಯಪಡು ವಂತಹ ರೀತಿಯಲ್ಲಿ ಒಳ್ಳೆಯ response ಇದೆ. ಜೂನ್ 3 ಮತ್ತು 4 ರಂದು ಈ ವಿಶ್ವಬಂಡವಾಳ ಹೂಡಿಕದಾರರ ಸಮಾವೇಶ ಯಶಸ್ವಿಯಾಗುತ್ತದೆ. ಅದಕ್ಕೆ ಬೇಕಾದಂತಹ ಈ ಬಂಡವಾಳ ಹೂಡಿಕೆದಾರರಿಗೆ ಒಂದು ನಂಬಿಕೆಯನ್ನು ಮೂಡಿಸುವುದಕ್ಕೆ ಆ ತ್ವರಿತ ಅವರು ಅಪೇಕ್ಷಿಪಡುವಂತಹ ಯೋಜನೆಗಳನ್ನು ಜಾರಿಗೆ ತರುವುದಕ್ಕೆ land bank ಸೃಷ್ಟಿಸುವಂತಹ ಉದ್ದೇಶ ಕಂಪನಿಗಳಿಗೆ ಭೂಮಿ, ನೀರು, ವಿದ್ಯುತ್ ನೀಡುವಂತಹ ಒಡಂಬಡಿಕೆ ಸಹಿಯನ್ನು ಆ ದಿನ ಮಾಡುತ್ತಿದ್ದೇವೆ. ಈಗಾಗಲೇ ಅದು ಪ್ರಾರಂಭವಾಗಿದೆ. ನಮ್ಮ ಸರ್ಕಾರವು ನಾನು ಈಗಾಗಲೇ ಹೇಳಿದಂತೆ ಕೈಗಾರಿಕೆಯ ಅಭಿವೃದ್ಧಿಗಾಗಿ ವಿಶೇಷವಾ ದಂತಹ ಗಮನವನ್ನು ಕೊಟ್ಟಿದ್ದೇವೆ. ನಮ್ಮ ಸರ್ಕಾರವು ನೂತನವಾದಂತಹ ಕೈಗಾರಿಕಾ ನೀತಿಯನ್ನು, ನೂತನವಾದಂತಹ ಗಣಿ ನೀತಿಯನ್ನು ರೂಪಿಸಿದ್ದೇವೆ. 2014 ರೊಳಗಡೆ 3 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯಿಂದ ಕನಿಷ್ಠ 10 ಲಕ್ಷ ಮಂದಿಗೆ ಉದ್ಯೋಗವನ್ನು ಸೃಷ್ಟಿಸುವಂತಹ ಗುರಿಯೊಂದಿಗೆ ಕೆಲಸವನ್ನು ಮಾಡುತ್ತಿದ್ದೇವೆ. 2010ರ ಜನವರಿ ತಿಂಗಳ ಒಂದರಲ್ಲಿಯೇ 1.38 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ 38 ಯೋಜನೆಗಳಿಗೆ ಅನುಮೋದನೆಯನ್ನು

ನೀಡಿದ್ದೇವೆ. ಜೂನ್ ತಿಂಗಳಲ್ಲಿ ನಡೆಯುವಂತಹ ವಿಶ್ವಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬಹಳ ದೊಡ್ಡಪ್ರಮಾಣದಲ್ಲಿ ಉದ್ದಿಮೆಗಳು ಬರುತ್ತದೆ ಎನ್ನುವಂತಹ ಅಪೇಕ್ಷೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ನಮ್ಮ ಜೊತೆಯಲ್ಲಿ ಸಂಪರ್ಕದಲ್ಲಿದ್ದಾರೆ, ಇನ್ನೊಂದು ವಿಷಯವೆಂದರೆ ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವಂತಹದ್ದು ಈ ವಿಶ್ವ ಕನ್ನಡ ಸಮ್ಮೇಳನ ಬೆಳಗಾವಿಯಲ್ಲಿ ನಡೆಸಲು ಉದ್ದೇಶಿಸಿರುವಂತಹ ಈ ಸಮ್ಮೇಳನವು ಹಲವು ಬಾರಿ ಮುಂದೆ ಹೋಗಿ ನಿರಾಶೆಯಾಗಿದೆ. ಈ ವರ್ಷ ಈ ವಿಶ್ವ ಕನ್ನಡ ಸಮ್ಮೇಳನವನ್ನು ಡಿಸೆಂಬರ್ ತಿಂಗಳಿನಲ್ಲಿ ಒಂದು ದಿನಾಂಕವನ್ನು ಸಧ್ಯದಲ್ಲಿ ನಿರ್ಧಾರ ಮಾಡಿ ಅದಕ್ಕೆ ಬೇಕಾದಂತಹ ಎಲ್ಲಾ ಪೂರ್ವಭಾವಿ ಸಿದ್ಧತೆಯನ್ನು ಮಾಡಿ ಆ ಕಾರ್ಯ ಕ್ರಮವನ್ನು ಯಶಸ್ವಿ ಮಾಡುತ್ತೇವೆ. ಹೋದ ವರ್ಷ ಭೀಕರವಾದಂತಹ ಮಳೆಯಾದಂತಹ ಸಂದರ್ಭದಲ್ಲಿ ಈ ತರಹದ ಕಾರ್ಯಕ್ರಮವನ್ನು ಮಾಡುವುದು ಸರಿಯಲ್ಲವೆಂದು ಅದನ್ನು ಮುಂದಕ್ಕೆ ಹಾಕಬೇಕಾಗಿ ಬಂತು. ಈಗ ನಾನು ಪಟ್ಟಿ ಮಾಡಿರುವಂತಹ 7–8 ಪ್ರಧಾನ ಗುರಿಗಳನ್ನು ತಲುವುದಕ್ಕೆ ನಮ್ಮ ಸದನದ ಎಲ್ಲಾ ಸದಸ್ಯರ ನಾಡಿನ ನರ ಸಹಕಾರ ಮತ್ತು ಸಹಯೋಗವನ್ನು ನಾನು ಅಪೇಕ್ಷೆ ಪಡುತ್ತೇನೆ. ಈಗ ಬಜೆಟ್ ಮೇಲಿನ ಒಂದು ಚರ್ಚೆಗೆ ಸಂಬಂಧಿಸಿದಂತೆ ಮುಖ್ಯ ವಿಚಾರಗಳಿಗೆ ಪ್ರತಿಕ್ರಿಯೆ ನೀಡುವುದಕ್ಕೆ ಮುಂಚೆ ಒಂದು ಗಹನವಾದಂತಹ ವಿಚಾರ ಇವತ್ತು ಸದನದಲ್ಲಿ ಚರ್ಚೆಯಾಯಿತು. ನಾನು ಇಲ್ಲಿಂದ ಮನೆಗೆ ಹೋದೆ, ಒಂದು 10 ನಿಮಿಷ ಟಿ.ವಿ.ಯನ್ನು ಹಾಕಿದೆ. ನೈಸ್ ವಿಷಯದ ಬಗ್ಗೆ ಟಿ.ವಿ. ಯಲ್ಲಿ ಬರುತ್ತಿರುವಂತಹ ಮಾಹಿತಿಗಳು, ಸಿದ್ದರಾಮಣ್ಣನವರು ನನ್ನನ್ನು ಕ್ಷಮೆ ಕೇಳಿ ಎಂದು, ನಾನೇಕೆ ಕ್ಷಮೆಯನ್ನು ಕೇಳಬೇಕೆಂದು ನಾನು ಹೇಳುತ್ತಿರುವುದು, ನೀವು ಜವಾಬ್ದಾರರು ಎಂದು ನಾನು ಅವರ ಮೇಲೆ ಬೊಟ್ಟು ಮಾಡುತ್ತಿರುವುದು, ಅವರು ನೀವು ಜವಾಬ್ದಾರರಿಂದ ಬೊಟ್ಟು ಮಾಡುತ್ತಿರುವುದು ಈ ರೀತಿಯಾಗಿ ಜನರು ಯಾವುದನ್ನು ನೋಡಬಾರದು, ಅದನ್ನು ನೋಡುವಂತಹ ಒಂದು ಪರಿಸ್ಥಿತಿಗಳು ನಡೆಯುತ್ತಿದೆ. ಅದಕ್ಕೋಸ್ಕರ Bangalore-Mysore Infrastructure ಯೋಜನೆ ಈ ನೈಸ್ ಬಗ್ಗೆ ದಿನನಿತ್ಯ ಏನು ಚರ್ಚೆಯಾಗುತ್ತಿದೆ, ಈ ವಿಷಯವನ್ನು ಅನಗತ್ಯವಾಗಿ ಸರ್ಕಾರದ ಮೇಲೆ ಗೂಬೆಯನ್ನು ಕೂರಿಸುವಂತಹ ಪ್ರಯತ್ನವು ನಡೆಯುತ್ತಿದೆ. ಇದು ಕೊನೆಯಾಗಬೇಕಾಗಿದೆ. ಇದು ಈಗಾಗಲೇ ಚರ್ಚೆಯಾಗಿದೆ, ಅದನ್ನು ನಾನು

ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಬಹುಶಃ ಈ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ, ಇದರ ಬಗ್ಗೆ ಸತ್ಯಾಸತ್ಯತೆಗಳು ಜನರಿಗೆ ಮನವರಿಕೆಯಾಗಬೇಕು. ನಾನು ಈ ಮನೆಯ ಮೂಲಕ ಮಾಧ್ಯಮದ ಸ್ನೇಹಿತರಲ್ಲೂ ವಿನಂತಿಯನ್ನು ಮಾಡುತ್ತೇನೆ. ವಾಸ್ತವಿಕ ಸತ್ಯಸಂಗತಿಗಳನ್ನು ಜನತೆಗೆ ಈಗಾಗಲೇ ಎಳೆಎಳೆಯಾಗಿ ಬಿಡಿಸಿ ಮಾಧ್ಯಮದ ಸ್ನೇಹಿತರು ತಿಳಿಸಿದ್ದಾರೆ. ಆದರೆ ಏಕೋ ಏನೋ ಎಲ್ಲರನ್ನು ಎಲ್ಲರೂ ಸಂಶಯದಿಂದ ನೋಡುವಂತಹ ಒಂದು ವಿಚಿತ್ರವಾದಂತಹ ಸನ್ನಿವೇಶಗಳು ಬಂದಿದೆ. ಇದು ಯಾರಿಗೂ ಆ ಕಡೆ ಮತ್ತು ಈ ಕಡೆ ಕುಳಿತಿರುವವರಿಗೆ ಗೌರವವನ್ನು ತರುವಂತಹದ್ದಲ್ಲ. ನೈಸ್ ಯೋಜನೆಯ ಬಗ್ಗೆ ನಮ್ಮ ಸರ್ಕಾರದ ನಿಲುವು ಬಹಳ ಸ್ಪಷ್ಟವಿದೆ. Framework agreement ಪ್ರಕಾರ ಎಷ್ಟು ಎಕರೆ ಭೂಮಿಯನ್ನು ಈ ಯೋಜನೆಗೆ ನೀಡಬೇಕೋ 20193 ಎಕರೆ ಜಮೀನು ಅದನ್ನು ಬಿಟ್ಟು ಒಂದು ಇಂಚು ಕೂಡ ಹೆಚ್ಚು ಭೂಮಿಯನ್ನು ಕೊಡುವಂತಹ ಪ್ರಶ್ನೆ ಬರುವುದಿಲ್ಲ. ನಾಳೆ ಈ ಬಗ್ಗೆ. . . . .

ಶ್ರೀ ಹೆಚ್.ಡಿ.ರೇವಣ್ಣ : ನಾಳೆ ಈ ಬಗ್ಗೆ discussion ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : Oh, Yes.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಡಿ.ರೇವಣ್ಣ : ಅದರ ಬಗ್ಗೆ ಮಾತನಾಡುವುದು ಬೇಡವೆಂದು ಸದನದಲ್ಲಿ ಇವತ್ತು ಅಧ್ಯಕ್ಷರು ಹೇಳಿದ್ದಾರೆ. ನಾಳೆ ವಿಶೇಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಡಿ.ರೇವಣ್ಣ : ಇದು ರೆಕಾರ್ಡ್‌ಗೆ ಹೋಗುತ್ತದೆ. ದಯಮಾಡಿ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ವಿಶೇಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು ಸಾರ್.

ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ನಾಳೆ ಈ ವಿಷಯವನ್ನು ಚರ್ಚೆ ಮಾಡೋಣ ರೇವಣ್ಣನವರೆ, ನಿಮ್ಮ ಹತ್ತಿರ ಹಾಗೂ ಗೌರವಾನ್ವಿತ ಸದಸ್ಯರ ಹತ್ತಿರ ಏನೇನು ಮಾಹಿತಿಗಳು ಇದೆಯೋ ಎಲ್ಲವನ್ನು ಈ ನಾಡಿನ ಜನರ ಮುಂದೆ ಇಡೋಣ. ತಪ್ಪು ಮಾಡಿದವರು

ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ, ಜವಾಬ್ದಾರಿಯನ್ನು ಹೊತ್ತು, atleast ಯಾವುದೇ ವಿಷಯಕ್ಕೂ ಸಂಬಂಧವಿಲ್ಲದಂತಹ ಈ ಸರ್ಕಾರದ ಮೇಲೆ ಗೂಬೆಯನ್ನು ಕೂರಿಸದೆ ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಸಹಕಾರವನ್ನು ನೀಡುತ್ತೀರೆಂದು ಭಾವಿಸಿದ್ದೇನೆ. ನಮ್ಮ ರಾಜ್ಯದ ವಿಚಾರಗಳನ್ನು ದೆಹಲಿಗೆ ಹೋಗಿ ಹರಾಜು ಹಾಕುವಂತಹ ಒಂದು ಪರಿಸ್ಥಿತಿ ಮತ್ತೆ ಮತ್ತೆ ಉದ್ಭವವಾಗಬಾರದೆಂದು ಮಾತ್ರ ನನ್ನ ವಿನಂತಿಯಾಗಿದೆ. 2010–11ನೇ ಸಾಲಿಗೆ ರಾಜ್ಯ ಸರ್ಕಾರವು 31,000 ಕೋಟಿ ರೂಪಾಯಿಗಳ ಯೋಜನೆಯ ಪ್ರಸ್ತಾವವನ್ನು ಕೇಂದ್ರ ಯೋಜನಾ ಆಯೋಗದ ಮುಂದೆ ಇರಿಸಿತ್ತು. ಯೋಜನಾ ಆಯೋಗವು ಇನ್ನು 50 ಕೋಟಿ ರೂಪಾಯಿಗಳನ್ನು ಹೆಚ್ಚಿಸಿ 31,050 ಕೋಟಿ ರೂಪಾಯಿಗಳಿಗೆ ಅನುಮೋದನೆಯು ದೊರೆತಿದೆ. ಇದರಲ್ಲಿ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ನೀಡಿರುವಂತಹ ಆದ್ಯತೆ ಮತ್ತು ಅನುಷ್ಠಾನದ ಪ್ರಗತಿಯ ಬಗ್ಗೆ ನಾನು ಈಗಾಗಲೇ ಹೇಳಿದಂತೆ ಮೆಚ್ಚುಗೆಯನ್ನು ಸಹಾ ವ್ಯಕ್ತಪಡಿಸಿದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸರ್ಕಾರವು ಆರ್ಥಿಕ ಬಿಕ್ಕಟ್ಟಿನ ಪ್ರತಿಕೂಲ ಸನ್ನಿವೇಶದಲ್ಲಿಯೂ ಸಹ ವಿತ್ತೀಯ ಕೊರತೆಯನ್ನು GSDP ಯ ಶೇಕಡಾ 3ರ ಒಳಗಡೆ ಮತ್ತು ಋಣಭಾರವನ್ನು GSDP ಯ ಶೇಕಡಾ 28ರ ಒಳಗಡೆ ಮಿತಿಗೊಳಿಸಿರುವಂತಹದ್ದು ಎಲ್ಲಾ ವಲಯಗಳಲ್ಲಿ ಆರ್ಥಿಕ ಕ್ಷೇತ್ರದ ಪರಿಣಿತರ ಪ್ರಕಾರ ಅದು ಮೆಚ್ಚುಗೆಗೆ ಪಾತ್ರವಾಗಿದೆ ಎನ್ನುವಂತಹ ಮಾತನ್ನು ಗೌರವಾನ್ವಿತ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಮತೋಲನವನ್ನು ಕಾಪಾಡಿಕೊಂಡು ರಾಜ್ಯದ ಎಲ್ಲಾ ಪ್ರದೇಶಗಳ ಸಮಾನ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು ಗಮನವನ್ನು ನೀಡಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ 2010–11ನೇ ಸಾಲಿಗೆ 2584 ಕೋಟಿ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಬಹುಶಃ ದೇಶದಲ್ಲಿಯೇ ಮೊದಲ ಬಾರಿಗೆ ಜಿಲ್ಲಾಮಟ್ಟದ ಮಾನವ ಅಭಿವೃದ್ಧಿ ವರದಿಗಳನ್ನು ಸಿದ್ಧಪಡಿಸಿದ್ದೇವೆ. ಪ್ರಸ್ತುತ ಬಿಜಾಪುರ, ಗುಲ್ಬರ್ಗಾ, ಮೈಸೂರು, ಉಡುಪಿ, ಜಿಲ್ಲೆಗಳಿಗೆ ಸಂಬಂಧಿಸಿದ ವರದಿಗಳನ್ನು ಹೊರತರಲಾಗಿದೆ. ಹಂತಹಂತವಾಗಿ ಎಲ್ಲಾ ಜಿಲ್ಲೆಗಳಲ್ಲಿ ಸಮತೋಲನ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಅಗತ್ಯ ಸಂಪನ್ಮೂಲ ಹಂಚಿಕೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅದನ್ನು ಜಾರಿಗೆ

ತರುವುದಕ್ಕೆ ನಮ್ಮ ಸರ್ಕಾರವು ಬದ್ಧವಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದಂತಹ ನನ್ನ ಎಲ್ಲಾ ಮುಂಗಡ ಪತ್ರದಲ್ಲಿ ರೈತರಿಗೆ ಅಂದರೆ ಕೃಷಿಗೆ ಅದಕ್ಕೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ನಾನು ಕೊಟ್ಟಿದ್ದೇನೆ. 2010–11ರ ಮುಂಗಡ ಪತ್ರದಲ್ಲಿ ರೈತರು ಮತ್ತು ಕೃಷಿಗೆ ಹೆಚ್ಚು ಪ್ರೋತ್ಸಾಹವನ್ನು ನೀಡಲಾಗಿದೆ. ರೈತರ ಉತ್ಪಾದಕ ಚಟುವಟಿಕೆಗಳಾದ ಕೃಷಿ ಮತ್ತು ತೋಟಗಾರಿಕೆ ಕಾರ್ಯಕ್ರಮಗಳಿಗೆ ಹಿಂದಿನ ಯಾವುದೇ ವರ್ಷದಲ್ಲಿ ಒದಗಿಸಿದ ಅನುದಾನಕ್ಕಿಂತ ಹೆಚ್ಚು ಅನುದಾನವನ್ನು ಈ ವರ್ಷ ಒದಗಿಸಿದ್ದೇನೆ. ಅದರ ವಿವರ ಈ ರೀತಿ ಇದೆ. ಯೋಜನೆ ಹಾಗೂ ಯೋಜನೇತರ ಅನುದಾನ ಕೃಷಿ ಮತ್ತು ತೋಟಗಾರಿಕೆಗೆ, ಪಶುಸಂಗೋಪನೆ ಮತ್ತು ನೀರಾವರಿಗೆ 2006–07ನೇ ಸಾಲಿನಲ್ಲಿ 5653 ಕೋಟಿ ರೂಪಾಯಿ ಗಳನ್ನು ಒದಗಿಸಲಾಗಿತ್ತು. 2007–08ರಲ್ಲಿ 5391 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. 2008–09 ಸಾಲಿನಲ್ಲಿ 5036 ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. 2009–10ನೇ ಸಾಲಿನಲ್ಲಿ 6596 ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. ಈಗ 2010–11ನೇ ಸಾಲಿಗೆ 8150 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮತ್ತು ನೀರಾವರಿ ಒಳಗೊಂಡಂತೆ ರೈತರ ಉತ್ಪಾದಕ ಚಟುವಟಿಕೆಗಳಿಗೆ ನೆರವಾಗುವಂತಹ ಕಾರ್ಯಕ್ರಮಗಳಿಗೆ ನೇರವಾಗಿ ಮುಟ್ಟುವಂತಹ ಕಾರ್ಯಕ್ರಮಗಳಿಗೆ ಕಳೆದ 5 ವರ್ಷದಲ್ಲಿ ಯಾವ ರೀತಿಯಾಗಿ ಹೆಚ್ಚು ಹೆಚ್ಚು ಅನುದಾನವನ್ನು ಒದಗಿಸಿದ್ದೇವೆ ಎನ್ನುವುದಕ್ಕೆ ಮಾತ್ರ ನಾನು ಈ ಅಂಕಿಅಂಶಗಳನ್ನು ಹೇಳಿದ್ದೇನೆ. ಬಹುಶಃ ಈ ದೇಶದಲ್ಲಿ ಶೇಕಡ 3 ರ ಬಡ್ಡಿದರದಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ, ಸಹಕಾರಿ ಸಂಘಗಳಲ್ಲಿ ಸಾಲ ಕೊಡುವಂತಹ ವ್ಯವಸ್ಥೆ ಎಲ್ಲಿಯೂ ಇಲ್ಲ. ಅದನ್ನು ನಾವು ಮುಂದುವರಿಸುತ್ತಿದ್ದೇವೆ. ಸುಮಾರು 1200 ಕೋಟಿ ರೂಪಾಯಿಗಳ ವೆಚ್ಚದಲ್ಲಿ 'ನಿರಂತರ ಜ್ಯೋತಿ' ವ್ಯವಸ್ಥೆಯ ಮೂಲಕ ಕೃಷಿ ಕಾರ್ಯಗಳಿಗೆ ಸಮರ್ಪಕವಾಗಿ ವಿದ್ಯುತ್‌ನ್ನು ಒದಗಿಸುವುದಕ್ಕೆ ಈ ವರ್ಷ ಪ್ರಯತ್ನವನ್ನು ಮಾಡುತ್ತೇವೆ. ರೈತರಿಗೆ ಉಚಿತವಾದಂತಹ ವಿದ್ಯುತ್‌ನ್ನು ಒದಗಿಸುವುದಕ್ಕೆ 2500 ಕೋಟಿ ರೂಪಾಯಿಗಳ ಸಹಾಯ ಧನವನ್ನು ನೀಡಲಾಗುತ್ತಿದೆ ಎನ್ನುವಂತಹ ಅಂಕಿಅಂಶವನ್ನು ಗೌರವಾನ್ವಿತ ಸದಸ್ಯರಿಗೆ ಗೊತ್ತಿದ್ದರೆ ಯಾವ ಪ್ರಮಾಣದಲ್ಲಿ ರೈತರ ನೆರವಿಗೆ ನಾವು ಹೋಗುತಿದ್ದೇವೆ ಎನ್ನುವುದರ ಅರಿವು ನಿಮಗೆ ಮೂಡಬಹುದು. ರೈತರು

ದುಡಿಯುವಂತಹ ಕೆಲಸದ ಸಂದರ್ಭದಲ್ಲಿ, ಅನೇಕ ಆಘಾತಗಳಿಗೆ ಒಳಗಾಗುತ್ತಾರೆ. ಒಂದು ಮರದಿಂದ ಬೀಳುತ್ತಾರೆ, ಹಾವು ಕಡಿಯುತ್ತದೆ, ಮತ್ತೊಂದು ಆಗುತ್ತದೆ, ಸಾವನ್ನು ಅನುಭವಿಸುತ್ತಾರೆ. ಅಲ್ಲಿ ಅವರನ್ನು ಯಾರು ಕೇಳುವರು ಇರುವುದಿಲ್ಲ. ಆ ರೀತಿಯಾದ ಮರಣವಾದಂತಹ ಸಂದರ್ಭದಲ್ಲಿ ತತಕ್ಷಣ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರದ ರೂಪದಲ್ಲಿ ಕೊಡಬೇಕೆಂದು ಹೇಳಿದ್ದೇವೆ. ಮಾವು ಬೆಳೆಯುವಂತಹ ರೈತರಿಗೆ, ಪ್ರತ್ಯೇಕವಾದಂತಹ ಮಾವು ಮಂಡಳಿಯನ್ನು ಸ್ಥಾಪಿಸಬೇಕೆಂದು ನಿರ್ಧಾರ ವನ್ನು ಮಾಡಿದ್ದೇವೆ. ಇದನ್ನು ಬಹುಶಃ ತಾವು ಗಮನಿಸಿದರೆ ಒಳ್ಳೆಯದು, ಇಡೀ ದೇಶದಲ್ಲಿ ಒಂದು ಬಹಳ ಕಾತುರತೆಯಿಂದ ನೋಡುತ್ತಿರುವಂತಹ ಕಾರ್ಯಕ್ರಮವೆಂದರೆ ನಮ್ಮ ಸಾವಯವ ಕೃಷಿ ಕಾರ್ಯಕ್ರಮಗಳು. 55,000 ಮಂದಿ ರೈತರು ಈ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿ ಕೊಂಡಿದ್ದಾರೆ. ಇನ್ನು ಹೆಚ್ಚು ಜನ ರೈತರು ಈ ಪದ್ಧತಿಯನ್ನು ಅಳವಡಿಸಿಕೊಳ್ಳ ಬೇಕೆಂಬ ನಮ್ಮ ಅಪೇಕ್ಷೆ ಇದೆ. 2010–11ನೇ ಸಾಲಿನಲ್ಲಿ ಅದಕ್ಕಾಗಿ 100 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಈಗಾಗಲೇ ನಾವು ಹೋದ ವರ್ಷ ಪ್ರಯತ್ನ ಮಾಡಿದಂತೆ ಯಾವ ಸಮಯದಲ್ಲಿ ಬೇಕಾದರೂ early rains ಎಂದು ಏನು ಹೇಳುತ್ತಾರೆ, ಮಳೆ ಬೇಗ ಬರಬಹುದು ಎಂದು, 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರೈತರಿಗೆ ಅಗತ್ಯವಿರುವಂತಹ ರಾಸಾಯನಿಕ ಗೊಬ್ಬರವನ್ನು ಒದಗಿಸುವುದಕ್ಕೆ, ಕೃಷಿ ಉತ್ಪನ್ನ ಮಾರುಕಟ್ಟೆಗೆ ತತಕ್ಷಣ ಸೂಚನೆಯನ್ನು ಕೊಟ್ಟು ಆ ವ್ಯವಸ್ಥೆಯನ್ನು ಮಾಡಿದ್ದೇವೆ. ಸುಮಾರು 400 ಕೋಟಿ ರೂಪಾಯಿಗಳ Revolving Fund ನ್ನು ಉಪಯೋಗಿಸಿ ಸುಮಾರು 950 ಕೋಟಿ ರೂಪಾಯಿ ಮೌಲ್ಯದ ರಸಗೊಬ್ಬರವನ್ನು ರೈತರಿಗೆ ಒದಗಿಸಲಾಗಿದೆ. ಅದನ್ನು ನಾವು ಮತ್ತೆ ಮುಂದುವರಿಸುತ್ತೇವೆ. ಚೆಕ್ ಡ್ಯಾಂ, ಬಾಂದಾರ್ ಮುಂತಾದ 2 ಲಕ್ಷ ಜಲ ಪೂರ್ಣ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಅವಕಾಶವನ್ನು ಮಾಡಿದ್ದೇವೆ. ಹನಿ ನೀರಾವರಿ ವ್ಯವಸ್ಥೆಯ ಬಗ್ಗೆ "ಅಂತರ ಗಂಗಾ" ಎಂಬ ಒಂದು ನಿಗಮವನ್ನು ಸ್ಥಾಪಿಸುತ್ತಿದ್ದೇವೆ. ಪ್ರತಿ ಜಿಲ್ಲೆಯಲ್ಲಿ ಒಂದು ಕೃಷಿಮೇಳವನ್ನು ಮಾಡಬೇಕು. ಅಲ್ಲಿ ವಿಶೇಷವಾದಂತಹ ಸಮಾರಂಭವು ಆಗಬೇಕು. ರೈತರು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಹೆಚ್ಚು ಒತ್ತನ್ನು ಕೊಡಬೇಕು. ಹಾಲು ಉತ್ಪಾದಕರಿಗೆ ಏನು ಸಹಾಯಧನವನ್ನು ನಾವು ಕೊಡುತ್ತಿದ್ದೇವೆ, ಅದನ್ನು ಮುಂದುವರಿಸಬೇಕೆಂಬ ತೀರ್ಮಾನವನ್ನು

ಮಾಡಿದ್ದೇವೆ. ಈಗಾಗಲೇ 2008–09ರ ಸಾಲಿನಲ್ಲಿ ಸಹಕಾರಿ ಸಂಘಗಳ ಮೂಲಕ ರೈತರಿಗೆ 3505 ಕೋಟಿ ರೂಪಾಯಿಗಳ ಸಾಲವನ್ನು ಒದಗಿಸಿದ್ದೇವೆ. ಇದಕ್ಕಾಗಿ ಸರ್ಕಾರವು ನಿರ್ವಹಣೆ ಮಾಡಲಾದ ಬಡ್ಡಿ ಮತ್ತು ಸಹಾಯಧನ ದೊಡ್ಡ ಮೊತ್ತದ್ದು 2009–10ರಲ್ಲಿ ಸಹಕಾರ ಸಂಘಗಳಿಂದ 3099 ಕೋಟಿ ರೂಪಾಯಿಗಳು, ಮತ್ತು ವಾಣಿಜ್ಯ ಬ್ಯಾಂಕುಗಳಿಂದ 1636.12 ಕೋಟಿ ರೂಪಾಯಿಗಳ ಸಾಲವನ್ನು ನೀಡಲಾಗಿದೆ. ಇದಕ್ಕೆ 250 ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡುವಂತಹ ಅವಶ್ಯಕತೆ ಇದೆ. ರೈತರು ಮರುಪಾವತಿ ಮಾಡುವ ಅವಧಿಗೆ ಅನುಗುಣವಾಗಿ ಸಹಾಯಧನವನ್ನು ವಿತರಿಸುತ್ತೇವೆ. ಬಹಳ ಪ್ರಮುಖವಾದಂತಹ ಈ ದೇಶದಲ್ಲಿ ಮಾದರಿ ಒಂದು ಕಾರ್ಯಕ್ರಮ ಆಗಿದೆ. ಹಾಲು ಉತ್ಪಾದಕರಿಗೆ ಹೈನುಗಾರಿಕೆ ಪ್ರೋತ್ಸಾಹಕ್ಕೆ ನಮ್ಮ ಸರ್ಕಾರವು ಪ್ರತಿ ಲೀಟರ್ ಹಾಲಿಗೆ 2 ರೂಪಾಯಿಯ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ವಾರ್ಷಿಕವಾಗಿ 200 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಗ್ರಾಮೀಣ ಪ್ರದೇಶಗಳಿಗೆ ತಲುಪುತ್ತಿದೆ. ಜನವರಿ ತಿಂಗಳವರೆಗೆ 6.45 ಲಕ್ಷ ಮಂದಿ ಮಹಿಳಾ ಸಹಕಾರಿ ಸಂಘ ಹಾಲು ಉತ್ಪಾದಕರಿಗೆ 190 ಕೋಟಿ ರೂಪಾಯಿಗಳ ಪ್ರೋತ್ಸಾಹ ಧನವನ್ನು ಜನವರಿ ತಿಂಗಳವರೆಗೆ ಕೊಟ್ಟಿರುತ್ತೇವೆ. ಇದರಿಂದ ಗ್ರಾಮೀಣ ಮಹಿಳೆಯರ ಕೊಳ್ಳುವಂತಹ ಶಕ್ತಿ ಆರ್ಥಿಕವಾಗಿ ಸುಭದ್ರವಾಗಿ ಅವರ ಕಾಲ ಮೇಲೆ ಅವರು ನಿಂತುಕೊಳ್ಳುವುದಕ್ಕೆ ಇದರಿಂದ ಸ್ವಾವಲಂಬಿಯಾಗುವುದಕ್ಕೆ ಹೆಚ್ಚು ಅವಕಾಶವಾಗಿದೆ. ನೀರಾವರಿ ಕ್ಷೇತ್ರಕ್ಕೆ ನಮ್ಮ ಸರ್ಕಾರವು ಹೆಚ್ಚಿನ ಒಂದು ಪ್ರಾಮುಖ್ಯತೆಯನ್ನು ನೀಡಿದೆ. ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗೆ ನೆನೆಗುದಿಗೆ ಬಿದ್ದಿದ್ದ 14 ಯೋಜನೆಗಳನ್ನು ಕಳೆದ 20 ತಿಂಗಳಲ್ಲಿ ನಾವು ಪೂರ್ಣ ಮಾಡಿದ್ದೇವೆ.

3.5 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. 2010–11ನೇ ಸಾಲಿನಲ್ಲಿ 16 ನೂತನ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಕಾರ್ಯಕ್ರಮ ಹಾಕಿದ್ದೇವೆ. 2010–11ನೇ ಸಾಲಿನಲ್ಲಿ ರೈತಕಲ್ಯಾಣ ಕಾರ್ಯಕ್ರಮಗಳಿಗೆ ಬಜೆಟ್‌ನಲ್ಲಿ ಶೇಕಡಾ 22ರಷ್ಟು ಅಂದರೆ ರೂ. 13,484 ಕೋಟಿಯಷ್ಟು ಕೃಷಿ, ತೋಟಗಾರಿಕೆ, ನೀರಾವರಿ ಹಾಗೂ ವಿದ್ಯುತ್ ಇತ್ಯಾದಿಗಳಿಗೆ ವೆಚ್ಚ ಮಾಡುವುದಕ್ಕೆ ನಾವು ನಿರ್ಧಾರ ಮಾಡಿದ್ದೇವೆ. ರಾಜ್ಯದ ಎಲ್ಲಾ ಹಳ್ಳಿಗಳಿಗೆ ಆಂತರಿಕ ರಸ್ತೆಗಳ ಅಭಿವೃದ್ಧಿ, ಶುದ್ಧ ಕುಡಿಯುವ ನೀರಿನ ಸರಬರಾಜು, ನೈರ್ಮಲ್ಯ ವ್ಯವಸ್ಥೆ ಮತ್ತು ವಿದ್ಯುದೀಕರಣಕ್ಕೆ ನಮ್ಮ

ಸರ್ಕಾರ ಹಂತ ಹಂತವಾಗಿ ಕಾರ್ಯಕ್ರಮಗಳನ್ನು ರೂಪಿಸಿದೆ. ಕಲಾಂ ಪುರ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ನಗರ ಸೌಲಭ್ಯಗಳನ್ನು ಒದಗಿಸುವಂತಹ ನಿರ್ಧಾರ ಮಾಡಿದ್ದೇವೆ. ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ 200 ಗ್ರಾಮಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ನಿರ್ಧಾರ ಮಾಡಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸುಧಾರಿಸುವುದಕ್ಕೆ ರಾಜ್ಯ, ಕೇಂದ್ರ ಹಾಗೂ ವಿದೇಶಿ ನೆರವಿನ ಯೋಜನೆಯಡಿಯಲ್ಲಿ ಕಳೆದ 21 ತಿಂಗಳುಗಳಲ್ಲಿ 1,613 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯಡಿಯಲ್ಲಿ 681 ಕೋಟಿ ರೂಪಾಯಿಗಳ ವೆಚ್ಚದಲ್ಲಿ 2,125 ಕಿ.ಮೀ. ರಸ್ತೆಯನ್ನು ನಿರ್ಮಿಸಲಾಗಿದೆ. ಮುಖ್ಯಮಂತ್ರಿ ಗ್ರಾಮೀಣ ಸಡಕ್ ಯೋಜನೆಯಡಿಯಲ್ಲಿ 4,284 ಕಿ.ಮೀ. ಉದ್ದ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2,846 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೆ ನಿರ್ಧಾರ ಮಾಡಿದ್ದೇವೆ. ಸುವರ್ಣ ಗ್ರಾಮೋದಯ ಯೋಜನೆಗೆ ಇನ್ನೂ ಹೆಚ್ಚಿನ ಒತ್ತನ್ನು ಕೊಡಬೇಕಾಗಿದೆ. 2007–08ರಲ್ಲಿ ಸುವರ್ಣ ಗ್ರಾಮೋದಯ ಕಾರ್ಯಕ್ರಮ ವನ್ನು ಅನುಷ್ಠಾನ ಮಾಡುವುದಕ್ಕೆ 213 ಕೋಟಿ ರೂಪಾಯಿಗಳು, 2008–09 ರಲ್ಲಿ 364 ಕೋಟಿ ರೂಪಾಯಿಗಳು ಹಾಗೂ 2009–10ರಲ್ಲಿ 199 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಈ ಸಾಲಿನಲ್ಲಿ ಒದಗಿಸಿರುವಂತಹ 300 ಕೋಟಿ ರೂಪಾಯಿಗಳನ್ನು ಪೂರ್ತಿಯಾಗಿ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಈವರೆಗೆ ಬಿಡುಗಡೆಯಾದ ಒಟ್ಟು ಹಣ 877 ಕೋಟಿ ರೂಪಾಯಿಗಳು. ಸುವರ್ಣ ಗ್ರಾಮೋದಯ ಕಾರ್ಯಕ್ರಮವನ್ನು ವ್ಯಾಪಕವಾಗಿ ಮತ್ತು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಎರಡನೇ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ, ಅನುಷ್ಠಾನದ ವೇಗವನ್ನು ಹೆಚ್ಚಿಸುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಮೂರನೇ ಹಂತದ ಗ್ರಾಮಗಳ ಅಂತಿಮ ಪಟ್ಟಿ ಸಿದ್ಧವಾಗಬೇಕಾಗಿದೆ. ಮುಂದಿನ ವರ್ಷದಲ್ಲಿ ಎರಡನೇ ಹಂತದ ಎಲ್ಲಾ ಹಳ್ಳಿಗಳ ಕಾಮಗಾರಿಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸುತ್ತೇವೆ. ಮೂರನೇ ಹಂತದ ಕಾರ್ಯಕ್ರಮಗಳಿಗೂ ಸಹ ಒತ್ತು ಕೊಡುತ್ತೇವೆ. ಗುಲ್ಬರ್ಗಾದಲ್ಲಿ ನಡೆದಂತಹ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನಿಸಿದಂತೆ ಆ ಭಾಗದ 222 ಹಳ್ಳಿಗಳ

ಕಾಮಗಾರಿ ಪ್ರಾರಂಭ ಮಾಡುವುದಕ್ಕೆ 104 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡುವುದಕ್ಕೆ ಆದೇಶ ಹೊರಡಿಸಿದ್ದೇವೆ. 2010–11ಕ್ಕೆ ಅಂದರೆ ಈ ವರ್ಷ ಈ ಕಾರ್ಯಕ್ರಮಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೆ ಉದ್ದೇಶಿಸಿದ್ದೇವೆ. ಗ್ರಾಮೀಣಾ ಭಿವೃದ್ಧಿಯ ಜೊತೆಗೆ ನಗರಾಭಿವೃದ್ಧಿಗೂ ನಮ್ಮ ಸರ್ಕಾರ ಸಮಾನ ಗಮನ ನೀಡಿದೆ. ಜಾಗತಿಕ ನಗರವಾದಂತಹ ಬೆಂಗಳೂರು ನಗರಾಭಿವೃದ್ಧಿಗೆ ಆದ್ಯತೆ ನೀಡಿದ್ದೇವೆ. ಕಳೆದ 21 ತಿಂಗಳುಗಳಲ್ಲಿ ಬೆಂಗಳೂರು ನಗರದಲ್ಲಿ ಮೂಲಭೂತ ಸೌಕರ್ಯಗಳ ಸುಧಾರಣೆಯಾಗಿದೆ. ಗಮನಾರ್ಹವಾದ ಪ್ರಗತಿ ಯನ್ನು ಸಾಧಿಸಿದ್ದೇವೆ. ಅದು ಎಲ್ಲೆಡೆ ಓಡಾಟ ಮಾಡಿರುವವರಿಗೆ ಗೋಚರ ವಾಗುತ್ತದೆ. ನಾಡಪ್ರಭು ಕೆಂಪೇಗೌಡರು ನಿರ್ಮಿಸಿರುವಂತ ಈ ಬೆಂಗಳೂರು ಇಡೀ ವಿಶ್ವಕ್ಕೆ ಜನತೆಯನ್ನು ಆಕರ್ಷಣೆ ಮಾಡುವಂತಹ ನಗರ ಇದು ಆಗಬೇಕು. ಅತೀ ವೇಗವಾಗಿ ಬೆಳೆಯುತ್ತಿರುವ ನಗರ ಅನ್ನುವಂತಹದ್ದು ಇದು. ದೇಶದ ಒಂದು ಸಿಲಿಕಾನ್ ಸಿಟಿ, ವಿಜ್ಞಾನ–ತಂತ್ರಜ್ಞಾನ ನಗರಿ, Health city, ಹೀಗೆ ಬೆಂಗಳೂರು ಬಗ್ಗೆ ವಿದೇಶಕ್ಕೆ ಹೋದಾಗ ಗಮನಕ್ಕೆ ಬರುತ್ತದೆ. ನಾನು ಪ್ರಧಾನಿಯವರನ್ನು ಅಭಿನಂದಿಸುತ್ತೇನೆ. ಯಾವಾಗ ಅಲ್ಲಿ ಹೋದರೂ ಸಹ ಅವರು ಬೆಂಗಳೂರು ನಗರದ ಅಭಿವೃದ್ಧಿ ಬಗ್ಗೆ ಒಂದು ಬಾರಿ ವಿಚಾರ ಮಾಡದೇ ಎಂದೂ ಸಹ ನಮ್ಮ ಮಾತುಕತೆ ಪೂರ್ಣವಾಗಿಲ್ಲ. ಹೆಚ್ಚು ಅನುದಾನದ ಅಗತ್ಯವಿದೆ ತಾವು ಹಣ ಬಿಡುಗಡೆ ಮಾಡಬೇಕೆಂದು ನಾವು ಹೇಳಿದ್ದೇವೆ. ಮಾನ್ಯ ಜಯಚಂದ್ರರವರೇ, ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಸ್ವಲ್ಪ ಸಹಕಾರವನ್ನು ನೀಡಿದರೆ ಪ್ರಧಾನಿಗಳ ಮನಸ್ಸಿನಲ್ಲಿ ಬೆಂಗಳೂರಿಗೆ ಹೆಚ್ಚು ಅನುದಾನದ ಅನುಕೂಲವನ್ನು ಮಾಡಿಕೊಡಬೇಕೆಂದು ಇದೆ. ನೀವೆಲ್ಲಾ ಸಹಕಾರವನ್ನು ಕೊಟ್ಟರೆ ಬಹುಶಃ ಇನ್ನೂ ಹೆಚ್ಚು ಬೆಂಗಳೂರು ನಗರವನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತದೆ. ನನ್ನ ಸಂಕಲ್ಪ ಏನೆಂದರೆ, ನಾನು ಆಗಲೇ ಪತ್ರ ಬರೆದಿದ್ದೇನೆ. ಬೆಂಗಳೂರು ನಗರಕ್ಕೆ ಒಂದು ವರ್ತುಲ ರೈಲಿನ ಅಗತ್ಯವಿದೆ. ಮಮತಾ ಬ್ಯಾನರ್ಜಿಯವರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟರೆ ಈ ವರ್ಷವೇ ಅದಕ್ಕೆ ಹೇಗಾದರೂ ಹಣವನ್ನು ಹೊಂದಿಸಿ ಅಗತ್ಯವಾದಂತಹ 50% ಹಣವನ್ನು ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಅದು ಅಲ್ಲದೇ ಈಗಾಗಲೇ 600 ಕೋಟಿ ರೂಪಾಯಿಗಳು ರೈಲ್ವೆ ವಲಯಕ್ಕೆ ಏನು ಮಂಜೂರು ಆಗಿದೆ, ಅದಕ್ಕೆ ಹಣವನ್ನು ಈ ವರ್ಷವೇ ಖರ್ಚು ಮಾಡುವುದೇ ಮತ್ತು ಅಗತ್ಯವಿರುವ ಹಣವನ್ನು

ಕೊಡುವುದಕ್ಕೆ ಈಗಾಗಲೇ ರೈಲ್ವೆ ಸಚಿವರಿಗೆ ಪತ್ರವನ್ನು ಬರೆದಿದ್ದೇವೆ. ಬೆಂಗಳೂರು ನಗರದಲ್ಲಿ ಒಂದು ರಸ್ತೆ ನಿರ್ಮಾಣ, ಅಗಲೀಕರಣ, ಮೇಲು ಸೇತುವೆ, ಕೆಳ ಸೇತುವೆ ನಿರ್ಮಾಣ ಇತ್ಯಾದಿ ಕಾಮಗಾರಿಗಳಿಗೆ ಕಳೆದ ವರ್ಷ 80 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. 628 ಕೋಟಿ ರೂಪಾಯಿಗಳ ವೆಚ್ಚದಲ್ಲಿ 1,341 ಕಿ.ಮೀ. ಉದ್ದದ ರಸ್ತೆ, ಬೆಂಗಳೂರಿನಲ್ಲಿ ಡಾಬರೀಕರಣಗೊಳಿಸಿದ 154 ಕೋಟಿ ರೂಪಾಯಿಗಳ ವೆಚ್ಚದಲ್ಲಿ 156 ಕಿ.ಮೀ.ಗಳ ಉದ್ದ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಲಾಗಿದೆ. 23 ಕೋಟಿ ರೂ.ಗಳ ವೆಚ್ಚದಲ್ಲಿ 11 ಸ್ಥಳಗಳಲ್ಲಿ ಕೆಳ ಸೇತುವೆ ಮತ್ತು surface mask ಗಳನ್ನು ನಿರ್ಮಿಸಿದ್ದೇವೆ. BBMP ವತಿಯಿಂದ 625 ಪಾರ್ಕ್‌ಗಳನ್ನು ಮತ್ತು 29 ಕೆರೆಗಳನ್ನು 300 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸುತ್ತಿದ್ದೇವೆ. ಬೆಂಗಳೂರಿನ ಕೊಳಗೇರಿಗಳಲ್ಲಿ ವಾಸಮಾಡುವಂತಹ 5 ಸಾವಿರ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದ್ದೇವೆ. ಹೊಸೂರು ರಸ್ತೆ ಕೇಂದ್ರೀಯ ರೇಷ್ಮೆ ಮಂಡಳಿಯಿಂದ ಹೆಬ್ಬಾಳದವರೆಗೆ ರಿಂಗ್ ರಸ್ತೆಯ್ನು ಸಿಗ್ನಲ್ ಮುಕ್ತ ಕಾರಿಡಾರ್ ಆಗಿ ಪರಿವರ್ತಿಸುವುದಕ್ಕೆ 8 ಜಂಕ್ಷನ್‌ಗಳನ್ನು 300 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುತ್ತಿದ್ದೇವೆ. 270 ಬೆಂಗಳೂರು ಒನ್ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ವಿವಿಧ ಸೌಲಭ್ಯ ಗಳನ್ನು ಒದಗಿಸಲಾಗುತ್ತಿದೆ. ಕಾವೇರಿ ಕುಡಿಯುವ ನೀರಿನ ಯೋಜನೆಯ ನಾಲ್ಕನೇ ಹಂತದ ಎರಡನೇ ಘಟ್ಟದ 500 ದಶ ಲಕ್ಷ ಲೀಟರ್ ಸರಬರಾಜು ಯೋಜನೆಯನ್ನು 3,383 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೈಗೆತ್ತಿ ಕೊಂಡಿದ್ದೇವೆ. ಕಳೆದ ವರ್ಷ ಬೆಂಗಳೂರಿನಲ್ಲಿ ಮೂಲಭೂತ ಸೌಕರ್ಯಗಳ ಸುಧಾರಣೆಗೆ BBMP, BWSSB ಹಾಗೂ BDA ಮೊದಲಾದ ಸಂಸ್ಥೆಗಳ ಮೂಲಕ ಒಟ್ಟು 6 ಸಾವಿರ ಕೋಟಿ ರೂಪಾಯಿಗಳ ವೆಚ್ಚ ಮಾಡಿದ್ದು ಇನ್ನೂ ಕೂಡ 4 ಸಾವಿರ ಕೋಟಿ ರೂಪಾಯಿ ವೆಚ್ಚದ 15 ಸಾವಿರ ಕಾಮಗಾರಿಗಳು ಈಗ ಪ್ರಗತಿಯಲ್ಲಿವೆ. ಈಗ ಸುಮಾರು 10 ಸಾವಿರ ಕೋಟಿ ರೂಪಾಯಿ ಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಬೆಂಗಳೂರು ಮೆಟ್ರೊ ಕಾಮಗಾರಿ ಬರದಿಂದ ಕ್ಷಿಪ್ರವೇಗದಲ್ಲಿ ಅನುಷ್ಠಾನ ಗೊಳ್ಳುತ್ತಿದೆ. ನಾವು ಅಧಿಕಾರಕ್ಕೆ ಬಂದಾಗ ಕೇವಲ ಶೇಕಡಾ ಒಂದರಷ್ಟು ಕಾಮಗಾರಿ ಅನುಷ್ಠಾನದಲ್ಲಿತ್ತು. ಈಗ ಆ ಪ್ರಮಾಣ ಶೇಕಡಾ 22–23ಕ್ಕೆ ತಲುಪಿದೆ. ಈವರೆಗೆ ಬೆಂಗಳೂರು ಮೆಟ್ರೊ ಯೋಜನೆಗೆ 2,100

ಕೋಟಿ ರೂಪಾಯಿಗಳ ವೆಚ್ಚವಾಗಿದ್ದು, ಈ ಪೈಕಿ 1,800 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಕಳೆದ 20 ತಿಂಗಳುಗಳ ಅವಧಿಯಲ್ಲಿ ವೆಚ್ಚ ಮಾಡಿದೆ. ಬೈಯಪ್ಪನಹಳ್ಳಿಯಿಂದ ಕ್ರಿಕೆಟ್ ಸ್ಟೇಡಿಯಂವರೆಗಿನ ಕಾಮಗಾರಿಗಳಲ್ಲಿ ಶೇಕಡಾ 70 ರಷ್ಟು ಪ್ರಗತಿಯಾಗಿದೆ. 2010ರ ಡಿಸೆಂಬರ್ ವೇಳೆಗೆ ಮೊದಲ ಹಂತದ ಮೆಟ್ರೊ ರೈಲು ಸಂಚಾರ ಪ್ರಾರಂಭವಾಗುತ್ತಿದೆ.

ರೈತರು, ಗ್ರಾಮೀಣ ಪ್ರದೇಶದ ಬಡವರು, ಪರಿಶಿಷ್ಟ ಜಾತಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ ಹಿಂದಿನ ಸರ್ಕಾರಗಳಿಗಿಂತ ನಮ್ಮ ಸರ್ಕಾರದ ಅವಧಿಯಲ್ಲಿ ಹೆಚ್ಚಿನ ಆದ್ಯತೆಯ ಜೊತೆಗೆ ಮುಂಗಡ ಪತ್ರದಲ್ಲಿ ಹೆಚ್ಚು ಅನುದಾನ ನೀಡಿ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡ ತೃಪಿ ನನಗಿದೆ. ದುರ್ಬಲ ವರ್ಗಗಳಿಗೆ ಆದ್ಯತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣುಮಕ್ಕಳಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ 114 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು, 82 ಪರಿಶಿಷ್ಟ ಜಾತಿ ಮತ್ತು 32 ಪರಿಶಿಷ್ಟ ವರ್ಗದ ಹೆಣ್ಣುಮಕ್ಕಳ ಶಾಲೆಗಳನ್ನು ನಾವು ಈಗಾಗಲೇ ಸ್ಥಾಪನೆ ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿ ನಿಲಯಗಳಲ್ಲಿ ಭೋಜನ ವೆಚ್ಚ 450 ರಿಂದ 600 ರೂಪಾಯಿಗಳಿಗೆ ಮತ್ತು 500 ರಿಂದ 650 ರೂಪಾಯಿಗಳಿಗೆ ಈಗಾಗಲೇ ಹೆಚ್ಚಿಸಿದ್ದು, 2010-11ನೇ ಸಾಲಿನಲ್ಲಿ ಈ ವೆಚ್ಚವನ್ನು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ 450 ರೂಪಾಯಿಗಳಿಂದ 650 ರೂಪಾಯಿಗಳಿಗೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 650 ರಿಂದ 750 ರೂಪಾಯಿಗಳಿಗೆ ಹೆಚ್ಚಿಸುವಂತಹ ನಿರ್ಧಾರವನ್ನು ಈ ಆಯೋಗದಲ್ಲಿ ನಾನು ಹೇಳಿದ್ದೇನೆ. 2010-11ನೇ ಸಾಲಿನಲ್ಲಿ ದುರ್ಬಲ ವರ್ಗದವರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ 4,702 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. ಇದು 2009-10ರಲ್ಲಿ 4,000 ಕೋಟಿ ರೂಪಾಯಿ ಆಗಿತ್ತು. ಕ್ರೋಡೀಕೃತ ಅನುದಾನವನ್ನು 600 ಕೋಟಿಯಿಂದ 800 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ. ಮಾನ್ಯ ಜಿ.ಪರಮೇಶ್ವರ್‌ರವರೇ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ ಒದಗಿಸಿರುವಂತಹ ಬಜೆಟ್ ಅನುದಾನವನ್ನು 2010-11ನೇ ಸಾಲಿಗೆ 167 ಕೋಟಿ ರೂಪಾಯಿಗಳಿಂದ 207 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ನಮ್ಮ ಸರ್ಕಾರ ಶಿಕ್ಷಣಕ್ಕೆ

ಹಾಗೂ ಆರೋಗ್ಯಕ್ಕೆ ಬಹಳ ದೊಡ್ಡ ಪ್ರಮಾಣದ ಒತ್ತನ್ನು ಕೊಟ್ಟಿದೆ. ಶಿಕ್ಷಣ ಮತ್ತು ಆರೋಗ್ಯ ವಲಯಗಳಿಗೆ ಬಜೆಟ್ ಅನುದಾನವನ್ನು ಶೇಕಡಾ 21ರಷ್ಟು ಹೆಚ್ಚಿಸಿದ್ದೇವೆ.

(3-50 PM)

ಶಿಕ್ಷಣ ಮತ್ತು ಆರೋಗ್ಯ ವಲಯಗಳಿಗೆ ಬಜೆಟ್ ಅನುದಾನವನ್ನು ಶೇ 21 ರಷ್ಟು ಹೆಚ್ಚಿಸಿ, ಅಂದರೆ, 13,178 ಕೋಟಿಗೆ ನಿಗದಿಯನ್ನು ಮಾಡಿದೆ. ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ರೈಲ್ವೆ, ರಸ್ತೆ, ಇಂಧನ, ನಗರಾಭಿವೃದ್ಧಿ ಇತ್ಯಾದಿ ಇದಕ್ಕೆ 7,891 ಕೋಟಿ ರೂಪಾಯಿ ಅಂದರೆ ಒಟ್ಟು ಬಜೆಟ್‌ನ ಶೇ. 13ರಷ್ಟು ಹಣವನ್ನು ವಿನಿಯೋಗಿಸಲು ನಿರ್ಧಾರ ಮಾಡಿದ್ದೇವೆ. ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಅಂದರೆ, ಶಿಕ್ಷಣ, ಕೌಶಲ್ಯ ತರಬೇತಿ ಇತ್ಯಾದಿ ಕಾರ್ಯಕ್ರಮಗಳಿಗೆ 13,162 ಕೋಟಿ ರೂಪಾಯಿ ಅಂದರೆ ಒಟ್ಟು ಬಜೆಟ್‌ನ ಶೇ.22 ರಷ್ಟು ಹಣವನ್ನು ವಿನಿಯೋಗಿಸಿದ್ದೇವೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಗೌರವಾನ್ವಿತ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುವುದು ಏನೆಂದರೆ, ಬಹುಶಃ ಇಡೀ ದೇಶದಲ್ಲಿ ಅತ್ಯಂತ ನೆಮ್ಮದಿ ತರುವುದು, ಶೋಷಿತರು, ಪೀಡಿತರು, ದಲಿತರು ಎನ್ನುವುದು ಅಷ್ಟೇ ಅಲ್ಲ. ಎಲ್ಲಾ ವರ್ಗದ ಜನರಿಗೆ, ಎಲ್ಲಾ ವರ್ಗದ ಬಡ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಬೇಕೆನ್ನುವ ಆಸೆಯನ್ನು ಇಟ್ಟುಕೊಂಡು ನಾವು ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಸನ್ಮಾನ್ಯ ಅಧ್ಯಕ್ಷರೆ, ತಮಗೆ ಆಶ್ಚರ್ಯವಾಗಬಹುದು, ನಮ್ಮ ಗೌರವಾನ್ವಿತ ಸದಸ್ಯರು ಅಂಕಿ–ಅಂಶಗಳನ್ನು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ಯೋಜನೆಯಡಿ ಸನ್ಮಾನ್ಯ ಸಿದ್ದರಾಮಯ್ಯನವರೆ, ಇದುವರೆಗೂ 9,49,167 ಮಂದಿ ಫಲಾನುಭವಿಗಳನ್ನು ನಾವು ಗುರುತಿಸಿದ್ದೇವೆ. ಅಂದರೆ ಅವರಿಗೆ ಸವಲತ್ತುಗಳನ್ನು ಕೊಟ್ಟಿದ್ದೇವೆ. ಇದರಲ್ಲಿ 7,20,562 ಹೆಣ್ಣುಮಕ್ಕಳ ಹೆಸರಿನಲ್ಲಿ 831 ಕೋಟಿ ರೂಪಾಯಿಗಳ ಠೇವಣಿಯನ್ನು ಇಟ್ಟಿದ್ದೇವೆ. ಅಂದರೆ, ಆ ಠೇವಣಿಯನ್ನು ಇಟ್ಟು ಬಾಂಡ್ ಅನ್ನು ಕೊಟ್ಟಿದ್ದೇವೆ. ಈ ವರ್ಷ 2,28,605 ಮಂದಿ ಫಲಾನುಭವಿಗಳನ್ನು ಸದ್ಯದಲ್ಲಿಯೇ. . . 7,20,562 ಫಲಾನುಭವಿಗಳಿಗೆ ಬಾಂಡ್‌ಗಳ ವಿತರಣೆಯಾಗಿದೆ. ಯಾರಿಗೂ confusion ಆಗುವುದು ಬೇಡ. ಫಲಾನುಭವಿಗಳ ಒಟ್ಟು ಸಂಖ್ಯೆ 9,49,147. ಈಗಾಗಲೇ ಬಾಂಡ್‌ಗಳು ವಿತರಣೆಯಾಗಿರುವುದು 7,20,562 ಜನಕ್ಕೆ. ವೆಚ್ಚ ಮಾಡಿರತಕ್ಕಂಥ ಹಣ 831.98 ಕೋಟಿ ರೂಪಾಯಿಗಳು. ನಮ್ಮ ಸರ್ಕಾ ಅಧಿಕಾರಕ್ಕೆ ಬಂದ ನಂತರ ಈ 21 ತಿಂಗಳಿನಲ್ಲಿ ಸುಮಾರು 648 ಲಕ್ಷ

ಫಲಾನುಭವಿಗಳನ್ನು ಆಯ್ಕೆ ಮಾಡಿ ಸುಮಾರು 4.30 ಲಕ್ಷ ಬಾಂಡ್‌ಗಳನ್ನು ವಿತರಿಸಿದ್ದೇವೆ. ಇದಕ್ಕಾಗಿ ನಮ್ಮ ಸರ್ಕಾರ 524 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಬಹುಶಃ ಈ ಪ್ರಮಾಣದಲ್ಲಿ ಹಿಂದೆಂದೂ ಯಾರ ಕಾಲದಲ್ಲಿಯೂ ಆಗಿರಲಿಲ್ಲ. ಈ Programme ಒಂದು ವರ್ಷದ್ದಲ್ಲ. ಯಾವುದೇ ಸರ್ಕಾರ ಬರಲಿ, ಹೋಗಲಿ, ಯಾರು ಬೇಕಾದರೂ ಅಧಿಕಾರ ದಲ್ಲಿರಲಿ, ನಿರಂತರವಾಗಿ ಈ ಯೋಜನೆಯು ಮುಂದುವರೆಯುವುದರಿಂದ ಪರಿಣಾಮಗಳೇನು ಎನ್ನುವುದನ್ನು ಒಂದು ಕ್ಷಣ ಯೋಚನೆ ಮಾಡಿ. ನಾನು ಈಮನೆಯ ಮೂಲಕ ಒಂದು ಕರೆಯನ್ನು, ವಿನಂತಿಯನ್ನು ಮಾಡುತ್ತೇನೆ, ದಯಮಾಡಿ ಪಕ್ಷಭೇದ ಮರೆತು ನಿಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ತಾಯಿ, ಹೆಣ್ಣು ಮಗುವನ್ನು ಒಂದು ತಾಲ್ಲೂಕು ಕೇಂದ್ರಗಳಿಗೆ ಆಹ್ವಾನ ಮಾಡಿ ಕರೆಸಿ. ಈಗಾಗಲೇ ನಾವು ಬಜೆಟ್ ನಲ್ಲಿ ಆ ಮಗುವಿನ ತಾಯಿಯ ಆರೋಗ್ಯ ತಪಾಸಣೆ ಮಾಡಿದ್ದೇವೆ ಎಂದು ಹೇಳಿದ್ದೇವೆ. ಅದರ ಮೂಲಕ ಚಿಕ್ಕವಯಸ್ಸಿನಲ್ಲಿಯೇ ಅನೇಕ ರೀತಿಯ ರೋಗ-ರುಜಿನಗಳಿಗೆ ಅವರು ಒಳಗಾಗದೇ, ತಾಯಿ ಮತ್ತು ಮಗು ಆರೋಗ್ಯವಂತರಾಗಿರುವುದಕ್ಕೆ ಇದು ತುಂಬಾ ಉಪಯೋಗವಾಗುತ್ತದೆ, ಇದೊಂದು ಪುಣ್ಯದ ಕೆಲಸ. ನಮ್ಮ ಎಲ್ಲಾ ಶಾಸಕರು ಇದನ್ನು ಮಾಡಬೇಕೆಂದು ನಾನು ಅತ್ಯಂತ ವಿನಯದಿಂದ ಈ ಸಂದರ್ಭದಲ್ಲಿ ವಿಂತಿ ಮಾಡುತ್ತೇನೆ.

ಇವತ್ತು ಇನ್ನೊಂದು ವಿಚಾರವೆಂದರೆ, ಅತ್ಯಂತ ಜನ ನೆನಪಿಟ್ಟು ಕೊಳ್ಳುತ್ತಿರುವಂಥ ಮತ್ತು ನಾವೇ ಬೆನ್ನು ತಟ್ಟಿಕೊಳ್ಳುವಂಥ ಕಾರ್ಯಕ್ರಮ ಏನೆಂದರೆ, '108 ಯೋಜನೆ'ಯಡಿಯಲ್ಲಿ ಎಲ್ಲಾ 30 ಜಿಲ್ಲೆಗಳಲ್ಲಿ 517 ಆಂಬುಲೆನ್ಸ್‌ಗಳನ್ನು ಕೊಟ್ಟು ಅದು ಅಲ್ಲಿ ಕಾರ್ಯನಿರ್ವಹಣೆ ಮಾಡುತ್ತಿರು ವಂಥದ್ದು. ಸುಮಾರು ನಾಲ್ಕೂವರೆ ಲಕ್ಷ ಜನರ ಜೀವವನ್ನು ರಕ್ಷಣೆ ಮಾಡತಕ್ಕಂಥ ಒಂದು ವಿಶೇಷ ಕಾರ್ಯಕ್ರಮವಾಗಿದೆ. ಇದರ ಉಪಯೋಗ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಬಹುಶಃ ಬಡವರ ಮನೆಗಳಿಗೆ vehicle ಬಂದು ನಿಲ್ಲುವುದಿಲ್ಲ. ಶ್ರೀಮಂತರಿಗೆ ಏನಾದರೂ ತೊಂದರೆ ಯಾಯಿತು ಎಂದರೆ ಅವರ ಮನೆ ಬಾಗಿಲಿಗೆ ಕಾರು ಬಂದು ನಿಲ್ಲುತ್ತದೆ ಅಥವಾ ವಾಹನ ಬಂದು ನಿಲ್ಲುತ್ತದೆ. ಆದರೆ ಬಡವರ ಮನೆ ಮುಂದೆ ಯಾವತ್ತೂ ವಾಹನ ಬಂದು ನಿಲ್ಲುವುದಿಲ್ಲ. 108 ಕ್ಕೆ ಫೋನ್ ಮಾಡಿದಂಥ

ಕೆಲವೇ ನಿಮಿಷಗಳಲ್ಲಿ ಬಂದು ಹತ್ತಿರದ ಆಸ್ಪತ್ರೆಗೆ ಹೋಗಿ treatment ಕೊಡಿಸಿ ಅವರ ಪ್ರಾಣ ಉಳಿಸುವಂಥ ಕಾರ್ಯಕ್ರಮವಾಗಿದೆ. ಇದು ನಿಜಕ್ಕೂ ಸಹಾ ದೇವರು ಮೆಚ್ಚುವಂಥ ದೊಡ್ಡ ಕಾರ್ಯಕ್ರಮ. ನಮ್ಮೆಲ್ಲರ ಒಂದು ಪ್ರಯತ್ನದಿಂದ ಇನ್ನೂ ಅದು ಯಶಸ್ವಿಯಾಗಿ ಆಗುವಂತೆ ನೋಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಸದನದ ಮೂಲಕ ವಿನಂತಿಯನ್ನು ಮಾಡುತ್ತೇನೆ. ಕೆಲವು ಪ್ರಮುಖ ಇಲಾಖೆಗಳ ವೆಚ್ಚಗಳ ತುಲನಾತ್ಮಕ ಚಿತ್ರಣವನ್ನು ಈ ಸದನಕ್ಕೆ ನೀಡುವಂಥ ಅಗತ್ಯವಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ 2004–05ರಲ್ಲಿ 787 ಕೋಟಿ ರೂಪಾಯಿಗಳು, 2005–06 ರಲ್ಲಿ 674 ಕೋಟಿ ರೂಪಾಯಿಗಳು, 2006–07ರಲ್ಲಿ 874 ಕೋಟಿ ರೂಪಾಯಿಗಳು, 2007–08ರಲ್ಲಿ 1,264 ಕೋಟಿ ರೂಪಾಯಿಗಳು, 2008–09ರಲ್ಲಿ 1,323 ಕೋಟಿ ರೂಪಾಯಿಗಳು, 2009–10ರಲ್ಲಿ 1,458 ಕೋಟಿ ರೂಪಾಯಿಗಳನ್ನು ನಾವು ಈ ವಲಯಕ್ಕೆ ತೆಗೆದಿಟ್ಟಿದ್ದೆವು.

ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ, 2004–05 ರಲ್ಲಿ 1,291 ಕೋಟಿ ರೂಪಾಯಿ ಇದ್ದರೆ, 2008–09ರಲ್ಲಿ 3,104 ಕೋಟಿ ರೂಪಾಯಿ ಆಯಿತು. 2009–10ರಲ್ಲಿ 3,542 ಕೋಟಿ ರೂಪಾಯಿ ಆಯಿತು. ನಗರಾಭಿವೃದ್ಧಿಗೆ ಇಲಾಖೆಗೆ ಸಂಬಂಧಿಸಿದಂತೆ, ಬಹುಶಃ ತಮಗೆ ಆಶ್ಚರ್ಯ ವಾಗಬಹುದು, 2004–05ರಲ್ಲಿ 1,492 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದರೆ, 2007–08ರಲ್ಲಿ 3,573 ಕೋಟಿ ರೂಪಾಯಿ, 2008–09ರಲ್ಲಿ 3,612 ಕೋಟಿ ರೂಪಾಯಿ, 2009–10ರಲ್ಲಿ 4,418 ಕೋಟಿ ರೂಪಾಯಿ. ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ, 2004–05ರಲ್ಲಿ 3,217 ಕೋಟಿ ರೂಪಾಯಿ, 2005–06ರಲ್ಲಿ 3,531 ಕೋಟಿ ರೂಪಾಯಿ, 2006–07ರಲ್ಲಿ 4,377 ಕೋಟಿ ರೂಪಾಯಿ, 2007–08ರಲ್ಲಿ 3,759 ಕೋಟಿ ರೂಪಾಯಿ, 2008–09ರಲ್ಲಿ 3,203 ಕೋಟಿ ರೂಪಾಯಿ, 2009–10ರಲ್ಲಿ 4,508 ಕೋಟಿ ರೂಪಾಯಿ, ಅದೇ ರೀತಿ ಲೋಕೋಪಯೋಗಿ ಇಲಾಖೆಯಲ್ಲಿಯೂ ಸಹಾ ಸಾಕಷ್ಟು ಹಣವನ್ನು ಒದಗಿಸಿದ್ದೇವೆ. ಯೋಜನಾ ವೆಚ್ಚ, 2009–10ರ ವಾರ್ಷಿಕ ಯೋಜನಾ ಗಾತ್ರವನ್ನು 29,500 ಕೋಟಿ ರೂಪಾಯಿ ಎಂದು ನಿರ್ಧರಿಸಿದ್ದೇವೆ. ಈ ಪೈಕಿ 22,480 ಕೋಟಿ ರೂಪಾಯಿಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಮತ್ತು 7,020 ಕೋಟಿ ರೂಪಾಯಿಗಳ ವೆಚ್ಚವನ್ನು ಸೆಸ್ ಹಾಗೂ ವಿವಿಧ ಸರ್ಕಾರಿ ಸಂಸ್ಥೆಗಳ ಸಂಪನ್ಮೂಲಗಳಿಂದ ತುಂಬಿಕೊಳ್ಳುವಂಥ

ಅಂದಾಜು ಮಾಡಲಾಗಿತ್ತು. ಈ ಅಂದಾಜಿಗೆ ಪ್ರತಿಯಾಗಿ, ಏಕೆಂದರೆ ಮಾನ್ಯ ಜಯಚಂದ್ರರವರೆ, ಅಂಕಿ-ಅಂಶಗಳ ಬಗ್ಗೆ ಸಾಕಷ್ಟು ವಿವಾದಗಳು, ಚರ್ಚೆಗಳು ನಡೆಯುತ್ತಿವೆ. ಅದರ ವಾಸ್ತವಿಕಾಂಶ ಬೇರೆ ಇದೆ. ಈ ಅಂದಾಜಿಗೆ ಪ್ರತಿಯಾಗಿ ಸಂಚಿತ ನಿಧಿಯಿಂದ 21,336 ಕೋಟಿ ರೂಪಾಯಿಗಳನ್ನು ವಿವಿಧ ಸಂಸ್ಥೆಗಳ ಸಂಪನ್ಮೂಲದಿಂದ 4,631 ಕೋಟಿ ರೂಪಾಯಿ ಸೇರಿ ಆರ್ಥಿಕ ವರ್ಷಾಂತ್ಯಕ್ಕೆ 25,967 ಕೋಟಿ ರೂಪಾಯಿ ಯೋಜನಾ ವೆಚ್ಚ ಅಂದಾಜು ಆಗುತ್ತಿದೆ. 2008-09ನೇ ಸಾಲಿನಲ್ಲಿ ಆಗಿದ್ದ ಯೋಜನಾ ವೆಚ್ಚ 22,577 ಕೋಟಿ ರೂಪಾಯಿ. ಅದಕ್ಕೆ ಹೋಲಿಸಿದಾಗ, 2009-10ನೇ ಸಾಲಿನಲ್ಲಿ ಶೇ.15 ರಷ್ಟು ಹೆಚ್ಚು ಯೋಜನಾ ವೆಚ್ಚವನ್ನು ಮಾಡಿದ್ದೇವೆ. ಯೋಜನಾ ವೆಚ್ಚ ನಿರೀಕ್ಷೆಯಂತೆ ಆಗಿಲ್ಲ ಅಥವಾ ಅಂಕಿ-ಅಂಶಗಳು ತಪ್ಪು ಗ್ರಹಿಕೆ ಆಗುತ್ತಿದೆ ಎನ್ನುವ ಮಾತಿನಲ್ಲಿ ಅರ್ಥವಿಲ್ಲ. ಇಡೀ ರಾಷ್ಟ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ನಮ್ಮ ರಾಜ್ಯ ಯೋಜನಾ ವೆಚ್ಚದಲ್ಲಿ ಶೇ.15 ರಷ್ಟು ಹೆಚ್ಚಳವನ್ನು ಸಾಧಿಸಿದೆ ಎನ್ನುವುದು ಮೆಚ್ಚತಕ್ಕಂಥ ಸಂಗತಿ ಎಂದು ನಾನು ಅಂದಿಕೊಂಡಿದ್ದೇನೆ. ನೀವು ಅದನ್ನು ಒಪ್ಪುತ್ತೀರೆಂದು ನಾನು ಭಾವಿಸಿದ್ದೇನೆ. 2010-11ನೇ ಸಾಲಿನ ಯೋಜನಾ ಗಾತ್ರ, ನಾನು ಈಗಾಗಲೇ ತಿಳಿಸಿದಂತೆ 2010-11ನೇ ಸಾಳಿಗೆ 31 ಸಾವಿರ ಕೋಟಿ ರೂಪಾಯಿಗಳ ಯೋಜನ ಗಾತ್ರದ ಪ್ರಸ್ತಾಪ ಸಲ್ಲಿಸಿತ್ತು, ಯೋಜನಾ ಆಯೋಗ, ಚರ್ಚೆ ಮಾಡುವಂಥ ಸಂದರ್ಭದಲ್ಲಿ 31 ಸಾವಿರ 50 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿ ಅಂತಿಮಗೊಳಿಸಿದೆ. 2009-10ನೇ ಸಾಲಿನ 25,967 ಕೋಟಿ ರೂಪಾಯಿ ಪರಿಷ್ಕೃತ ಯೋಜನಾ ವೆಚ್ಚದ ಅಂದಾಜಿಗೆ ಹೋಲಿಸಿದರೆ, ಇದು ಶೇ.20 ರಷ್ಟು ಹೆಚ್ಚಾಗಿದೆ. ರಾಜ್ಯದ ಅರ್ಥ ವ್ಯವಸ್ಥೆಯಲ್ಲಿ ಕಂಡುಬರುತ್ತಿರುವಂಥ ಚೇತರಿಕೆಯಿಂದಾಗಿ ಈ ಹೆಚ್ಚಳ ಸಾಧ್ಯವಾಗಿದೆ. ಕೇಂದ್ರ ಯೋಜನಾ ಆಯೋಗ ಸಹಾ ಇದನ್ನು ಒಪ್ಪಿಕೊಂಡಿದೆ. ರಾಜ್ಯದ 2010-11ರ ಆಯವ್ಯಯವನ್ನು ಮತ್ತು ಯೋಜನಾ ವೆಚ್ಚದ ಗಾತ್ರವನ್ನು ನಿರ್ಧಾರ ಮಾಡುವುದಕ್ಕೆ ಮುನ್ನ ಅಧಿಕಾರಿಗಳ ಮಟ್ಟದಲ್ಲಿ ಮುಂದಿನ ವರ್ಷದ ಯೋಜನೆಯ ಬಗ್ಗೆ ಕಾರ್ಯಕಾರಿ ಗುಂಪುಗಳ (Working groups) ಮೂಲಕ ಚರ್ಚೆ ಮಾಡುತ್ತಿದ್ದೇವೆ.

ಆಯವ್ಯಯ ಮಂಡನೆಯಾದ ಬಳಿಕ ಯೋಜನಾ ಆಯೋಗದ ಉಪಾಧ್ಯಕ್ಷರೊಂದಿಗೆ ನಡೆಸಿದ ಸಭೆಯಲ್ಲಿ ನಮ್ಮ ಯೋಜನಾ ಕಾರ್ಯಕ್ರಮಗಳಿಗೆ ಅಧಿಕೃತ ಒಪ್ಪಿಗೆ ಸಹ ಪಡೆದಿದ್ದೇವೆ. ಅಲ್ಲದೆ, ರಾಜ್ಯದ ವಿವಿಧ

ಅಭಿವೃದ್ಧಿ ಸಂಬಂಧಿತ ವಿಷಯಗಳಿಗೆ ಯೋಜನಾ ಆಯೋಗದ ಸಹಕಾರ ಮತ್ತು ಬೆಂಬಲವನ್ನೂ ನಾವು ಕೋರಿದ್ದೇವೆ. ಬಹಳ ಸಂತೋಷದಿಂದ ಯೋಜನಾ ಆಯೋಗದ ಮುಂದೆ ಹೋಗಿ ಚರ್ಚೆಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಕರ್ನಾಟಕದ ಪ್ರಗತಿ ಬಗ್ಗೆ ಅವರು ತೋರಿದ ಕಾತರ ಮತ್ತು ರಾಜ್ಯದಲ್ಲಿ ಆಗುತ್ತಿರುವ ಕ್ರಾಂತಿಕಾರಿ ಬದಲಾವಣೆಗಳ ಕುರಿತಂತೆ ಅನೇಕ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆಯುವ ಪ್ರಯತ್ನವನ್ನು ಯೋಜನಾ ಆಯೋಗದವರು ಮಾಡಿದರು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪ್ರತಿ ಪಕ್ಷದ ನಾಯಕರು, ವಿಶೇಷವಾಗಿ ಸಿದ್ದರಾಮಯ್ಯನವರು, ಜಯಚಂದ್ರರವರು ರಾಜ್ಯದ ಸದ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಬಹಳಷ್ಟು ವಿಚಾರಗಳನ್ನು ಚರ್ಚಿಸಿ ಬೆಳಕು ಚೆಲ್ಲಿದ್ದಾರೆ. 2010–11ರ ಮುಂಗಡ ಆಯವ್ಯಯ ಪತ್ರದಲ್ಲಿ ನಮ್ಮ ರಾಜ್ಯದ ಸದ್ಯದ ಹಣಕಾಸಿನ ಪರಿಸ್ಥಿತಿಯ ಸ್ಥೂಲ ಚಿತ್ರಣ ನೀಡಿ ಇತರ ರಾಜ್ಯಗಳೊಂದಿಗೆ ಪರಿಸ್ಥಿತಿ ಹೋಲಿಕೆ ಮಾಡಲಾಗಿದೆ. ಏಕೆಂದರೆ, ಇಲ್ಲಿ ಕುಳಿತಿರುವ ಗೌರವಾನ್ವಿತ ಮಾನ್ಯ ಸದಸ್ಯರುಗಳಿಗೆ ಸಂಬಂಧಪಟ್ಟಿರುವುದು ಗಮನಿಸಬೇಕಾಗಿರುವು ದೇನೆಂದರೆ, ನಾನೂ ಪ್ರತಿಪಕ್ಷದಲ್ಲಿದ್ದು ಟೀಕಿಸಿದ್ದೇನೆ. ಅದೇ ರೀತಿ ಪ್ರತಿ ಪಕ್ಷದಲ್ಲಿ ಕುಳಿತಿರುವ ನೀವೂ ಟೀಕೆ ಮಾಡಲೇಬೇಕು. ಎಲ್ಲಿಯೋ ಗುರಿ ಮುಟ್ಟಿದ್ದೇವೆಂದು ತೃಪ್ತಿ ಹೊಂದಲು ಸಾಧ್ಯವಿಲ್ಲ. ಅದನ್ನು ನಿಮ್ಮಿಂದ ನಿರೀಕ್ಷಿಸಲೂ ಸಾಧ್ಯವಿಲ್ಲ. ಆದರೆ, ಇಂತಹ ಆರ್ಥಿಕ ಸಂಕಷ್ಟದ ಸಂದರ್ಭದಲ್ಲಿ ನಮ್ಮ ಭಾರತ ದೇಶದ ಆರ್ಥಿಕ ಸ್ಥಿತಿ, ಅಲ್ಲಿಯ ಪ್ರಗತಿ, ಮುಂದುವರೆದ ಬೇರೆ ರಾಜ್ಯಗಳ ಪ್ರಗತಿ ಮತ್ತು ಅದಕ್ಕೆ ಸರಿಸಮಾನವಾಗಿ ಕರ್ನಾಟಕದ ಪ್ರಗತಿಯನ್ನು ಹೋಲಿಕೆ ಮಾಡಿ, ತುಲನೆ ಮಾಡಿ ನೋಡದಿದ್ದರೆ, ನಾನು ಆತ್ಮವಂಚನೆ ಮಾಡಿಕೊಂಡಂತಾಗುತ್ತದೇನೋ? ಅಥವಾ ವಾಸ್ತವಿಕ ಸ್ಥಿತಿ ಗೊತ್ತಿದ್ದೂ ಗೊತ್ತಿಲ್ಲದೇ ಕಣ್ಮುಚ್ಚಿ ಕುಳಿತಂತಾಗುತ್ತದೇನೋ? ಎನ್ನುವ ದೃಷ್ಟಿಯಿಂದ ನಾನು ಕೆಲವು ಸಂಗತಿಗಳನ್ನು ನಿಮ್ಮ ಗಮನಕ್ಕೆ ತರಲು ಇಷ್ಟಪಡುತ್ತಿದ್ದೇನೆ.

2004–05 ರಿಂದ ಪ್ರತಿ ವರ್ಷವೂ ರಾಜ್ಯದ ತೆರಿಗೆ ಆದಾಯ ಮತ್ತು ಒಟ್ಟಾರೆ ವಿತ್ತೀಯ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಈಗಾಗಲೇ ಮಧ್ಯಮಾವಧಿ ವಿತ್ತೀಯ ಯೋಜನೆ ಮೂಲಕ ವಿವರಣೆ ಕೊಟ್ಟಿದ್ದೇನೆ. ಆದರೆ, ಇಡೀ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯಲ್ಲಿ ಆಗಿರುವ ಕೆಲವು

ಬದಲಾವಣೆಗಳು ಕರ್ನಾಟಕದ ಹಣಕಾಸಿನ ಪರಿಸ್ಥಿತಿ ಮೇಲೆ ಹೇಗೆ ಪರಿಣಾಮವುಂಟು ಮಾಡಿದೆ ಎಂಬುದನ್ನು ಮನಗಾಣುವುದಕ್ಕೋಸ್ಕರ ಇತರ ರಾಜ್ಯಗಳ ಜೊತೆ ಹೋಲಿಕೆ ಮಾಡಿ ನೋಡುವ ಅಗತ್ಯವಿದೆಯೆಂದು ನಾನು ಭಾವಿಸಿದ್ದೇನೆ. ಕೇಂದ್ರ ಸರ್ಕಾರವು ಇತ್ತೀಚೆಗೆ ಪ್ರಕಟಿಸಿರುವ ಆರ್ಥಿಕ ಸಮೀಕ್ಷೆ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟಾರೆ ಆರ್ಥಿಕ ಪರಿಸ್ಥಿತಿಯಲ್ಲಿ ಆಗಿರುವ ಬದಲಾವಣೆ ಈ ರೀತಿ ಇದೆ. ಜಯಚಂದ್ರರವರೆ, 2006–07ರಲ್ಲಿ ಎಲ್ಲಾ ರಾಜ್ಯಗಳಿಂದ 24,856 ಕೋಟಿ ಹೆಚ್ಚಳವಾಗಿದ್ದರೆ, ಕರ್ನಾಟಕದಲ್ಲಿ 4,152 ಕೋಟಿ ಹೆಚ್ಚಳವಾಗಿದೆ. 2007–08ರಲ್ಲಿ 43,406 ಕೋಟಿ ಹೆಚ್ಚಳವಾಗಿದ್ದರೆ, ಕರ್ನಾಟಕದಲ್ಲಿ 3,540 ಕೋಟಿ, 2008–09ರಲ್ಲಿ ಹೇಗೆ ಇಳಿಮುಖವಾಯಿತು ಎಂದರೆ, 7,337 ಕೋಟಿ ಹೆಚ್ಚಳವಾದರೆ, ನಮ್ಮ ರಾಜ್ಯದಲ್ಲಿ 1,114 ಕೋಟಿ ಹೆಚ್ಚಳವಾಯಿತು. ಅದೇ ರೀತಿ 2009–10ರಲ್ಲಿ ಯಾವ ಪ್ರಮಾಣದಲ್ಲಿ ಆಯಿತು ಎಂದರೆ, minus 37,058 ಕೋಟಿ ಕೊರತೆಯುಂಟಾಯಿತು. ನಮ್ಮ ರಾಜ್ಯದಲ್ಲಿ 1,151 ಕೋಟಿ ಹೆಚ್ಚಳವಾಯಿತು.

ಹಾಗೆಯೇ ವಿತ್ತೀಯ ಕೊರತೆ ಕುರಿತು ಹೇಳುವುದಾದರೆ, ಇದು ಎಲ್ಲರೂ ಚರ್ಚೆ ಮಾಡುವ ಬಹಳ ಪ್ರಮುಖವಾದ ಅಂಶವಾಗಿದೆ. 2006–07ರಲ್ಲಿ ಎಲ್ಲಾ ರಾಜ್ಯಗಳಿಂದಲೂ ಸೇರಿ 77,508 ಕೋಟಿ ರೂ.ಗಳಷ್ಟು ವಿತ್ತೀಯ ಕೊರತೆಯಾಗಿದೆ. ಅಂದರೆ, ಶೇಕಡ 1.8 ರಷ್ಟಾಗಿದೆ. ಆದರೆ, ಕರ್ನಾಟಕದಲ್ಲಿ 4,688 ಕೋಟಿ ರೂ. ವಿತ್ತೀಯ ಕೊರತೆವುಂಟಾಗಿದೆ. ಅಂದರೆ, ಶೇಕಡ 2.3 ರಷ್ಟು. ಅದೇ ರೀತಿ 2007–08ರಲ್ಲಿ 68,572 ಕೋಟಿ ರೂ. ಅಂದರೆ ಶೇಕಡ 1.4, ಕರ್ನಾಟಕದಲ್ಲಿ 5,331 ಕೋಟಿ ರೂ. ಅಂದರೆ, ಶೇಕಡ 2.2 ರಷ್ಟು. 2008–09ರಲ್ಲಿ 1,43,924 ಕೋಟಿ ರೂ. ಅಂದರೆ, ಶೇಕಡ 2.6 ರಷ್ಟು. ಕರ್ನಾಟಕವು ಅದೇ ವೇಗದಲ್ಲಿ 9,357 ಕೋಟಿ ರೂ.ಗಳಷ್ಟು ವಿತ್ತೀಯ ಕೊರತೆ ಅನುಭವಿಸಿದೆ. 2009–10ರಲ್ಲಿ 1,97,186 ಕೋಟಿ ರೂ. ಆಗಿದ್ದರೆ, ಕರ್ನಾಟಕದಲ್ಲಿ 8,493 ಕೋಟಿರೂ.ಗಳಾಗಿದೆ, ಅಂದರೆ, ಮೇಲಿನ ಹೇಳಿಕೆಯಿಂದ ಕಂಡು ಬರುವ ಮುಖ್ಯ ಅಂಶವೆಂದರೆ, 2008–09ರಲ್ಲಿ ಎಲ್ಲಾ ರಾಜ್ಯಗಳ ಒಟ್ಟಾರೆ ರಾಜಸ್ವ ಹೆಚ್ಚಳ (Revenue Surplus) ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. 2009–10ರಲ್ಲಿ ರಾಜಸ್ವ ಕೊರತೆ (revenue Deficit) ಯಿಂದ ಪರಿಣಾಮವುಂಟಾಯಿತು. ಅದೇ ರೀತಿ 2005–06 ರಿಂದ 2007–08ರವರೆಗೆ ಅದು ಕ್ರಮೇಣ ಕಡಿಮೆಯಾಗುತ್ತಾ

ಬಂತು. ವಿತ್ತೀಯ ಕೊರತೆ 2008–09ರಲ್ಲಿ ಮತ್ತು 2009–10ರಲ್ಲಿ ಗಣನೀಯವಾಗಿ ಹೆಚ್ಚಿದೆ ಎಂಬುದನ್ನು ಗೌರವಾನ್ವಿತ ಮಾನ್ಯ ಸದಸ್ಯರುಗಳಾದ ತಾವೆಲ್ಲರೂ ಗಮನಿಸಬೇಕು.

ರಾಷ್ಟ್ರದ ಎಲ್ಲಾ ರಾಜ್ಯಗಳ ಹಣಕಾಸಿನ ಪರಿಸ್ಥಿತಿ ಮೇಲೆ 2008–09 ಮತ್ತು 2009–10ರಲ್ಲಿ ಆರ್ಥಿಕ ಹಿನ್ನಡೆಯಿಂದ ಪ್ರತಿಕೂಲ ಪರಿಣಾಮ ವುಂಟಾಗಿದ್ದರೂ ಕರ್ನಾಟಕದ ಮೇಲೆ ಆರ್ಥಿಕ ಹಿನ್ನಡೆಯಿಂದ ಸ್ವಲ್ಪಮಟ್ಟಿಗೆ ಪ್ರತಿಕೂಲ ಪರಿಣಾಮವುಂಟಾಗಿರುವುದು ಅಂಕಿ–ಅಂಶಗಳಿಂದ ಗೋಚರವಾ ಗುತ್ತದೆಂದು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತಿದ್ದೇನೆ. 2008–09 ರಲ್ಲಿ ಎಲ್ಲಾ ರಾಜ್ಯಗಳ ರಾಜಸ್ವ ಹೆಚ್ಚಳ ಅತಿ ಕಡಿಮೆ ಮಟ್ಟಕ್ಕೆ ಬಂದಿತು. 2009–10ರಲ್ಲಿ ರಾಜ್ಯಗಳ ಒಟ್ಟಾರೆ ರಾಜಸ್ವ ಲೆಕ್ಕದಲ್ಲಿ ಕೊರತೆ ಪರಿಸ್ಥಿತಿ ಉದ್ಭವಿಸಿರುವುದು ಸ್ಪಷ್ಟವಾಗುತ್ತದೆ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ನಮ್ಮ ರಾಜ್ಯವು ರಾಜಸ್ವ ಹೆಚ್ಚಳ (Revenue Surplus) ದಲ್ಲಿ ಆ ಪರಿಸ್ಥಿತಿ ಕಾಯ್ದುಕೊಂಡು ಬಂದಿರುವುದು ಬಹಳ ಗಮನಾರ್ಹವಾದ, ಗಮನಿಸ ಬೇಕಾದ ಅಂಶವಾಗಿದೆ. ಅದರಂತೆ ನಮ್ಮ ವಿತ್ತೀಯ ಕೊರತೆ ಕೂಡ ಶಾಸನಬದ್ಧ ಮಿತಿಯೊಳಗೆ ಆಯ್ದುಕೊಂಡು ಬಂದಿರುವುದು ಸಹ ಗಮನಿಸಬೇಕಾದ ಅಂಶವಾಗಿದೆ.

ಜಯಚಂದ್ರರವರೆ, 2010–11ರಲ್ಲಿನ ವಿತ್ತೀಯ ಕೊರತೆ ಕುರಿತಂತೆ ನಾನು ಈಗಾಗಲೇ ಹೇಳಿದಂತೆ, ಶೇಕಡ 3ರೊಳಗೆ ನಿರ್ಬಂಧಿಸುವುದಕ್ಕೆ ನಮ್ಮ ಸರ್ಕಾರವು ಬದ್ಧವಾಗಿದೆ. ಆದುದರಿಂದ, ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿ ಹದಗೆಡುತ್ತಿದೆ ಎಂಬ ಟೀಕೆಗೆ ಯಾವುದೇ ಆಧಾರವಿಲ್ಲ. ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸುವ, ಉತ್ಪ್ರೇಕ್ಷೆ ಮಾಡುವ ಟೀಕೆ ಏನಿದೆ, ಇದಕ್ಕೂ ಸಹ ಯಾವುದೇ ಆಧಾರವಿಲ್ಲವೆಂದು ನಾನು ಹೇಳಬಯಸುತ್ತೇನೆ.

"2009ರ ಡಿಸೆಂಬರ್ ಅಂತ್ಯದವರೆಗೆ ಆಗಿರುವ ಯೋಜನಾ ವೆಚ್ಚದ ಬಗ್ಗೆ ತಾವು ಹೇಳಿದ್ದೀರಿ. ಡಿಸೆಂಬರ್ ಅಂತ್ಯದ ಅಂಕಿ–ಅಂಶ ಕೊಟ್ಟಿದ್ದೀರಿ. ಹಾಗಾಗಿ, ನಾವು ಆ ಹೇಳಿಕೆ ಕೊಡಬೇಕಾಯಿತು" ಎಂದು ಸಿದ್ದರಾಮಯ್ಯ ನವರು ಒಂದು ಸಲ ಹೇಳಬೇಕಾಯಿತು. ಆದರೆ, ವಾಸ್ತವಿಕವಾಗಿ ಏನಿದೆ? ರಾಜ್ಯದ ಆಯವ್ಯಯದಲ್ಲಿ 2009–10ರ ಯೋಜನಾ ವೆಚ್ಚ ಖಜಾನೆಯಿಂದ 24,514 ಕೋಟಿ ಆಗಬಹುದೆಂದು ಅಂದಾಜು ಮಾಡಿದ್ದೆವು. ಈಗ ಮಂಡಿಸಿರುವ ಪರಿಷ್ಕೃತ ಅಂದಾಜಿನ ಪ್ರಕಾರ 2010ರ ಮಾರ್ಚಿ ಅಂತ್ಯದೊಳಗೆ ಖಜಾನೆಯಿಂದ 23,329 ಕೋಟಿ ಯೋಜನಾ

ವೆಚ್ಚವಾಗುತ್ತದೆ. ಅಂದರೆ, ಡಿಸೆಂಬರ್ 2009ಕ್ಕೆ 12,513 ಕೋಟಿ ಯೋಜನಾ ವೆಚ್ಚ ಮಾತ್ರ ಆಗಿರುವುದು. ಮಾರ್ಚ್ ಅಂತ್ಯಕ್ಕೆ ಯೋಜನಾ ವೆಚ್ಚದಲ್ಲಿ ಶೇಕಡ 25ರಷ್ಟು ಕಡಿತವುಂಟಾಗುತ್ತದೆಂದು ವಿರೋಧ ಪಕ್ಷದ ನಾಯಕರು ಹೇಳಿದರು. ಇದು ಸರಿಯಲ್ಲ ಎನ್ನುವುದು ಕಳೆದ 5 ವರ್ಷಗಳ ಅವಧಿಯಲ್ಲಾಗಿರುವ ವೆಚ್ಚವನ್ನು ಹೋಲಿಕೆ ಮಾಡಿದಾಗ ಪ್ರತಿ ವರ್ಷವೂ ಯಾವ ರೀತಿ ಡಿಸೆಂಬರ್ ವರೆಗೆ ವೆಚ್ಚವಾಗುತ್ತದೆ ಮತ್ತು ಡಿಸೆಂಬರ್ ನಂತರ ಜನವರಿಯಿಂದ ಮಾರ್ಚ್ ಅಂತ್ಯದವರೆಗೆ ವೆಚ್ಚವಾಗುತ್ತದೆ ಎನ್ನುವುದನ್ನು ಅಂಕಿ–ಅಂಶಗಳನ್ನು ನೋಡಿದಾಗ ಗೊತ್ತಾಗುತ್ತದೆ. ಉದಾಹರಣೆಗೆ, 2004–05ರಲ್ಲಿ ಡಿಸೆಂಬರ್ ವರೆಗೆ 5,043 ಕೋಟಿ ರೂ. ವೆಚ್ಚವಾಗಿದ್ದರೆ, ಜನವರಿಯಿಂದ ಮಾರ್ಚ್‌ವರೆಗೆ 5,151 ಕೋಟಿ ರೂ. ಒಟ್ಟು ವೆಚ್ಚ 10,194 ಕೋಟಿ ರೂ. 2006–07ರಲ್ಲಿ 7,844 ಕೋಟಿ ರೂ. ಡಿಸೆಂಬರ್‌ವರೆಗೆ ವೆಚ್ಚವಾಗಿದ್ದರೆ, ಜನವರಿಯಿಂದ ಮಾರ್ಚ್‌ವರೆಗೆ 8,725 ಕೋಟಿ ರೂ. ಅಂದರೆ, 16,569 ಕೋಟಿ ರೂ. 2007–08ರಲ್ಲಿ ಡಿಸೆಂಬರ್‌ವರೆಗೆ 7,721 ಕೋಟಿ ರೂ. ವೆಚ್ಚವಾಗಿದ್ದರೆ, ಜನವರಿಯಿಂದ ಮಾರ್ಚ್‌ವರೆಗೆ 8,542 ಕೋಟಿ ರೂ. ಅಂದರೆ, 16,263 ಕೋಟಿ ರೂ.ಗಳು. 2008–09ರಲ್ಲಿ ಒಟ್ಟು 9,550 ಕೋಟಿ ರೂ. ಡಿಸೆಂಬರ್‌ವರೆಗೆ ವೆಚ್ಚವಾಗಿದ್ದರೆ, ಜನವರಿಯಿಂದ ಮಾರ್ಚ್‌ವರೆಗೆ 10,339 ಕೋಟಿ ರೂ. ಅಂದರೆ, 19,889 ಕೋಟಿ ರೂ. ಆಗಿದೆ. 2009–10ರ ಪರಿಷ್ಕೃತ ಅಂದಾಜು ಪ್ರಕಾರ ಡಿಸೆಂಬರ್‌ವರೆಗೆ 12,517 ಕೋಟಿ ರೂ. ಅಂದರೆ, ನಾವು ಹೆಚ್ಚು ವೆಚ್ಚ ಮಾಡಿದ್ದೇವೆ. ಜನವರಿಯಿಂದ ಮಾರ್ಚ್‌ವರೆಗೆ 10,812 ಕೋಟಿ ರೂ. ಒಟ್ಟು 23,329 ಕೋಟಿ ರೂ.ಗಳನ್ನು ನಾವು ವೆಚ್ಚ ಮಾಡುತ್ತಿದ್ದೇವೆ.

ಅಂದರೆ, ಮೇಲಿನ ಅಂಕಿ–ಅಂಶಗಳಿಂದ ತಿಳಿದು ಬರುವ ಸಂಗತಿ ಯೇನೆಂದರೆ, ಪ್ರತಿ ವರ್ಷವೂ ಜನವರಿಯಿಂದ ಮಾರ್ಚ್‌ವರೆಗೆ ಅಂದರೆ, ಆರ್ಥಿಕ ವರ್ಷದ ಕಡೆಯ ತ್ರೈಮಾಸಿಕದಲ್ಲಿ ಶೇಕಡ 44 ರಿಂದ 53 ರಷ್ಟು ಯೋಜನಾ ವೆಚ್ಚವಾಗುತ್ತಿದೆ ಎನ್ನುವುದು ಅಂಕಿ–ಅಂಶಗಳಿಂದ ಗೊತ್ತಾಗಿದೆ. ಆದರೆ, ಈ ಹಣಕಾಸಿನ ಪರಿಸ್ಥಿತಿ ಹಿಂದಿನ ಸಾಲಿನ ವರ್ಷಗಳಿಗಿಂತಲೂ ಉತ್ತಮವಾಗಿದೆ, ಅಕ್ಟೋಬರ್ 2009ರ ನಂತರ ರಾಜ್ಯದ ಹಲವು ಜಿಲ್ಲೆಗಳ ಆಡಳಿತ ಯಂತ್ರ ನೆರೆ ಪರಿಹಾರ ಮುಂತಾದ ಕಾರ್ಯಕ್ರಮಗಳಲ್ಲಿ ನಿರತವಾಗಿದ್ದರಿಂದ ಇನ್ನೂ ಹೆಚ್ಚಿನ ಯೋಜನಾ ವೆಚ್ಚ ಮಾಡುವುದಕ್ಕೆ ತುಸು

ಅಡ್ಡಿಯುಂಟಾಯಿತು. ಆದರೆ, ಮುಂದಿನ ವರ್ಷಗಳಲ್ಲಿ ಇದನ್ನು ಸರಿಪಡಿಸುವ ಪ್ರಯತ್ನ ಮಾಡುತ್ತೇನೆ.

ರಾಜ್ಯದ ಸಾಲದ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದೀರಿ, ಟೀಕಿಸಿದ್ದೀರಿ, ಮತ್ತು ಅನಗತ್ಯ ಗುಮಾನಿ, ಆತಂಕಗಳನ್ನು ವ್ಯಕ್ತಪಡಿಸಿದ್ದೀರಿ. ಅದನ್ನು ನಿವಾರಿಸುವುದು ತುಂಬಾ ಅಗತ್ಯವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಎಲ್ಲರ ಮನಸ್ಸಿನಲ್ಲೂ 'ಈ ಯಡಿಯೂರಪ್ಪ ಬಂದ ನಂತರ ಸಾಲ ಮಾಡುವುದಕ್ಕೆ ಶುರು ಮಾಡಿದ್ದಾನೆ, ಖಜಾನೆ ಖಾಲಿ ಮಾಡುವುದಕ್ಕೆ ಶುರು ಮಾಡಿದ್ದಾರೆ, ಎಂಬ ಭಾವನೆ ಇರಬಹುದು.

ಆರ್ಥಿಕ ಸ್ಥಿತಿಗತಿಗಳು ಇವರಿಗೆ ಗೊತ್ತಾಗುವುದಿಲ್ಲ. ಹೇಗೊ ಆಡಳಿತವನ್ನು ನಡೆಸುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ಮೂಡಿಸುವಂಥ ಪ್ರಯತ್ನ ಗೊತ್ತಿದ್ದೋ ಇಲ್ಲದೆಯೋ ನಡೆದಿವೆ. ದಯಮಾಡಿ ಗೌರವಾನ್ವಿತ ಸದಸ್ಯರು ಗಮನಿಸಬೇಕು, 2010ರ ಮಾರ್ಚ್ ಅಂತ್ಯಕ್ಕೆ ರಾಜ್ಯದ ಒಟ್ಟು ಋಣಭಾರ 82,513 ಕೋಟಿ ಆಗುವ ನಿರೀಕ್ಷೆ ಇದೆ. ಇದರಲ್ಲಿ ಕೇಂದ್ರ ಸರ್ಕಾರದ ಸಾಲ, ಮಾರುಕಟ್ಟೆ ಸಾಲ, ನಬಾರ್ಡ್ ಸಾಲ, ಜೀವವಿಮಾ ಕಾರ್ಪೊರೇಷನ್ ಇತ್ಯಾದಿ ಸಂಸ್ಥೆಗಳಿಂದ ಪಡೆದಿರುವಂಥ ಸಾಲ, ಕೆ.ಬಿ.ಜೆ.ಎನ್.ಎಲ್, ನೀರಾವರಿ ನಿಗಮಗಳು ಪಡೆದಿರುವ ಸಾಲ, ಹುಡ್ಕೋ ದಿಂದ ವಸತಿ ನಿರ್ಮಾಣಕ್ಕೆ ಪಡೆದಿರುವಂಥ ಸಾಲ ಇವೆಲ್ಲವೂ ಸೇರಿ ಅಷ್ಟಾಗುತ್ತದೆ. ಹಿಂದಿನ ವರ್ಷಗಳಲ್ಲಿ ಬಾಕಿ ಇದ್ದ ಸಾಲದ ಮೊತ್ತದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಇದು ಅತ್ಯಂತ ಪ್ರಮುಖವಾದ ವಿಚಾರವಾಗಿರುವುದರಿಂದ ಮತ್ತೊಮ್ಮೆ ಹೇಳಬಯಸುತ್ತೇನೆ. ಮಾರ್ಚ್ 2005 ಕ್ಕೆ ಸಾಲದ ಮೊತ್ತ 44,345 ಕೋಟಿ, ಮಾರ್ಚ್ 2006 ಕ್ಕೆ 49,587 ಕೋಟಿ, ಮಾರ್ಚ್ 2007 ಕ್ಕೆ 58,079 ಕೋಟಿ, ಮಾರ್ಚ್ 2008 ಕ್ಕೆ 66,555 ಕೋಟಿ, ಮಾರ್ಚ್ 2009 ಕ್ಕೆ 71,410 ಕೋಟಿ. ತಮಗೆ ಗೊತ್ತಿದೆ, ಸಾಲ ಮಾಡದೆಯೇ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ಸರ್ಕಾರಗಳು ಸಾಲವನ್ನು ತೆಗೆದುಕೊಳ್ಳುತ್ತವೆ. ಆದರೆ ಆ ಸಾಲದ ಹಣವನ್ನು ಹೇಗೆ ಖರ್ಚು ಮಾಡಿದವು, ಅದು ಅಭಿವೃದ್ಧಿ ಕಾರ್ಯಕ್ಕೆ ಖರ್ಚಾಯಿತೋ ಇಲ್ಲವೋ, ಆಸ್ತಿ ನಿರ್ಮಾಣಕ್ಕೆ ಮತ್ತು ರಾಜ್ಯದ ಆದಾಯಕ್ಕೆ ಪೂರಕವಾದ ರೀತಿಯಲ್ಲಿ ಖರ್ಚು ಆಯಿತೋ ಇಲ್ಲವೋ ಎಂಬ ಬಗ್ಗೆ ನಾವು ಹೆಚ್ಚು ಗಮನಿಸುವ ಅಗತ್ಯವಿದೆ. ನಾನು ಈಗಾಗಲೇ ಒಂದು ಸಲ ಹೇಳಿದ್ದೇನೆ. ಏನು ಯಡಿಯೂರಪ್ಪನವರೆ,

ನೀವು ಬೇರೆಯವರಿಗೆ ಏಕೆ ಹೋಲಿಕೆ ಮಾಡುತ್ತೀರೆಂದು ಹೇಳುತ್ತಾರೆ. ನಾವು ಹೋಲಿಕೆ ಮಾಡಿಕೊಳ್ಳಲೇಬೇಕು. ಭಾರತದಂಥ ಈ ದೇಶದಲ್ಲಿ ಮುಂದುವರೆದ ಅನೇಕ ರಾಜ್ಯಗಳು ಅವರ ಸಾಲಸೋಲದ ಸ್ಥಿತಿಗತಿಗಳೇನಿದೆ, ನಮ್ಮ ಸ್ಥಿತಿಗತಿಗಳೇನಿದೆ, ಇದನ್ನು ಹೋಲಿಕೆ ಮಾಡಿಕೊಂಡಾಗ ನಾವು ಅತ್ಯಂತ ಒಳ್ಳೆಯ ಸ್ಥಾನದಲ್ಲಿದ್ದೇವೆ ಎಂಬುದನ್ನು ಈ ನಾಡಿನ 6 ಕೋಟಿ ಜನರಿಗೆ ಈ ಮೂಲಕ ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದು ಕೊಂಡಿದ್ದೇನೆ. ಏನು ಯಡಿಯೂರಪ್ಪ ಸಾಲ ಮಾಡುತ್ತಿದ್ದಾರೆ ಎನ್ನುವ ಭಾವನೆ ಬೇಡ. 2009–10 ರಲ್ಲಿ ಇದ್ದಂತೆ ಸಾಲದ ಮೊತ್ತ ಜಿ.ಎಸ್.ಡಿ.ಪಿ. ಭಾಗಾಂಶದ ಹೋಲಿಕೆ ಈ ರೀತಿ ಇದೆ. ನಮ್ಮ ರಾಜ್ಯದಲ್ಲಿ ಮಾರ್ಚ್ 2009 ಕ್ಕೆ 71,410 ಕೋಟಿ ಇತ್ತು, 2010ರ ಮಾರ್ಚ್ ಅಂತ್ಯಕ್ಕೆ ಋಣಭಾರ 82,513 ಕೋಟಿ ಆಗುವಂಥ ನಿರೀಕ್ಷೆ ಇದೆಯೆಂದು ನಾನು ಆಗಲೇ ಹೇಳಿದ್ದೇನೆ. ಆಂಧ್ರ ಪ್ರದೇಶ 1,27,581 ಕೋಟಿ ಜಿ.ಎಸ್.ಡಿ.ಪಿ ಯ ಶೇಕಡ 31.3, ಗುಜರಾತ್ 1,25,759 ಕೋಟಿ, ಜಿ.ಎಸ್.ಡಿ.ಪಿ. ಯ ಶೇಕಡ 29.7, ತಮಿಳುನಾಡು 95,232 ಕೋಟಿ ಜಿ.ಎಸ್.ಡಿ.ಪಿ. ಯ ಶೇಕಡ 24.1. ಮಹಾರಾಷ್ಟ್ರ 2,07,810 ಕೋಟಿ ಜಿ.ಎಸ್.ಡಿ.ಪಿ. ಯ ಶೇಕಡ 26, ಕೇರಳ 70,761 ಕೋಟಿ, ಜಿ.ಎಸ್.ಡಿ.ಪಿ. ಯ ಶೇಕಡ 35, ರಾಜಸ್ಥಾನ, 90,972 ಕೋಟಿ ಜಿ.ಎಸ್.ಡಿ.ಪಿ. ಯ ಶೇಕಡ 43.1, ಪಶ್ಚಿಮ ಬಂಗಾಳ 1,68,684 ಕೋಟಿ, ಜಿ.ಎಸ್.ಡಿ.ಪಿ. ಯ ಶೇಕಡ 42.9, ಕರ್ನಾಟಕ 76,762 ಕೋಟಿ, ಜಿ.ಎಸ್.ಡಿ.ಪಿ. ಯ ಶೇಕಡ 26, ಈ ಅಂಕಿಅಂಶಗಳು ಆಯಾಯ ರಾಜ್ಯಗಳ ನಿಗಮಗಳ ಸಾಲ ಇದರಲ್ಲಿ ಸೇರಿಲ್ಲ. ಈ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಸಾಲದ ಮೊತ್ತ ಇತರ ರಾಜ್ಯಗಳ ಜಿ.ಎಸ್.ಡಿ.ಪಿ. ಯ ಭಾಗಾಂಶಕ್ಕೆ ಹೋಲಿಸಿದಾಗ ಬಹಳ ಕಡಿಮೆ ಇದೆ ಎಂಬುದು ಗಮನಾರ್ಹ ವಾದ ಸಂಗತಿ. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಂತೆ 2014–15ನೇ ಸಾಲಿನೊಳಗೆ ರಾಜ್ಯ ಸರ್ಕಾರದ ಋಣವನ್ನು ಜಿ.ಎಸ್.ಡಿ.ಪಿ. ಯ ಶೇಕಡ 25 ಕ್ಕೆ ಇಳಿಸುವ ಅಗತ್ಯವಿದೆ. ಈ ದಿಸೆಯಲ್ಲಿ ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಿನ್ನೆ ನಾವು ಯಾವುದೋ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ, ಯೋಜನಾ ಆಯೋಗದ ಮುಂದೆ ಚರ್ಚೆಯಾಗು ತ್ತಿರುವ ಕಾಲದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಹಣದ ಕೊರತೆ ಇರುವ ಬಗ್ಗೆ ಚರ್ಚೆಯಾಗುತ್ತಿದ್ದ ಕಾಲದಲ್ಲಿ ನೀವು ಎರಡು ಸಾವಿರ ಕೋಟಿ ಸಾಲ ಪಡೆಯಲು ಅವಕಾಶ ಇದೆ ಎನ್ನುವಂಥ ಸಲಹೆಯನ್ನೂ ಕೊಟ್ಟರು ಎಂಬ

ಮಾತನ್ನು ಮಾನ್ಯ ಸಿದ್ಧರಾಮಯ್ಯ ಮೂಲಕ ನಮ್ಮೆಲ್ಲಾ ಸದ್ಯರಿಗೆ ತಿಳಿಸಲು ಇಚ್ಛೆಪಡುತ್ತೇನೆ. ಅದು ಮಾತ್ರವಲ್ಲ, ನಾವು ತಂದಿರುವ ಸಾಲವನ್ನು ಅಸಲು ಮತ್ತು ಬಡ್ಡಿ ಸಮೇತ ಹಿಂದಿರುಗಿಸುತ್ತಿದ್ದೇವೆ. 2009-10 ರಲ್ಲಿ 2968 ಕೋಟಿ ಅಸಲು 5529 ಕೋಟಿ ಬಡ್ಡಿ ಒಟ್ಟು 8497 ಕೋಟಿ ಹಣವನ್ನು ಸಾಲದ ಮರುಪಾವತಿಗಾಗಿ ವೆಚ್ಚ ಮಾಡಿದ್ದೇವೆ. 2010-11 ರಲ್ಲಿ 3343 ಕೋಟಿ ಅಸಲು 6542 ಕೋಟಿ ಬಡ್ಡಿ ಒಟ್ಟು 9905 ಕೋಟಿ ಸಾಲ ಮರುಪಾವತಿ ಮಾಡಲು ಅಂದಾಜನ್ನು ಇಟ್ಟುಕೊಂಡಿದ್ದೇವೆ. 12ನೇ ಹಣಕಾಸು ಆಯೋಗದ ಸಾಲದ ಮೇಲಿನ ಬಡ್ಡಿ ಪಾವತಿ ರಾಜ್ಯಸ್ವ ಸ್ವೀಕೃತಿಯ ಶೇಕಡ 15ಕ್ಕಿಂತ ಹೆಚ್ಚು ಇರಬಾರದು ಎಂದು ಶಿಫಾರಸ್ಸು ಮಾಡಿದೆ. ಕರ್ನಾಟಕದ ಮಟ್ಟಿಗೆ ಸಾಲದ ಮೇಲಿನ ಬಡ್ಡಿ ಪಾವತಿಯ ರಾಜಸ್ವ ಸ್ವೀಕೃತಿಯ ಶೇಕಡ 11.3 ರಷ್ಟಿದೆ. ಇದು 12ನೇ ಹಣಕಾಸು ಆಯೋಗದ ಶಿಫಾರಸ್ಸಿನ ಮಿತಿಯೊಳಗೇ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇತರೆ ರಾಜ್ಯಗಳ ಬಡ್ಡಿ ಪಾವತಿಯ ಹೋಲಿಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಈಗಾಗಲೇ ಅಂಕಿ ಅಂಶದಲ್ಲಿ ಹೇಳಿದ್ದೇನೆ. ರಾಜ್ಯಗಳ ಋಣಭಾರವಾದ ಬಗ್ಗೆ ಮಾತನಾಡಿದ ನಂತರ ಇವತ್ತು ಕೇಂದ್ರದ ಬಗ್ಗೆ ಒಂದೆರಡು ಮಾತುಗಳನ್ನು ಟೀಕೆಗೋಸ್ಕರವಲ್ಲದೆ ಮಾತನಾಡಬೇಕಾಗುತ್ತದೆ. ಈ ಮನೆಯ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಏನು, ವಾಸ್ತವಿಕ ಸ್ಥಿತಿಯೇನು ಎಂಬುದು ನಮ್ಮ ಗಮನದಲ್ಲಿರಬೇಕು ಎಂಬ ಉದ್ದೇಶದಿಂದ ಮಾತ್ರ ಇದನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತಿದ್ದೇನೆ. ಮಾರ್ಚ್ 2010 ರ ವೇಳೆಗೆ ಕೇಂದ್ರ ಸರ್ಕಾರದ ಒಟ್ಟು ಋಣಭಾರ 36.37 ಲಕ್ಷ ಕೋಟಿ ಆಗುತ್ತದೆಂದು ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆಯಿಂದ ತಿಳಿದುಬರುತ್ತದೆ. ಇದು ರಾಷ್ಟ್ರದ ಒಟ್ಟು ಆದಾಯದ ಶೇಕಡ 59 ರಷ್ಟು ಆಗುತ್ತದೆ. ಕೇಂದ್ರದ ಒಟ್ಟು ಸಾಲವನ್ನು ಜನಸಂಖ್ಯೆಯಿಂದ ಸುಮಾರು 120 ಕೋಟಿಯಿಂದ ಭಾಗಿಸಿದರೆ ತಲಾ ಸಾಲದ ಪ್ರಮಾಣ ಒಬ್ಬೊಬ್ಬರ ಮೇಲೆ ಸುಮಾರು 30 ಸಾವಿರ ರೂ. ಆಗುತ್ತದೆ. ಇದು ಅನಿವಾರ್ಯ. ಇದನ್ನು ನಾವು ಎದುರಿಸಬೇಕು. ಇದಕ್ಕೆ ಹೋಲಿಸಿದರೆ ರಾಜ್ಯದ ಒಟ್ಟು ಸಾಲ ಇರುವುದು 82,513 ಕೋಟಿ, ರಾಜ್ಯದ ಒಟ್ಟು ಆದಾಯದ ಸುಮಾರು ಶೇಕಡ 27.05 ಆಗುತ್ತದೆ. ಕೇಂದ್ರದ್ದು ಅದರ ಆದಾಯದ ಶೇಕಡ 59 ರಷ್ಟಾಗುತ್ತದೆ, ನಮ್ಮದು 27.05 ಆಗುತ್ತದೆ. ಇದರಲ್ಲಿ ಸರ್ಕಾರ ಮರುಪಾವತಿ ಮಾಡಬೇಕಾದ ರಾಜ್ಯದ ವಿವಿಧ ನಿಗಮಗಳ

ಸಾಲವೂ ಸೇರಿದೆ. ಇದನ್ನು ಹೊರತುಪಡಿಸಿದರೆ ರಾಜ್ಯದ ಸಾಲ ಒಟ್ಟು ಆದಾಯದ ಸುಮಾರು ಶೇಕಡ 26 ರಷ್ಟು ಮಾತ್ರ ಇದೆ ಎನ್ನುವುದನ್ನು ನಮ್ಮ ಗೌರವಾನ್ವಿತ ಸದಸ್ಯರಿಗೆ ಮನವರಿಕೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದ ತೆರಿಗೆ ಸಂಗ್ರಹಣ ಅತ್ಯಂತ ಉತ್ತಮವಾಗಿದೆ. ಟೀಕೆ ಮಾಡುವಂಥದ್ದು ಬಿ.ಬಿ.ಎಂ.ಪಿ. ಚುನಾವಣೆ ಬಂದಾಗ ನಾವೂ ಏನೋ ಮಾತನಾಡುವುದು ಬೇರೆ. ಅದನ್ನು ನೀವೂ ಮಾತನಾಡುತ್ತೀರಿ, ನಾವೂ ಮಾತನಾಡುತ್ತೇವೆ, ಅದು ರಾಜಕಾರಣ ಬೇರೆ. ಆದರೆ, ವಾಸ್ತವಿಕ ಅಂಶ ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದ ತೆರಿಗೆ ಸಂಗ್ರಹಣ ಉತ್ತಮವಾಗಿದೆ. 2008-09ನೇ ಸಾಲಿನ ಪರಿಷ್ಕೃತ ಅಂದಾಜಿನಂತೆ ಕರ್ನಾಟಕದ ಸ್ವಂತ ತೆರಿಗೆ ಸಂಪನ್ಮೂಲ ಜಿ.ಎಸ್.ಡಿ.ಪಿ. ಯ ಶೇಕಡ 10.7 ರಷ್ಟಿದೆ. ಇತರೆ ರಾಜ್ಯಗಳ ತೆರಿಗೆ ಸಂಪನ್ಮೂಲಗಳ ಪ್ರಮಾಣ ನಮ್ಮ ರಾಜ್ಯಕ್ಕಿಂತಾ ಕಡಿಮೆ ಇದೆ. ಜಿ.ಎಸ್.ಡಿ.ಪಿ. ಗೆ ಹೋಲಿಸಿದಾಗ ಸ್ವಂತ ತೆರಿಗೆ ಸಂಪನ್ಮೂಲಗಳು ಶೇಕಡವಾರು 2008-09ಕ್ಕೆ ಆಂಧ್ರ ಪ್ರದೇಶ ಶೇಕಡ 9.6, ತಮಿಳುನಾಡು ಶೇಕಡ 9.9, ಕೇರಳ ಶೇಕಡ 8.7, ಮಹಾರಾಷ್ಟ್ರ ಶೇಕಡ 7.2, ಗುಜರಾತ್ ಶೇಕಡ 6.7, ಎಲ್ಲಾ ರಾಜ್ಯಗಳ ಸರಾಸರಿ ಶೇಕಡ 6.7. 12ನೇ ಹಣಕಾಸಿನ ಆಯೋಗದ ಶಿಫಾರಸ್ಸು ಶೇಕಡ 6.8 ಇದೆ. ಅಂದರೆ 2010-11ನೇ ಸಾಲಿನ ನಮ್ಮ ರಾಜ್ಯದ ತೆರಿಗೆ ಸ್ವೀಕೃತಿ ಶೇಕಡ 11 ಕ್ಕೆ ಹೆಚ್ಚುವ ಅಂದಾಜು ಇದೆ. ಬಹುಶಃ ಇಡೀ ದೇಶದಲ್ಲಿ ಆರ್ಥಿಕ ಮಂದಗತಿಯ ಪರಿಸ್ಥಿತಿಯಿಂದ 2008 ಅಕ್ಟೋಬರ್‌ನಿಂದ 2009ರ ಸೆಪ್ಟಂಬರ್‌ವರೆಗೆ ತೆರಿಗೆ ಸಂಗ್ರಹಣೆಯಲ್ಲಿ ಸ್ವಲ್ಪ ಕಡಿಮೆ ಬೆಳವಣಿಗೆಯಾಗಿದ್ದು ನಂತರದ ಪರಿಸ್ಥಿತಿ ಅತ್ಯಂತ ಉತ್ತಮವಾಗಿದೆ. 2009ರ ಅಕ್ಟೋಬರ್‌ನಿಂದ 2010ರ ಫೆಬ್ರವರಿ, ಈ ಐದು ತಿಂಗಳಿನಲ್ಲಿ ರಾಜ್ಯದಲ್ಲಿ ಶೇಕಡ 11.4 ರಷ್ಟು ತೆರಿಗೆ ಸಂಗ್ರಹಣೆಯಲ್ಲಿ ಹೆಚ್ಚಳವಾಗಿದೆ. ಮೊದಲ ನಾಲ್ಕೈದು ತಿಂಗಳಿಗೆ ಹೋಲಿಕೆ ಮಾಡಿದರೆ ಇಷ್ಟು ಹೆಚ್ಚಳವಾಗಿದೆ. ಅಭಿವೃದ್ಧಿ ವೆಚ್ಚಗಳ ಹೋಲಿಕೆ ಬಗ್ಗೆಯೂ 2008-09ನೇ ಸಾಲಿನ ಪರಿಷ್ಕೃತ ಅಂದಾಜಿನಂತೆ ಎಲ್ಲಾ ರಾಜ್ಯಗಳಲ್ಲಿ ಶೇಕಡ 11ರ ಅಭಿವೃದ್ಧಿ ವೆಚ್ಚದ ಸರಾಸರಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ಶೇಕಡ 13.3 ರಷ್ಟು, ಅಂದರೆ 35,708 ಕೋಟಿಗಳಷ್ಟನ್ನು ನಾವು ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಿದ್ದೇವೆ. 2010-11ನೇ ಸಾಲಿನ ಆಯವ್ಯಯದಲ್ಲಿ ಅಭಿವೃದ್ಧಿ ಕಾರ್ಯ ಗಳಿಗೆ ಜಿ.ಎಸ್.ಡಿ.ಪಿ.ಯ ಶೇಕಡ 14.43 ರಷ್ಟು ಅಂದರೆ 47,378 ಕೋಟಿಯನ್ನು ವೆಚ್ಚ ಮಾಡುವಂಥ ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ.

ಪ್ರಮುಖ ಇಲಾಖೆಗಳಿಗೆ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ ಎರಡು ಮೂರು ಇಲಾಖೆಯದ್ದನ್ನು ಉದಾಹರಣೆಯಾಗಿ ಹೇಳುತ್ತೇನೆ. ಲೋಕೋಪಯೋಗಿ ಇಲಾಖೆ. ಯಡಿಯೂರಪ್ಪನವರೆ, ದುಡ್ಡನ್ನು ಎಲ್ಲಿ ಕೊಟ್ಟಿದ್ದೀರಾ?

(4-20 PM)

2009–10ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ 2941 ಕೋಟಿ ರೂ.ಗಳನ್ನು ಇಟ್ಟುಕೊಂಡಿದ್ದೆವು. ಮಾರ್ಚ್ 15ರವರೆಗೆ ಬಿಡುಗಡೆ ಮಾಡಿದಂತಹ ಅನುದಾನ 2757 ಕೋಟಿ ರೂ.ಗಳು ಅಂದರೆ ಬಿಡುಗಡೆ ಮಾಡಿದ ಅನುದಾನ ಶೇಕಡ 94 ರಷ್ಟು. ಜಲಸಂಪನ್ಮೂಲ ಇಲಾಖೆಯಲ್ಲಿ 4337ಕೋಟಿ ರೂ.ಗಳ ಪ್ರಾವಿಷನ್ ಮಾಡಲಾಗಿತ್ತು. ಅದರಲ್ಲಿ 3895 ಕೋಟಿ ರೂ.ಗಳನ್ನು ಅಂದರೆ ಶೇಕಡ 90ರಷ್ಟು ಬಿಡುಗಡೆ ಮಾಡಿದ್ದೇವೆ. ಇಂಧನ ಇಲಾಖೆಗೆ 3075 ಕೋಟಿ ರೂ.ಗಳ ಪ್ರಾವಿಷನ್ ಮಾಡಲಾಗಿತ್ತು. ಅದರಲ್ಲಿ 2325 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇದರ ವೆಚ್ಚ ಶೇಕಡ 76 ರಷ್ಟು ಆಗಿದೆ. ಶಾಸಕರ ನಿಧಿ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. 2009–10ರಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಪ್ರತಿ ಶಾಸಕರಿಗೆ $1^{1/2}$ ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದು, ಅದರ ಪೈಕಿ 50 ಲಕ್ಷ ರೂ.ಗಳು ಕಳೆದ ವರ್ಷದ ಕಾಮಗಾರಿಗೆ ಮತ್ತು 1 ಕೋಟಿ ರೂ.ಗಳನ್ನು ಈ ವರ್ಷದ ಕಾಮಗಾರಿಗಳಿಗೆ ವೆಚ್ಚ ಮಾಡಬಹುದಾಗಿದೆ. ಮಾರ್ಚ್ ಅಂತ್ಯದ ವೇಳೆಗೆ ಯಾವುದೇ ಕ್ಷೇತ್ರದಲ್ಲಿ ಹಣ ಬಳಕೆಯಾಗದಿದ್ದರೆ, ಆ ಉಳಿದ, ಖರ್ಚಾಗದಿರುವಂತಹ ಹಣವನ್ನು 2010–11ರಲ್ಲಿ ಬಳಸಲಿಕ್ಕೆ ಕೊಡುತ್ತೇವೆ. 1 ಕೋಟಿ ರೂ.,ಗಳ ಜೊತೆಗೆ, ಈ ರೀತಿ ಖರ್ಚು ಮಾಡದೆ ಉಳಿದಿರುವಂತಹ ಹಣವನ್ನೂ ಸಹ ನಾವು ತೆಗೆದುಕೊಂಡು ಬಳಕೆ ಮಾಡಬಹುದು. ಹೋಬಳಿ ಮಟ್ಟದಲ್ಲಿ ನಡೆಯುತ್ತಿರುವಂತಹ 'ಜನ ಸ್ಪಂದನ' ಕಾರ್ಯಕ್ರಮ ಅತ್ಯಂತ ಯಶಸ್ವಿ ಮತ್ತು ಜನಪ್ರಿಯವಾಗುತ್ತಿದೆ. ಇದರಿಂದಾಗಿ ಕುಂದು ಕೊರತೆಗಳ ನಿವಾರಣೆಗೆ ಹೆಚ್ಚು ಒತ್ತನ್ನು ಕೊಡುವುದಕ್ಕೆ ನಮ್ಮಿಂದ ಸಾಧ್ಯವಾಗುತ್ತಿದೆ. ಈ 'ಜನಸ್ಪಂದನ' ಕಾರ್ಯಕ್ರಮದಲ್ಲಿ ಇದುವರೆಗೂ ಸುಮಾರು 8.96 ಲಕ್ಷ ದೂರುಗಳನ್ನು ಸ್ವೀಕಾರ ಮಾಡಿ, ಶೇಕಡ 97 ರಷ್ಟು ಇತ್ಯರ್ಥಪಡಿಸಲಾಗಿದೆ. ಇನ್ನು ಮೇಲೆ ಪ್ರತಿ ವಾರ ನಿಗದಿಯಾದ ಒಂದು ದಿವಸ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಎಲ್ಲಾ ಅಧಿಕಾರಿಗಳು ಅಲ್ಲಿರಬೇಕು. ಅಂದು ಅವರು ಸಾರ್ವಜನಿಕರ ಕುಂದು ಕೊರತೆಗಳನ್ನು ಕೇಳಬೇಕು. ಅವತ್ತು ಯಾವುದೇ ಮೀಟಿಂಗ್, ಬೆಂಗಳೂರಿಗೆ ಹೋಗಿದ್ದಾರೆ, ಜಿಲ್ಲಾ ಕೇಂದ್ರಕ್ಕೆ

ಹೋಗಿದ್ದಾರೆ ಎಂಬ ಮಾತನ್ನು ಹೇಳಕೂಡದು. ತಾಲ್ಲೂಕು ಮಟ್ಟದ ಅಧಿಕಾರಿ ತಾಲ್ಲೂಕು ಮಟ್ಟದಲ್ಲೇ ಇರಬೇಕು. ಜಿಲ್ಲಾ ಮಟ್ಟದಲ್ಲಿ ಇರುವಂತಹ ಅಧಿಕಾರಿ ಜಿಲ್ಲಾ ಮಟ್ಟದಲ್ಲೇ ಇರಬೇಕು. ಪ್ರತಿ ವಾರ ಒಂದು ದಿವಸ ಜಿಲ್ಲಾಡಳಿತ ಅಲ್ಲಿಯ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನನ್ನ ನೇತೃತ್ವದ ಈ ಸರ್ಕಾರ ಕರ್ನಾಟಕದಲ್ಲಿ ಅಧಿಕಾರ ಸೂತ್ರ ಹಿಡಿದ ಮೇಲೆ, ಒಂದು ರೀತಿಯಲ್ಲಿ ಪರಿವರ್ತನೆಯ ಯುಗ ಪ್ರಾರಂಭವಾಗಿದೆ. ಯಾರು ಒಪ್ಪುತ್ತೀರೋ, ಬಿಡುತ್ತೀರೋ ಗೊತ್ತಿಲ್ಲ. ಅಂಕಿ ಅಂಶಗಳು ಹೇಳುತ್ತವೆ. ಒಂದು ರೀತಿ ಪರಿವರ್ತನೆಯ ಯುಗ ಪ್ರಾರಂಭವಾಗಿದೆ. ಅಭಿವೃದ್ಧಿ ಪರ್ವದ ಒಂದೊಂದು ಪುಟವನ್ನೂ ಸಹ ನಾವು ತೆರೆಯುತ್ತಿದ್ದೇವೆ. ಕರ್ನಾಟಕವನ್ನು ಇಡೀ ದೇಶದಲ್ಲೇ ಒಂದು ಮಾದರಿ ರಾಜ್ಯವನ್ನಾಗಿ ಮಾಡಬೇಕು ಎನ್ನುವಂಥಾದ್ದು ನನ್ನ ಸಂಕಲ್ಪವಾಗಿದೆ. ನಾನು ಇಂತಹ ಸಾಧನೆ ಮಾಡುವುದಕ್ಕೆ ಹೋಗುತ್ತಿರಬೇಕಾದರೆ, ಮಾನ್ಯ ರೇವಣ್ಣನವರೆ, ಇಂತಹ ಗುರಿ ಸಾಧನೆಗೆ ಯಾವುದೇ ವಿಷಯದಲ್ಲಿ ಯಾವುದೇ ವಿವಾದಕ್ಕೆ, ಪ್ರತಿಷ್ಠೆಗೆ ನಾನು ಭಾಗಿಯಾಗುವುದಿಲ್ಲ. ಪ್ರತಿಯೊಂದು ವಿಷಯದಲ್ಲೂ ಸಹ ನಾನು ಅತ್ಯಂತ ಸಂತೋಷವಾಗಿ ನಿಮ್ಮ ಮಾತುಗಳನ್ನು ಕೇಳುತ್ತೇನೆ. ಯಾರು ಎಷ್ಟೇ ದೊಡ್ಡವರಿರಲಿ, ಸಣ್ಣವರಿರಲಿ, ಅವರೊಡನೆ ಮುಕ್ತ ಸಂವಾದಕ್ಕೆ ನಾನು ಸದಾ ಸಿದ್ಧನಿದ್ದೇನೆ. ಸಂಘರ್ಷಕ್ಕೆ ಯಾರಾದರೂ ತೊಡೆ ತಟ್ಟಿ ಸಿದ್ಧವಾಗುವುದಾದರೆ, ಸಂವಾದ ಬಿಟ್ಟು ಸಂಘರ್ಷಕ್ಕೆ ಕೆಲವರು ರೆಡಿಯಾದರೆ, ಆ ಬೆದರಿಕೆಗೆ, ಆ ಬ್ಲಾಕ್‌ಮೇಲ್ ತಂತ್ರಗಳಿಗೆ ಬಗ್ಗದೇ, ರಾಜ್ಯದ ಅಭಿವೃದ್ಧಿಗೆ ಮಾರಕವಾಗು ವುದಕ್ಕೆ ಯಾವುದೇ ಕಾರಣಕ್ಕೆ ತಲೆಬಾಗುವುದಕ್ಕೆ ನಾನು ಸಿದ್ಧನಿಲ್ಲ. ಕುವೆಂಪುರವರ ವಾಣಿಯಾದ 'ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ, ಜಗ್ಗದೆಯೇ ಕುಗ್ಗದೆಯೇ, ನುಗ್ಗಿ ನಡೆ ಮುಂದೆ' ಇದನ್ನು ಸಹಕಾರಗೊಳಿಸುವುದಕ್ಕೆ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ನನ್ನ ಆಡಳಿತದ ಮಹಾಮಂತ್ರ. ಈ ಸಂಕಲ್ಪದ ಈಡೇರಿಕೆಗಾಗಿ ಜಗಜ್ಯೋತಿ ಬಸವೇಶ್ವರರು ಕೊಟ್ಟಂತಹ ಹಾದಿ, ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರು ಹಾಕಿ ಕೊಟ್ಟಂತಹ ಹಾದಿಯೇ ನನಗೆ ರೋಲ್ ಮಾಡೆಲ್. ಅವರ ವಿಚಾರಗಳಿಗೆ ಬದ್ಧನಾಗಿ ನಾನು ಬರುವ ದಿವಸಗಳಲ್ಲಿ ಕೆಲಸ ಮಾಡುತ್ತೇನೆ. ಸಾಮಾಜಿಕ ನ್ಯಾಯ ಎನ್ನುವುದು ಕೇವಲ ಉದ್ಯೋಗ ಮತ್ತು ರಾಜಕೀಯ ಮೀಸಲಾತಿಗಷ್ಟೇ ಸಾಕಾರಗೊಳ್ಳುವುದಿಲ್ಲ. ಕರ್ನಾಟಕದ ಕುಗ್ರಾಮಗಳಲ್ಲಿ

ಧಾರ್ಮಿಕ ಕ್ಷೇತ್ರಗಳನ್ನು ಸ್ಥಾಪಿಸಿ, ಅಲ್ಲಿ ಮಠ ಮಂದಿರಗಳ ಪರಂಪರೆಯನ್ನು ಮಾಡಿಕೊಂಡು, ಅಲ್ಲಿ ಮನುಷ್ಯನಿಗೆ ಬೇಕಾದಂತಹ ಜ್ಞಾನ ದಾಸೋಹ, ಅನ್ನ ದಾಸೋಹ ನೀಡುತ್ತಿರುವಂತಹ ಮಠ ಮಂದಿರಗಳಿಗೆ ನಾವು ಹೆಚ್ಚು ಅನುದಾನವನ್ನು ಕೊಟ್ಟರೆ, ಅದನ್ನು ಟೀಕೆ ಮಾಡುವಂಥಾದ್ದು ಎಷ್ಟರಮಟ್ಟಿಗೆ ಸರಿ? ಎಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಸ್ವಾಮಿಗಳಿಗೆ ನಾವು ಕೊಡುತ್ತಿಲ್ಲ. ಅಲ್ಲಿಗೆ ಹೋಗುವಂತಹ ಭಕ್ತರಿಗೆ ಬೇಕಾದಂತಹ ಮೂಲಭೂತ ಸವಲತ್ತುಗಳನ್ನು ಒದಗಿಸಿಕೊಡುವುದು ತಪ್ಪೇ? ಎಂಬ ಮಾತನ್ನು ನಾನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ತಿರುಪತಿಯಲ್ಲಿ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಬಿಲ್ಡಿಂಗ್ ಅನ್ನು ಕಟ್ಟುತ್ತಿದ್ದೇನೆ. ನಮ್ಮೆಲ್ಲಾ ಶಾಸಕರು ತಮ್ಮ ನಿಧಿಯಿಂದ 15 ಲಕ್ಷ ರೂ.ಗಳನ್ನು ಕೊಡಿ ಎಂದಿದ್ದೇವೆ. ಅಲ್ಲಿಗೆ ಹೋಗುವಂತಹ ಭಕ್ತರಿಗೆ ಅನುಕೂಲವಾಗಬೇಕು ಎನ್ನುವುದು ಬಿಟ್ಟರೆ, ಬೇರೆ ಯಾವುದೇ ಕಾರಣಕ್ಕೋಸ್ಕರ ಅಲ್ಲ. ಇನ್ನು ನೋವು ತರುವಂಥಾದ್ದು ಏನೆಂದರೆ, ಈ ರೈತ ಸಮುದಾಯದ ಭೂಮಿಯನ್ನು ಅಭಿವೃದ್ಧಿ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರುವುದರ ವಿರುದ್ಧ ಹುಯಿಲೆಬ್ಬಿಸುವಂತಹ ವ್ಯವಸ್ಥಿತವಾದಂತಹ ಒಂದು ಪಿತೂರಿ ನಡೆಯುತ್ತಿದೆ. ನಾನು ಕೇಳುತ್ತೇನೆ ಸ್ವಾಮಿ. ಸಾವಿರಾರು ಮಂದಿ ರೈತರು, ಮಾನ್ಯ ರೇವಣ್ಣನವರೆ, ಹಿಂದೆ ಅವರ ಭೂಮಿಯನ್ನು ಕೊಡದಿದ್ದರೆ, ಕೃಷ್ಣರಾಜಸಾಗರ ಆಗುತಿತ್ತೇ? ಆಲಮಟ್ಟಿ ಆಗುತ್ತಿತ್ತೇ? ಹೇಮಾವತಿ ಆಗುತ್ತಿತ್ತೇ? ನಾರಾಯಣಪುರ ಆಗುತಿತ್ತೇ? ಘಟಪ್ರಭಾ ಆಗುತ್ತಿತ್ತೇ? ಮಲಪ್ರಭಾದಂತಹ ಜಲಾಶಯಗಳು ಇಂದು ಕರ್ನಾಟಕವನ್ನು ನೀರಾವರಿ ನಾಡನ್ನಾಗಿ ಮಾಡಲಿಕ್ಕೆ ಸಾಧ್ಯವಾಗುತ್ತಿತ್ತೇ? ಅಂದು ಸಾವಿರಾರು ಮಂದಿ ರೈತರು ಬೀದಿಪಾಲಾಗಿ, ತ್ಯಾಗ ಮಾಡಿ, ಅವರ ಭೂಮಿ ಕೊಟ್ಟರು. ಅದರಿಂದಾಗಿ ಜಲಾಶಯಗಳಾದವು. ಅವರು ಭೂಮಿ ಕೊಟ್ಟರು, ಅದರಿಂದ ವಿದ್ಯುತ್ ಉತ್ಪಾದನಾ ಘಟಕಗಳನ್ನು ಮಾಡಲಿಕ್ಕೆ ಸಾಧ್ಯವಾಯಿತು. ಆದ್ದರಿಂದ ರೈತನಿಗೆ ಬೇಕಾದಂತಹ ಎಲ್ಲಾ ನೆರವನ್ನೂ ಕೊಡೋಣ. ರೈತನಿಗೆ ಇವತ್ತು ಶಕ್ತಿ ತುಂಬೋಣ. ಅವನ ಫಲವತ್ತಾದ ಭೂಮಿಯನ್ನು ಕಿತ್ತುಕೊಳ್ಳಬೇಕೆಂದು ನಾನು ಎಲ್ಲೂ ಹೇಳುವುದಿಲ್ಲ. ಆದರೆ, ಒಣ ಭೂಮಿ, ಬೇಸಾಯಕ್ಕೆ ಉಪಯೋಗವಿಲ್ಲದಿರುವುದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು, ಆ ರೀತಿಯ ಭೂಮಿಯನ್ನು ಪಡೆದು, ರಾಜ್ಯದ ಅಭಿವೃದ್ಧಿ ಬಗ್ಗೆ ನಾವು ಹೆಚ್ಚು ಕೆಲಸ ಮಾಡೋಣ. ಸುಮಾರು

ಅರ್ಧ ದಶಕಗಳಿಗೂ ಹೆಚ್ಚು ಕಾಲ ರಾಜ್ಯದ ಹಣಕಾಸು ಇಲಾಖೆಯ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದಂತಹ ಹೆಗ್ಗಳಿಕೆಗೆ ಪಾತ್ರವಾದಂತಹ ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಅಂಕಿ ಅಂಶಗಳನ್ನು ನೋಡದೆ, ಪ್ರತಿನಿತ್ಯ 'ಏನೋ ಈ ಸರ್ಕಾರ ದಿವಾಳಿ ಆಗಿ ಹೋಗಿದೆ, ಅಭಿವೃದ್ಧಿ ಕಾರ್ಯಗಳಿಗೆ ದುಡ್ಡಿಲ್ಲ' ಎನ್ನುವಂತಹ ವ್ಯವಸ್ಥಿತವಾದಂತಹ, ಗೊತ್ತಿದ್ದೋ, ಗೊತ್ತಿಲ್ಲದೆಯೋ, ಏನು ಹೇಳಿಕೊಂಡು ಬಂದಿರಿ, ಅದರಲ್ಲಿ ಹುರುಳಿಲ್ಲ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ತಾವು ಅಂಕಿ ಅಂಶಗಳನ್ನು ನೋಡಿದಾಗ, ಬಹುಶಃ ನನಗನಿಸುತ್ತದೆ, ತುಂಬಾ ಉತ್ತಮವಾದಂತಹ ಕೆಲಸ ಮಾಡಿದ್ದೇವೆ. ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷರಾದ ಮಾಂಟೆಕ್ ಸಿಂಗ್ ಅಹ್ಲುವಾಲಿಯಾರವರು ರಾಜ್ಯದ ಹಣಕಾಸಿನ ಶಿಸ್ತಿನ ಕ್ರಮ ಬಗ್ಗೆ ಪ್ರಶಂಸೆಯ ಮಾತುಗಳನ್ನು ಆಡಿರಬೇಕಾದರೆ, ತಾವು ಈ ರೀತಿ ಹೇಳುವಂಥಾದ್ದು ಸರಿಯಲ್ಲ. ಕೇಂದ್ರದ ಹಣಕಾಸು ಸಚಿವರಾದ ಮಾನ್ಯ ಪ್ರಣಬ್ ಮುಖರ್ಜಿಯವರಂತೂ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾನ್ಯ ಜಯಚಂದ್ರರವರೆ, ಮಾನ್ಯ ಸಿದ್ದರಾಮಯ್ಯನವರ ಕಿವಿಯಲ್ಲಿ ಆಮೇಲೆ ಹೇಳಿ, ಅವರೂ ಸಹ ಒಳ್ಳೆಯ ಕೆಲಸವಾಗುತ್ತಿದೆ, ಹಣಕಾಸಿನ ನಿರ್ವಹಣೆ ಚೆನ್ನಾಗಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇಂತಹ ಟೈಮ್‌ನಲ್ಲಿ ರಾಜ್ಯದ ಖಜಾನೆ ಬರಿದಾಗಿದೆ ಎಂದು ಮಾನ್ಯ ಸಿದ್ದರಾಮಯ್ಯನವರು ಆರೋಪ ಮಾಡುವುದರಲ್ಲಿ ಯಾವುದೇ ಹುರುಳಿಲ್ಲ ಎನ್ನುವಂತಹ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಅಭಿವೃದ್ಧಿ ಕಾರ್ಯಗಳು ಇನ್ನೂ ವೇಗದಲ್ಲಿ ನಡೆಯಬೇಕಾಗಿದೆ. ಅದರ ಬಗ್ಗೆ ಎರಡು ಮಾತಿಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಾನು ಒಂದೇ ಒಂದು ವಿನಂತಿಯನ್ನು ಮಾಡುವಂಥಾದ್ದು ಏನೆಂದರೆ, ಎಲ್ಲರೂ ಒಟ್ಟಾಗಿ ಕುಳಿತುಕೊಂಡು ಕೆಲಸ ಮಾಡೋಣ. ಅಣ್ಣ ತಮ್ಮಂದಿರ ಜಗಳ ಮನೆಯೊಳಗೆ ಇರಬೇಕು, "ಮನೆಯ ಗುಟ್ಟು ಬೀದಿಯಲ್ಲಿ ರಟ್ಟಾಗಬಾರದು" ಎಂಬ ಗಾದೆ ಮಾತು ಇದೆ. ಅದಕ್ಕೋಸ್ಕರ ರಾಜ್ಯದ ಗುಟ್ಟು ದೇಶದಲ್ಲೆಡೆ ಬಹಿರಂಗವಾಗಿ, ಆಧಾರ ರಹಿತ ಆರೋಪಗಳನ್ನು ಮಾಡಿ, ಒಂದು ರೀತಿಯಲ್ಲಿ ನಮ್ಮ ಮಾನವನ್ನು ಹರಾಜು ಮಾಡುವಂತಹ ಪರಿಸ್ಥಿತಿ ಏನು ಬಂದಿದೆ, ಇದಕ್ಕೆ ಕೊನೆಯಾಗಬೇಕು. ಈ ದಿಕ್ಕಿನಲ್ಲಿ ನಾವು ಮತ್ತು ನೀವೆಲ್ಲಾ ಒಟ್ಟಾಗಿ ಕುಳಿತು ಚಿಂತನೆಯನ್ನು ಮಾಡಬೇಕು ಎನ್ನುವಂತಹ ಮಾತನ್ನು

ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, 2–3 ಘೋಷಣೆಗಳಿವೆ, ಬಹಳ ವಿಷಯ ಇಲ್ಲ. ಬೆಳಗಾವಿ ವಿಶ್ವವಿದ್ಯಾನಿಲಯ : ಬೆಳಗಾವಿಯಲ್ಲಿ ಇರುವಂತಹ ಕಿತ್ತೂರು ರಾಣಿ ಚೆನ್ನಮ್ಮ ಸ್ನಾತಕೋತ್ತರ ಕೇಂದ್ರವನ್ನು 2010–11ನೇ ಸಾಲಿನಲ್ಲಿ ನೂತನ ವಿಶ್ವವಿದ್ಯಾನಿಲಯವಾಗಿ ಘೋಷಿಸಿ ಅಭಿವೃದ್ಧಿ ಪಡಿಸುತ್ತೇವೆ. 8ನೇ ತರಗತಿ ಓದುತ್ತಿರುವಂತಹ ವಿದ್ಯಾರ್ಥಿ ವಿದ್ಯಾರ್ಥಿ ನಿಯರಿಗೆ ನೀಡುತ್ತಿರುವಂತಹ ಉಚಿತ ಬೈಸಿಕಲ್ 2010–11ನೇ ಸಾಲಿನಿಂದ ಬಸ್‌ಪಾಸ್ ಮತ್ತು ಹಾಸ್ಟೆಲ್ ಸೌಲಭ್ಯ ಇರುವವರಿಗೂ ವಿಸ್ತರಿಸುತ್ತಿದ್ದೇವೆ. ಅವರಿಗೆ ಈಗ ಕೊಡುತ್ತಿಲ್ಲ, ಅವರು ಪಾಪ! ಒಬ್ಬ ಹೆಣ್ಣುಮಗಳು ಬೈಸಿಕಲ್‌ನಲ್ಲಿ ಹೋಗುತ್ತಾಳೆ, 100ಕ್ಕೆ 10 ಜನ ಮಾತ್ರ ಬೈಸಿಕಲ್‌ನಿಂದ ವಂಚಿತರಾಗುತ್ತಿದ್ದಾರೆ. ಅದಕ್ಕೆ 10–15 ಕೋಟಿ ರೂ.ಗಳು ಖರ್ಚಾಗುತ್ತದೆ. ಅವರಿಗೂ ಈ ಸೌಲಭ್ಯವನ್ನು ಕೊಡಬೇಕೆಂದು ಮಾಡಿದ್ದೇನೆ. ಕನಿಷ್ಟ ಬೆಂಬಲ ಬೆಲೆ : ಕೃಷಿ ಉತ್ಪನ್ನಗಳ ಬೆಲೆ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಾ ದಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ರೈತರ ಸಹಾಯಕ್ಕೆ ಬಂದು, ಹಣ ಬಿಡುಗಡೆ ಮಾಡಿ, ಮಾರುಕಟ್ಟೆ ಮಧ್ಯಪ್ರದೇಶ ಮಾಡುತ್ತದೆ. ಈ ವರ್ಷ 2009–10ಕ್ಕೆ ಮೆಕ್ಕೆಜೋಳ ಮತ್ತು ಅಡಿಕೆಯನ್ನು ಖರೀದಿ ಸುತ್ತಿದ್ದೇವೆ. ಇದರ ಜೊತೆಗೆ 2010–11ನೇ ಸಾಲಿನಲ್ಲಿ ತೆಂಗು ಮತ್ತು ಕೊಬ್ಬರಿ ಕೇಂದ್ರ ಸರ್ಕಾರ ನಿಗದಿ ಮಾಡಿದ ಮೊತ್ತದಲ್ಲಿ ಸಹಾ ಖರೀದಿ ಮಾಡಬೇಕಾ ಗುತ್ತದೆ. ಅದಕ್ಕೂ ನಾನು ಕಾರ್ಯಕ್ರಮ ರೂಪಿಸುತ್ತೇನೆ. 'ಸಾಮರಸ್ಯ ಗ್ರಾಮ ಯೋಜನೆ' ಎಂಬ ಹೊಸ ಯೋಜನೆಯೊಂದನ್ನು ಮಾಡುತ್ತಿದ್ದೇನೆ. ಗ್ರಾಮೀಣ ಪ್ರದೇಶಗಳಲ್ಲಿ ಸಂಘರ್ಷದ ವಾತಾವರಣ ನಿವಾರಿಸಿ, ಸಾಮರಸ್ಯದ ಬದುಕಿಗೆ ನಾಂದಿ ಹಾಡಿ, ಅಭಿವೃದ್ಧಿ ಪ್ರಕ್ರಿಯೆಯನ್ನು ಸುಧಾರಿಸುವುದಕ್ಕೆ 2010–11ನೇ ಸಾಲಿನಿಂದ ಪ್ರೋತ್ಸಾಹ ಧನವನ್ನು ನೀಡುವುದಕ್ಕೆ 'ಸಾಮರಸ್ಯ ಗ್ರಾಮ ಯೋಜನೆ' ಪ್ರಾರಂಭಿಸಲಾಗುತ್ತಿದೆ. ಈ ಯೋಜನೆ ಅಡಿಯಲ್ಲಿ ಪ್ರೋತ್ಸಾಹ ಧನಕ್ಕೆ ಅರ್ಹರಾಗುವವರು ಈ ತರಹ ಇರಬೇಕು. ಗ್ರಾಮ ಸಂಘರ್ಷ, ಘರ್ಷಣೆ, ಜಗಳ ತಂಟೆಗಳಿಂದ ಗ್ರಾಮಮುಕ್ತವಾಗಿರ ಬೇಕು. ಗ್ರಾಮದಲ್ಲಿ ಸೌಹಾರ್ದ ಮತ್ತು ಸಾಮರಸ್ಯದಿಂದ ಕೂಡಿದ ವಾತಾವರಣ ಇರಬೇಕು. ಗ್ರಾಮದಲ್ಲಿ ಯಾವುದೇ ಸಂಘರ್ಷಕ್ಕೆ ಎಡೆಮಾಡಿ ಕೊಡದೆ, ಗ್ರಾಮದಲ್ಲಿನ ಸಮಸ್ಯೆಗಳನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿ ಕೊಳ್ಳುವಂತಹ ವಾತಾವರಣ ಇರಬೇಕು. ಒಗ್ಗಟ್ಟನ್ನು ಪ್ರದರ್ಶಿಸುವ ಮೂಲಕ ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆಯನ್ನು, ಸಾಮಾಜಿಕ

ಸಾಮರಸ್ಯವನ್ನು ಕಾಪಾಡಬೇಕು. ಗ್ರಾಮವನ್ನು ಸರ್ವಾಂಗೀಣ ಅಭಿವೃದ್ಧಿಯತ್ತ ಕೊಂಡೊಯ್ಯುವುದಕ್ಕೆ ನೆರವಾಗುವಂತೆ, ಸಾಧ್ಯವಾದರೆ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು.

ಈ ದೃಷ್ಟಿಯಿಂದ ಈ ಯೋಜನೆಯನ್ನು ಮಾಡುತ್ತಿದ್ದೇವೆ. ಶಾಲೆಗಳಿಗೆ ಅನುದಾನ, 1987 ರಿಂದ 95ರ ವರೆಗೆ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಿಸಿ 1.4.2010 ರಿಂದ ಅನುದಾನವನ್ನು ನೀಡಲಾಗುತ್ತದೆ. ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ 2010–11ನೇ ಸಾಲಿನಲ್ಲಿ ಪರೀಕ್ಷಾ ಮಂಡಳಿ ಯನ್ನು ಸ್ಥಾಪನೆ ಮಾಡಲಾಗುತ್ತದೆ. ಜಿಲ್ಲಾ ಪಂಚಾಯತಿಗಳಿಗೆ ಅನುದಾನ– ಜಿಲ್ಲಾ ಪಂಚಾಯತಿಗಳಿಗೆ 2010–11ನೇ ಸಾಲಿನಿಂದ ಒಂದು ಕೋಟಿ ಅನಿರ್ಬಂಧಿತ ಅನುದಾನ, untied grants ಬಿಡುಗಡೆ ಮಾಡಲಾಗುತ್ತದೆ. ತಂಬಾಕು ಮೇಲಿನ ತೆರಿಗೆ ಇಳಿತದ ಬಗ್ಗೆ ಸಿದ್ದರಾಮಯ್ಯನವರು ಪ್ರಸ್ತಾಪ ಮಾಡಿದರು, ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆಯನ್ನು ಶೇ. 12.5% ರಿಂದ 15% ಗರಿಷ್ಟ ಚಿಲ್ಲರೆ ಬೆಲೆ ಆಧಾರಿತ ಮೌಲ್ಯವರ್ಧಿತ ತೆರಿಗೆ ವಿಧಿಸುವುದಕ್ಕೆ ನಾನು ಮುಂಗಡ ಪತ್ರದಲ್ಲಿ ಪ್ರಸ್ತಾಪ ಮಾಡಿದ್ದೆ. ಆದರೆ ಈಗಾಗಲೇ ತಂಬಾಕು ಉತ್ಪನ್ನಗಳ ಮೇಲೆ ವಿಧಿಸುವ ತೆರಿಗೆ ಹೆಚ್ಚಾಗಿದೆ, ಅದರಿಂದ ಅದರ ಮೇಲಿನ ಮೌಲ್ಯವರ್ಧಿತ ತೆರಿಗೆಯ ಪ್ರಸ್ತಾವನೆಯನ್ನು ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದೆಂದು ವಿರೋಧ ಪಕ್ಷದ ನಾಯಕರು ಸಲಹೆಯನ್ನು ನೀಡಿದ್ದರು. ಜೊತೆಗೆ ನೆರೆಯ ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯಗಳಲ್ಲಿ ತೆರಿಗೆದರ ಕಡಿಮೆ ಇರುವುದರಿಂದ ಕಾನೂನು ಬಾಹಿರವಾಗಿ ಆ ರಾಜ್ಯಗಳಿಂದ ತಂಬಾಕನ್ನು ತಂದು ರಾಜ್ಯದಲ್ಲಿ ಮಾರಾಟ ಮಾಡಿ ತೆರಿಗೆ ವಂಚನೆ ಮಾಡುವ ಸಾಧ್ಯತೆ ಇದೆ ಎಂದು ತಾವು ಹೇಳಿದಿರಿ, ಹಾಗಾಗಿ ತಂಬಾಕು ಉತ್ಪನ್ನಗಳ ಮೇಲಿನ ಪ್ರವೇಶ ತೆರಿಗೆಯನ್ನು ಶೇ. 4% ರಿಂದ 2% ಇಳಿಸುವುದಕ್ಕೆ ನಾನು ತೀರ್ಮಾನ ಮಾಡಿದ್ದೇನೆ. ಇದೊಂದು ಮಹತ್ವಾಕಾಂಕ್ಷೆಯ ಮುಂಗಡಪತ್ರ. ಕೃಷಿ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಿರುವ ಮುಂಗಡಪತ್ರ, ಮಹತ್ವಾ ಕಾಂಕ್ಷೆಯ ಮುಂಗಡಪತ್ರವಾಗಿದೆ. ಆರ್ಥಿಕ ಬೆಳವಣಿಗೆಗೆ ಪೂರಕವಾದ ಮತ್ತು ರಾಜ್ಯದ ಆದಾಯವನ್ನು ಹೆಚ್ಚಿಸುವುದಕ್ಕೆ ಸಹಕಾರಿಯಾದ ಮುಂಗಡಪತ್ರ ವಾಗಿದೆ. ಎಲ್ಲಾ ವರ್ಗಗಳ ವಿಶೇಷವಾಗಿ ರೈತರು ಮತ್ತು ದುರ್ಬಲ ವರ್ಗಗಳ

ಕಲ್ಯಾಣಕ್ಕೆ ಇಂಬುಕೊಟ್ಟಿದ್ದೇವೆ. ಸಮಗ್ರ ಕರ್ನಾಟಕವನ್ನು ಒಂದು ಸಮೃದ್ಧ ಕರ್ನಾಟಕವನ್ನಾಗಿ ರೂಪಿಸುವುದಕ್ಕೆ ಪ್ರಯತ್ನ ಮಾಡಿ ಈ ಮುಂಗಡಪತ್ರದಲ್ಲಿ ಹಣಕಾಸಿನ ನೆರವನ್ನು ಕೊಟ್ಟಿದ್ದೇವೆ. ಆದುದರಿಂದ, ಉತ್ತಮ ಹಣಕಾಸಿನ ನಿರ್ವಹಣೆ ಹಾಗೂ ವಿತ್ತೀಯ ಶಿಸ್ತನ್ನು ಕಾಪಾಡುವ ಮೂಲಕ ರಾಜ್ಯದ ಸಮಗ್ರ ಅಭಿವೃದ್ಧಿಗೆ ಭದ್ರ ಬುನಾದಿಯಾಗಬಲ್ಲ 2010-11ನೇ ಸಾಲಿನ ರಾಜ್ಯದ ಮುಂಗಡಪತ್ರಕ್ಕೆ ಈ ಸದನ ಅನುಮೋದನೆ ನೀಡಬೇಕೆಂದು ಮನವಿಮಾಡಿ, ನನ್ನ ಮಾತುಗಳನ್ನು ತಾವುಗಳು ಆಲಿಸಿದ್ದಕ್ಕಾಗಿ ಧನ್ಯವಾದಗಳು.

ಶ್ರೀ ಬಿ.ಸಿ.ಪಾಟೀಲ್ : ಸರ್ವಜ್ಞನನ್ನು ಕೈಬಿಟ್ಟಿರಿ, ಸರ್ವಜ್ಞನ ಪ್ರಾಧಿಕಾರದ ಬಗ್ಗೆ ಚಕಾರವೆತ್ತಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕಾಗಿ ಈಗ ಏನನ್ನು ಹೇಳಲಿಲ್ಲವಲ್ಲಾ.

ಶ್ರೀ ಬಿ.ಸಿ.ಪಾಟೀಲ್ : ಹಿಂದೆ ಮಾಡುತ್ತೇವೆಂದು ಸದನದಲ್ಲಿ ಹೇಳಿದ್ದಿರಿ, ಹಿಂದೆ ನಿಮ್ಮ ಮನೆಗೆ ನಿಯೋಗ ಬಂದಾಗ ಹೇಳಿದ್ದಿರಿ, ಮಂತ್ರಿಗಳಾದ ಉದಾಸಿಯವರು ಹಾವೇರಿಯ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಜ್ಞನ ಪ್ರಾಧಿಕಾರವನ್ನು ಬಜೆಟ್‌ನಲ್ಲಿ ಮಾಡುತ್ತೇವೆಂದು ಹೇಳಿದ್ದರು. ಅದಕ್ಕೆ ಹೇಳುವುದು, "ಆಡದೆ ಮಾಡುವವನು ರೂಢಿಯೊಳಗೆ ಉತ್ತಮನು, ಆಡಿ ಮಾಡುವವನು ಮಧ್ಯಮನು, ಆಡಿಯೂ ಮಾಡದವ ಅದಮ ತಾನಾದ ಸರ್ವಜ್ಞ," ಈಗ ಆಡಿಯೂ ಮಾಡದವರಿಗೆ ಏನು ಮಾಡಬೇಕೆಂದು ಸರ್ವಜ್ಞ ಹೇಳಿಬಿಟ್ಟಿದ್ದಾನೆ. ಏಕೆ ಸರ್ವಜ್ಞನ ಬಗ್ಗೆ ಇಷ್ಟೊಂದು ತಾತ್ಸಾರ, ಮತ್ಸರ, ಅವರು ಹಿರೇಕೆರೂರು ತಾಲ್ಲೂಕಿನಲ್ಲಿ ಹುಟ್ಟಿದ್ದೇ ತಪ್ಪಾಯಿತಾ? ಅಥವಾ ಕಾಂಗ್ರೆಸ್ ಎಂಎಲ್ಎ ಆಗಿದ್ದು ತಪ್ಪಾಗಿದೆಯಾ ಗೊತ್ತಾಗುತ್ತಿಲ್ಲ. ಇವತ್ತು ಸರ್ವಜ್ಞನನ್ನು ತಮಿಳುನಾಡಿಗೆ ಗಡಿಪಾರು ಮಾಡಿಬಿಟ್ಟರು, ಸರ್ವಜ್ಞನನ್ನೇ ಕೇಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು 2010-11ನೇ ಸಾಲಿನ ಮುಂಗಡಪತ್ರದ ಮೇಲೆ ಈ ಮನೆಯಲ್ಲಿ ನಡೆದಂಥ ಸಾಮಾನ್ಯ ಚರ್ಚೆಗೆ ಉತ್ತರವನ್ನು ಕೊಟ್ಟಿದ್ದಾರೆ. ಅವರ ಇಡೀ ಉತ್ತರವನ್ನು ನೋಡಿದರೆ, ಬಜೆಟ್ ಭಾಷಣದಲ್ಲಿ ಏನೇನು ಹೇಳಿದ್ದಾರೆ, ಅದನ್ನೇ ರಿಪೀಟ್ ಮಾಡಿದ್ದಾರೆ ಅಷ್ಟೆ. ಬಜೆಟ್ ಭಾಷಣದಲ್ಲಿ ಏನೇನು ಅಂಕಿಅಂಶಗಳನ್ನು ಹೇಳಿದ್ದಾರೆ, receipts,

expenditure, plan ನಲ್ಲಿ ಏನು ಹೇಳಿದ್ದಾರೆ, ಅದು ಬಿಟ್ಟರೆ, ನಾವು ಇಲ್ಲಿ ಮಾನ್ಯ ಸದಸ್ಯರುಗಳು ಕೊಟ್ಟಿರುವ ಸಲಹೆಗಳಿಗೆ, ಟೀಕೆಗಳಿಗೆ ಉತ್ತರ ಕೊಡುವ ಪ್ರಯತ್ನವನ್ನು ಅವರು ಮಾಡಿಲ್ಲ, ಎಲ್ಲಾ ಅದೇ ಅಂಕಿಅಂಶಗಳನ್ನು ಹೇಳಿದ್ದಾರೆ. ಕೃಷಿಗೆ ಹೆಚ್ಚು ಅನುದಾನವನ್ನು ಕೊಟ್ಟಿದ್ದೇವೆ, ನೀರಾವರಿಗೆ ಹೆಚ್ಚು ಅನುದಾನ ಕೊಟ್ಟಿದ್ದೇವೆ, ವಿದ್ಯುತ್‌ಗೆ ಹೆಚ್ಚು ಅನುದಾನ ಕೊಟ್ಟಿದ್ದೇವೆ, ಮನೆ ಕಟ್ಟುವುದಕ್ಕೆ ಅನುದಾನ ಕೊಟ್ಟಿದ್ದೇವೆ, ಕುಡಿಯುವ ನೀರಿಗೆ ಅನುದಾನ ಕೊಟ್ಟಿದ್ದೇವೆ ಎಂದು ಬಜೆಟ್ ಭಾಷಣದಲ್ಲಿ ಏನೇನು ಹೇಳಿದ್ದಾರೆ, ಮತ್ತೆ ಉತ್ತರದಲ್ಲಿ ಎಲ್ಲಾ ರಿಪೀಟ್ ಮಾಡಿದ್ದಾರೆ. ಬಹುಶಃ ನಾವು ಮಾತನಾಡುವಾಗ ಮುಖ್ಯಮಂತ್ರಿಗಳು ಇರಲಿಲ್ಲ, ಹಾಗಾಗಿ ಬರೆದುಕೊಂಡು ಅವರ್‍ಯಾರು ಅವರಿಗೆ ಹೇಳಿದರೇನೊ ಗೊತ್ತಿಲ್ಲ, ಅವರು ಅದಕ್ಕೆಲ್ಲಾ ಉತ್ತರ ಬರೆದುಕೊಟ್ಟರೇನೊ ಗೊತ್ತಿಲ್ಲ. ನಿನ್ನೆ ಜಯಚಂದ್ರರವರು ಮಾತನಾಡುವಾಗ ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ, ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಏನಿದೆ, ಅದರ ಬಗ್ಗೆಯೂ ಕೂಡ ಹೇಳಿದ್ದಾರೆ. ಮುಖ್ಯಮಂತ್ರಿಗಳು, ನಮ್ಮಲ್ಲಿ ತೆರಿಗೆ ಚೆನ್ನಾಗಿ ವಸೂಲಾಗುತ್ತಿದೆ, ತೆರಿಗೆಯಲ್ಲಿ, ಹಣಕಾಸಿನಲ್ಲಿ ನಮ್ಮ ಪರಿಸ್ಥಿತಿ ಬಹಳ ಸದೃಢವಾಗಿದೆ ಮತ್ತೆ 2002ರ Fiscal Responsibility Act ಏನಿದೆ, ಅದರ ಚೌಕಟ್ಟಿನೊಳಗೆ ನಾವು ಇಟ್ಟುಕೊಂಡು ಬಿಟ್ಟಿದ್ದೇವೆ. ಹಾಗಾಗಿ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯ ವೇಗ ಬಹಳ ಫಾಸ್ಟ್ ಆಗಿ ಹೋಗುತ್ತಿದೆ, ಯಾವುದೇ ರಾಜ್ಯಗಳಿಗೆ ಕಂಪೇರ್ ಮಾಡಿದರೆ ನಾವೆಲ್ಲಾ ಮುಂಚೂಣಿಯಲ್ಲಿದ್ದೇವೆ ಎಂದು ಹೇಳಿದರು. ಆಮೇಲೆ ನಾನು Plan size ಬಗ್ಗೆ ಮಾತನಾಡಿದ್ದೆ, ಈಗ ಅವರೇ ಒಪ್ಪಿಕೊಳ್ಳುತ್ತಿದ್ದಾರೆ, ಇಪ್ಪತ್ತೊಂಭತ್ತೂವರೆ ಸಾವಿರ ಕೋಟಿಯಲ್ಲಿ ಮಾರ್ಚ್ ಕೊನೆಯವರೆಗೆ we may reach Rs. 23,000/- crores ಎಂದು ಹೇಳಿದ್ದಾರೆ. ಅಂದರೆ ಹನ್ನೆರಡು ಸಾವಿರದ ನಾನೂರ ಹದಿಮೂರು ಕೋಟಿ ರೂಪಾಯಿಯನ್ನು ಡಿಸೆಂಬರ್ 31ರವರೆಗೆ ಖರ್ಚು ಮಾಡಿದ್ದೊ, ಇನ್ನುಳಿದ 3 ತಿಂಗಳಿನಲ್ಲಿ ಉಳಿದ 10,000 ಕೋಟಿ ಖರ್ಚು ಮಾಡುತ್ತೇವೆ. ಕಳೆದ ಅನೇಕ ವರ್ಷಗಳಲ್ಲಿ ಮೂರು ತಿಂಗಳಲ್ಲಿ ಇಷ್ಟು ಖರ್ಚು ಮಾಡಿರುವುದು ಹಾಗಾಗಿ we may reach up to Rs. 23,000/- crores ಎಂದು ಹೇಳಿದ್ದಾರೆ. Even then, out of Rs.29,500 crores, even assuming for the arguments sake that you may reach Rs.23,000 crores, there will be a cut of 25% of plan. Admittedly, it is a fact. 25% ಕಟ್ ಆಯಿತೆಂದರೆ,

ಸುಮಾರು 7000 ಕೋಟಿ ರೂಪಾಯಿಗಳನ್ನು ಪ್ಲಾನ್‌ನಲ್ಲಿ ನೀವು ಖರ್ಚು ಮಾಡಲಿಲ್ಲ, ಈ ವರ್ಷ ಮಾಡುತ್ತಿಲ್ಲ. This is not a small amount. 25% of Rs.29,000 crores is a very big amount. That means to say, irrigation ಗೆ Rural Development ಗೆ Agricultureಗೆ, ಕುಡಿಯುವ ನೀರಿಗೆ, ವಿದ್ಯುತ್‌ಗೆ ಹಣ ಖರ್ಚು ಮಾಡಿಲ್ಲವೆಂಬುದು ಬಹಳ ಸ್ಪಷ್ಟ. ಹಾಗಾಗಿ ಇವರು ಕರ್ನಾಟಕ ಬಹಳ ಸುಸ್ಥಿತಿಯಲ್ಲಿದೆ ಎಂದರೂ ಕೂಡ What is the GDP growth in Karnataka compared to All India GDP growth? The All India GDP growth for the year 2008-09 is 6.7%. Whereas in Karnataka, it is only 4.5%. in the current year the all India GDP growth is 7.2% to 7.5% whereas Karnataka's GDP growth is 5.5% How can you say that there is a growth? ದೇಶದ ಉತ್ಪನ್ನ ಬಹಳ ಜಾಸ್ತಿಯಾಗಿದೆ. Where is it? It cannot be believed. Economic Survey ಯಲ್ಲಿ ಇವರ ಅಂಕಿ ಅಂಶಗಳಿಂದ It is very clear it is much less than the GDP growth of Government of India. Government of India ದಲ್ಲಿ ಇಷ್ಟೆಲ್ಲಾ recession ಇದ್ದರೂ ಸಹ there is a big jump from last year to this year. But, whereas in Karnataka there is no that kind of speed of growth. It is an admitted fact.

Sri. B.S. Yediyurappa : What about other States?

ಶ್ರೀ ಸಿದ್ದರಾಮಯ್ಯ : Other States ಬಗ್ಗೆ ನಮಗೆ ಬೇಕಾಗಿಲ್ಲ. ಕರ್ನಾಟಕದ ಬಗ್ಗೆ ಹೇಳಿ.ನಾವು ಬೇರೆ ರಾಜ್ಯಗಳಿಗೆ ಹೋಗಿ ನೋಡಿಕೊಂಡು ಬರುವುದಕ್ಕಾಗುತ್ತಾ? ಹಾಗಾದರೆ ಕರ್ನಾಟಕದಲ್ಲಿ 2005–06 ರಲ್ಲಿ ನಿಮ್ಮದು 4,152 ಕೋಟಿ ರೂ. ರೆವಿನ್ಯೂ Surplus ಇತ್ತು. What is the revenue surplus today? 2007-08 ರಲ್ಲಿ ಇದ್ದ 4,152 ಕೋಟಿ ರೂ. revenue surplus, today, it has been reduced to 500 crores. 4,000 ಕೋಟಿ ನಿಮಗೆ revenue surplus ಕಡಿಮೆ ಆದರೆ where is the money for the development? Then You have to go for borrowing, 8,900 ಕೋಟಿ ಸಾಲ ಇದ್ದದ್ದು ಈ ವರ್ಷ ಸಾಲ ಎಷ್ಟಕ್ಕೆ ಹೋಗಿದ್ದೀರಿ? ಮುಂದಿನ ವರ್ಷಕ್ಕೆ 12,000 ಚಿಲ್ಲರೆ ಕೋಟಿ internal borrowing ಗೆ ಹೋಗುತ್ತಿದ್ದೀರಿ.

ಈ ರಾಜ್ಯದ ಜನ ಇದನ್ನು ಬಹಳ ಚೆನ್ನಾಗಿದೆ ಎಂದು ಹೇಳಬೇಕಾ? ನಿಮಗೆ ಬೆನ್ನು ತಟ್ಟಬೇಕಾ? Is it not a fact? ನೀವು ಕೊಟ್ಟಿರುವ ಅಂಕಿ ಅಂಶಗಳನ್ನೇ ನಾನು ಹೇಳುತ್ತಿರುವುದು. ನೀವು ಅಲ್ಲ ಎಂದು ಹೇಳಿದಿರಿ. ಹಾಗಾದರೆ ನಾನು ಹೇಳುವುದು ಒಪ್ಪಿಕೊಳ್ಳುತ್ತೀರಾ? ನಾನೂ ಸತ್ಯಾಂಶಗಳನ್ನೇ ಹೇಳುತ್ತಿರುವುದು. ಇವೆಲ್ಲಾ ನೀವೇ ಕೊಟ್ಟಿರುವಂತಹ ಪುಸ್ತಕಗಳು. ನಾನೂ ಅದೇ ಅಂಕಿ ಅಂಶಗಳನ್ನೇ ಹೇಳುತ್ತಿರುವುದು.

ಡಾ: ಹೆಚ್.ಸಿ. ಮಹಾದೇವಪ್ಪ : ನೀವು ಹೇಳಿದ್ದೂ ಅವರೂ ಹೇಳಿದ್ದೂ ಎರಡೂ ಸರಿ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಇಲಾಖೆಗಳಲ್ಲಿ ಕೂಡ what is the allocation? What is the release? What is the expenditure? ಅದು ಒಂದು ಇಡಿ ನೋಡೋಣ. ನಾನು ಅದಕ್ಕೋಸ್ಕರ ಒಂದು Performance Budget ಇಡಿ ಎಂದು ಹೇಳಿದ್ದು. ನೀವು ಮೊದಲನೇ ಬಜೆಟ್ ಮಂಡಿಸುವಾಗಲೇ ಹೇಳಿದಿರಿ. ನಾನು ಕೊನೆಯಲ್ಲಿ ಹಣ ಬಿಡುಗಡೆ ಮಾಡುವುದಿಲ್ಲ. ಮೂರು ತಿಂಗಳಿಗೊಂದು ಸಾರಿ ರಿವ್ಯೂ ಮಾಡುತ್ತೇನೆ, ಮೂರು ತಿಂಗಳಿಗೆ ಎಷ್ಟು ಬಿಡುಗಡೆ ಮಾಡಬೇಕೋ ಅಷ್ಟು ಬಿಡುಗಡೆ ಮಾಡುತ್ತೇನೆಂದು ಹೇಳಿದಿರಿ. ಎಲ್ಲಿ ಮಾಡಿದಿರಿ ಅದನ್ನು? Did you follow it? You did not comply with your own statement made on the floor of this House. ಎಲ್ಲಿ ಮಾಡಿದಿರಿ? ಅಂಕಿ ಅಂಶಗಳು ಬಹಳ ಸ್ಪಷ್ಟವಾಗಿ ಇಲ್ಲವೆಂದು ಹೇಳುತ್ತವೆ. ನಿಮ್ಮಲ್ಲಿ ಕೆಲವು development ಎಷ್ಟರ ಮಟ್ಟಿಗೆ ಆಗುತ್ತಿವೆ ನಿಮ್ಮಲ್ಲಿ ಎನುವುದಕ್ಕೆ ಸುಮ್ಮನೆ ಒಂದು ಹೇಳುತ್ತೇನೆ. ಇದನ್ನು development ಆಗುತ್ತದೆ ಎಂದು ಹೇಳಬೇಕಾ? ಕುಡಿಯುವ ನೀರು ಸರಬರಾಜಿಗೆ 2008–09ರಲ್ಲಿ 174 ಕೋಟಿ ರೂ. ಖರ್ಚು ಮಾಡಿದರೆ, 2009–10 ರಲ್ಲಿ 239 ಕೋಟಿ ರೂ. ಇಟ್ಟುಕೊಂಡಿದ್ದೀರಿ, ಮುಂದಿನ ವರ್ಷಕ್ಕೆ 94 ಕೋಟಿ ರೂ. ಇಟ್ಟುಕೊಂಡಿದ್ದೀರಿ. ರಾಜ್ಯದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸತಕ್ಕಂತಹ ರೀತಿಯಾ ನಿಮ್ಮದು? ರಸ್ತೆ ಮತ್ತು ಬ್ರಿಡ್ಜಸ್‌ಗೆ ನಿಮ್ಮ ರೆವಿನ್ಯೂ ಅಕೌಂಟ್‌ನಲ್ಲಿ 2008–09ರಲ್ಲಿ 1262 ಕೋಟಿ ರೂ. ಖರ್ಚು ಮಾಡಿರುವ ಅಕೌಂಟ್ ಈ ವರ್ಷ current year ಗೆ 942 ಕೋಟಿ ರೂ, ಮಾನ್ಯ ಉದಾಸಿಯವರೇ, ಮುಂದಿನ ವರ್ಷಕ್ಕೆ 867 ಕೋಟಿ ರೂ. ಏನು ರಸ್ತೆಗಳೆಲ್ಲಾ ಚೆನ್ನಾಗಿ ಆಗಿ ಬಿಟ್ಟಿವೆಯೇ ಅನುದಾನ ಕಡಿಮೆ ಮಾಡಿಕೊಂಡು

ಬರುತ್ತಿದ್ದೀರಿ. ರಸ್ತೆಗಳ ಅಭಿವೃದ್ಧಿ, infrastructure development ಇದೇನಾ? 2008–09ರಲ್ಲಿ ರೆವಿನ್ಯೂ ಅಕೌಂಟ್‌ನಲ್ಲಿ 1262 ಕೋಟಿ ರೂ. ಖರ್ಚು ಮಾಡಿ, ಮುಂದಿನ ವರ್ಷಕ್ಕೆ ರೆವಿನ್ಯೂ ಅಕೌಂಟ್‌ನಲ್ಲಿ 867 ಕೋಟಿ ರೂ. ಖರ್ಚು ಮಾಡಿದ್ದೀರಿ. ಎಷ್ಟು ಕಡಿಮೆ ಆಯಿತು? You have reduced 400 crores of rupees. 962 ಕೋಟಿ ರೂ. ಈ ವರ್ಷಕ್ಕೆ ಎಂದು ಹೇಳಿದಿರಿ. ಈ ವರ್ಷ ಎಷ್ಟು ಖರ್ಚಾಗುತ್ತದೆ ಅದು ಏನು ಕಥೆಯೋ ಗೊತ್ತಿಲ್ಲ. ಈ ವರ್ಷಕ್ಕೆ ಪೆಂಡಿಂಗ್ ಬಿಲ್ಸ್ 1,069 ಕೋಟಿ ರೂ. ಬಾಕಿ ಇದೆ. ನೀವು ಹೊಸ ಕೆಲಸಗಳನ್ನು ಎಲ್ಲಿ ಮಾಡುತ್ತೀರಿ? ಅಪೆಂಡಿಕ್ಸ್ 'ಸಿ' ಹಾಗೂ ಅಪೆಂಡಿಕ್ಸ್ 'ಇ' ನೋಡಿದೆ, ಎಲ್ಲಾ ತೆಗೆದುಕೊಂಡು ಹೋಗಿ ಶಿವಮೊಗ್ಗ ಜಿಲ್ಲೆಗೆ, ಶಿಕಾರಿಪುರ ತಾಲ್ಲೂಕಿಗೆ, ಹಾಗೂ ಮಾನ್ಯ ಉದಾಸಿಯವರ ಕ್ಷೇತ್ರಕ್ಕೆ ಎಲ್ಲಾ ದುಡ್ಡನ್ನೂ ನಿಮಗೇ ಹಾಕಿಕೊಂಡಿದ್ದೀರಿ. PMGSY ಯೋಜನೆಯೂ ಅಲ್ಲಿಗೆಯೇ? Central Road Fund ಬಂದರೂ ನಿಮಗೆಯೇ? ನಾವು ಇಲ್ಲಿ ಅಪ್ರೂವ್ ಮಾಡಿಕೊಂಡು ಕುಳಿತುಕೊಳ್ಳಬೇಕಾ? Where is the inclusive growth? 11ನೇ ಪಂಚವಾರ್ಷಿಕ ಯೋಜನೆ ಬಗ್ಗೆ ಮಾನ್ಯ ಮಹಾದೇವಪ್ಪನವರು ಬೆಳಿಗ್ಗೆ ಬಹಳ ಚೆನ್ನಾಗಿ ಹೇಳಿದರು. Where is the inclusive growth? ನೀವು ಬೇಕು ಬೇಕಾದ ಕಡೆ ರಸ್ತೆಗಳನ್ನು ಮಾಡಿಕೊಂಡು, ಬೇಕು ಬೇಕಾದ ಕಡೆ ಬೇರೆ ಕೆಲಸಗಳನ್ನು ಮಾಡಿಕೊಂಡರೆ what about the other constituencies? ಬೇರೆ constituency ಗಳಿಗೆ ದುಡ್ಡು ಕೊಟ್ಟಿಲ್ಲವೆಂದರೆ this disparity will continue or it will be increased. You can't claim that state ನಲ್ಲಿ inclusive growth ಆಗುತ್ತಿದೆ ಎಂದು ಹೇಳುವುದಕ್ಕೆ ಬರುವುದೇ ಇಲ್ಲ. 11th five year plan ನಲ್ಲಿ emphasis ಮಾಡಿರುವುದು for development and inclusive growth. Where is it? ಈಗಾಗಲೇ ಇದು ನಾಲ್ಕನೇ ವರ್ಷ. 2010–11 ನಾಲ್ಕನೇ ವರ್ಷ. 2011–12ಕ್ಕೆ 11ನೇ ಪಂಚವಾರ್ಷಿಕ ಯೋಜನೆ ಮುಗಿದು ಹೋಗುತ್ತದೆ. ವಿದ್ಯುಚ್ಛಕ್ತಿಯಲ್ಲಿ ರೆವಿನ್ಯೂ ಅಕೌಂಟ್‌ನಲ್ಲಿ 2008–09 ರಲ್ಲಿ 1945 ಕೋಟಿ ರೂ. ನೀವು ಹಣಕಾಸು ಮಂತ್ರಿಗಳಾಗಿರುವಾಗ ಬಂದಿದ್ದು. 2009–10ಕ್ಕೆ ನೀವು ಬಜೆಟ್‌ನಲ್ಲಿ ಹೇಳಿದ್ದು, budgeted estimates 2429 ಕೋಟಿ ರೂ. ಆದರೆ ಖರ್ಚು ಮಾಡುತ್ತಿರುವುದು revised estimate ನಲ್ಲಿ 1929 ಕೋಟಿ ರೂ.

ಮುಂದಿನ ವರ್ಷಕ್ಕೆ 2,854 ಕೋಟಿ ರೂ: ಎಲ್ಲಿಂದ ತರುತ್ತೀರಿ? This is revenue account. ಕಳೆದ ವರ್ಷಕ್ಕಿಂತ ಹಿಂದಿನ ವರ್ಷಕ್ಕಿಂತ ಕಡಿಮೆ ಮಾಡಿಕೊಂಡು ಬಂದಿದ್ದೀರಿ. Irrigation ನಲ್ಲಿ revenue account ನಲ್ಲಿ ಬಹಳ ಕಡಿಮೆ. ಬರೀ 62 ಕೋಟಿ ರೂ. ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. Capital account ನಲ್ಲಿ ನೀರು ಸರಬರಾಜಿಗೆ 2008–09 ರಲ್ಲಿ 1171 ಕೋಟಿ ರೂ. 2009–10 ರಲ್ಲಿ 1200 ಕೋಟಿ ರೂ. Revised budget ನಲ್ಲಿ 1300 ಕೋಟಿ ರೂ. ಮಾಡಿದ್ದಿರಿ, ಮುಂದಿನ ವರ್ಷಕ್ಕೆ 936 ಕೋಟಿ ರೂ. ಮಾಡಿಕೊಂಡಿದ್ದೀರಿ. ನಿನ್ನೆ ಎಲ್ಲಾ ಚರ್ಚೆ ಆಯಿತು. ಕುಡಿಯುವುದಕ್ಕೆ ನೀರು ಇಲ್ಲ, ಬೋರ್‌ವೆಲ್‌ಗಳೆಲ್ಲಾ ಬತ್ತಿ ಹೋಗಿವೆ, ಸಬ್ಸಿಡಿ ಇಲ್ಲ, ಕರೆಂಟ್ ಇಲ್ಲ, ಹೊಸ ಬೋರ್‌ವೆಲ್ ತೆಗೆಯುವುದಕ್ಕೆ ದುಡ್ಡು ಇಲ್ಲ, ಮುಂದಿನ ವರ್ಷಕ್ಕೆ ಕುಡಿಯುವ ನೀರಿಗೆ ಮತ್ತೆ ರೆಡ್ಯೂಸ್ ಮಾಡಿದ್ದೀರಿ. ಅದರ ಬಗ್ಗೆ ಎಷ್ಟು ದುಡ್ಡು ಕೊಡುತ್ತೀರಿ ಎಂದು ಏನೂ ಹೇಳಲಿಲ್ಲ. Capital outlay, Captal account ನಲ್ಲಿ ನೀರಾವರಿಗೆ 2008–09ರಲ್ಲಿ 2483 ಕೋಟಿ ರೂ. ಖರ್ಚು ಮಾಡಿದ್ದೀರಿ. 2009–10ರಲ್ಲಿ 3667 ಕೋಟಿರೂ. ಖರ್ಚು ಮಾಡುತ್ತೇವೆಂದು ಹೇಳಿ 3600 ಕೋಟಿ ರೂ. ರಲ್ಲಿ ಅದು ಎಷ್ಟು ಬಿಡುಗಡೆ ಮಾಡುತ್ತೀರೋ ಏನು ಕಥೆಯೋ ಗೊತ್ತಿಲ್ಲ. ರಿವೈಸ್ ಮಾಡಿದ್ದೀರಿ. ಮುಂದಿನ ವರ್ಷಕ್ಕೆ 3994 ಕೋಟಿ ರೂ. ಇದನ್ನು ನೀವು plan size ಹೆಚ್ಚಿಗೆ ಮಾಡುತ್ತಿದ್ದೀರಿ, ನೀರಾವರಿಗೆ ಖರ್ಚು ಮಾಡುವುದು ಕಡಿಮೆಯೂ ಮಾಡುತ್ತಿದ್ದೀರಿ, ನೀರಾವರಿ pending project ಗಳನ್ನು ಹೇಗೆ complete ಮಾಡುತ್ತೀರಿ? That is why, I suggested. ನಾನು ಭಾಷಣ ಮಾಡುವಾಗ ಹೇಳಿದ್ದೆ. ಐದು ವರ್ಷಗಳಿಂದ 30,000 ಕೋಟಿ ರೂ. ಗಳನ್ನು ನಾವು ಖರ್ಚು ಮಾಡಬೇಕು. ಎಲ್ಲಾ ಪ್ರಾಜೆಕ್ಟ್‌ಗಳನ್ನು complete ಮಾಡಬೇಕಾದರೆ another 30,000 corers ನಮ್ಮ requirement ಇದೆ ಎಂದರೆ ನೀವು ಐದು ವರ್ಷಗಳಲ್ಲಿ ಒಂದು plan of action ಮಾಡಬೇಕು. ಐದು ವರ್ಷಗಳಲ್ಲಿ ಮುಂದಿನ ವರ್ಷಕ್ಕೆ 7 ರಿಂದ 8 ಸಾವಿರ ಕೋಟಿ ರೂ. ಖರ್ಚು ಮಾಡುತ್ತೇವೆ, ಅದರ ಮುಂದಿನ ವರ್ಷ ಇಷ್ಟು ಖರ್ಚು ಮಾಡುತ್ತೇನೆ, ಐದು ವರ್ಷಗಳಲ್ಲಿ ನೀರಾವರಿಯ ಎಲ್ಲಾ pending project ಗಳನ್ನು ಮುಗಿಸುತ್ತೇನೆ

ಎಂದು ಒಂದು time bound programme announce ಮಾಡಿ ಎಂದು ಹೇಳಿದೆ. ಅದರ ಬಗ್ಗೆ ನೀವು ಏನೂ ಹೇಳುವುದಿಲ್ಲ.

(4-50 PM)

ಆಮೇಲೆ ಪ್ಲಾನ್‌ನಲ್ಲಿ ಹಿಂದೆ 2004, 2005, 2006, 2007 ರಲ್ಲಿ 29% of the total plan ನಲ್ಲಿ ನೀರಾವರಿಗೆ ಖರ್ಚು ಮಾಡಲಾಗುತ್ತಿತ್ತು. Now, it has been reduced to 13%. ಇದು ನೀವು ನೀರಾವರಿಗೆ ಕೊಡುವ ಆದ್ಯತೆಯೆ? ಮತ್ತೆ ನೀವು ಯಾವುದಕ್ಕೆ ಆದ್ಯತೆ ಕೊಟಿದ್ದೀರಿ? RDPR ಗೂ ಕಡಿಮೆಯಾಗಿದೆ. ನೀವು ಮಠಮಾನ್ಯಗಳಿಗೆ ಹಣವನ್ನು ಕೊಟ್ಟಿದ್ದೀರಿ.ನೀವು ಮಠಮಾನ್ಯಗಳಿಗೆ ಕೊಡಬಾರದು ಎನ್ನುವುದಕ್ಕಿಂತ ಅವರುಗಳು ನಿಮ್ಮನ್ನು ಹಣ ಕೊಡಿ ಎಂದು ಯಾರೂ ಕೇಳಿಯೇ ಇಲ್ಲ ನಮಗೆ ಹಣ ಕೊಡಿ ಎಂದು ಅರ್ಜಿಗಳನ್ನು ಅವರೇನೂ ಕೊಟ್ಟಿಲ್ಲ. ಯಾರೂ ಅರ್ಜಿಗಳನ್ನು ಕೊಡುವುದಿಲ್ಲ. ಅವರ ಹತ್ತಿರವೇ ಮಠಗಳನ್ನು ಮೇಯಿನ್ ಟೇನ್ ಮಾಡುವುದಕ್ಕೆ ಮತ್ತು ಮಠಗಳಲ್ಲಿರುವ ಮಕ್ಕಳಿಗೆ ಊಟ ಹಾಕುವುದಕ್ಕೆ ಆರ್ಥಿಕ ಶಕ್ತಿ ಅವರಲ್ಲಿದೆ. ಅವರೇನೂ ಇದಕ್ಕಾಗಿ ಹಣವನ್ನು ಕೊಡಿ ಎಂದು ನಿಮ್ಮನನು ಕೇಳಿಲ್ಲ. ಆದರೆ my objection is ಅವರಿಗೆ ಕೊಟ್ಟದ್ದನ್ನು ನೀವು ಹೇಗೆ ಆಡಿಟ್ ಮಾಡುತ್ತೀರಿ? Who is accountable for that? ಅದನ್ನು ಹೇಗೆ ಖರ್ಚು ಮಾಡಿದೆ ಎಂದು ತೋರಿಸುತ್ತೀರಿ? For every pie spent by the Government is accountable and is answerable to this House. ನೀವು ಹೇಳಿ ಕಳೆದ ಸಾರಿ ಕೊಟ್ಟ ಹಣವನ್ನು ಇಂತಿಂಥದ್ದಕ್ಕೆ ಖರ್ಚು ಮಾಡಿದ್ದಾರೆ ಎಂದು ಅವರು ಲೆಕ್ಕವನ್ನು ಕೊಟ್ಟಿದ್ದಾರೆಂದು. ಆ ಲೆಕ್ಕವನ್ನು ಆಡಿಟ್ ಮಾಡಿಸಿದ್ದೇವೆಂದು ನೀವುಹೇಳಿ ನೋಡೋಣ. ಮಠಮಾನ್ಯಗಳಿಗೆ ಕೊಟ್ಟಿದ್ದಂಥ ಹಣ ಎಷ್ಟು, ಅವರು ಈ ರೀತಿಯಾಗಿ ಖರ್ಚನ್ನು ಮಾಡಿದ್ದಾರೆ ಮತ್ತು ಅವರು ಕೊಟ್ಟ ಲೆಕ್ಕವನ್ನು ಇಂಥವರಿಂದ ಆಡಿಟ್ ಮಾಡಿಸಿದ್ದೇವೆ ಎಂದು ಹೇಳಿ ನೋಡೋಣ. ನೀವು ಆಡಿಟ್ ಮಾಡಿಸುತ್ತೀರ? ಅದಕ್ಕೇನೂ ನೀವು ಉತ್ತರವನ್ನು ಹೇಳುವುದಿಲ್ಲ. ನಾವು ಮಠಮಾನ್ಯಗಳಿಗೆ ಖರ್ಚು ಮಾಡುವುದು ಬಹಳ ಒಳ್ಳೆಯದು, ಅದರಿಂದಲೇ ಮಳೆಬೆಳೆ ಆಗುತ್ತದೆ, ಅದರಿಂದಲೇ ಮುಖ್ಯಮಂತ್ರಿ ಕುರ್ಚಿ ಉಳಿದು ಕೊಂಡುಬಿಟ್ಟಿದೆ ಎಂದು ಹೇಳಿದರೆ ನಾವೇನು ಮಾಡುವುದಕ್ಕಾಗುತ್ತದೆ ಹೇಳಿ. ನಾವು ಅದನ್ನು ಮೌಢ್ಯ ಎಂದು ಹೇಳುತ್ತೀವಷ್ಟೆ. ಮೌಢ್ಯಗಳು ಎಂದು

ಹೇಳುತ್ತೇವೆ. ಅದರಿಂದಲೇ ಮಳೆಬೆಳೆ ಆಗುವುದಾದರೆ ಆ ಕೆಲಸವನ್ನೇ ಮಾಡುತ್ತಾ ಕುಳಿತುಕೊಂಡು ಬಿಡಬಹುದು. ಮಳೆಬೆಳೆ ಎಲ್ಲಾ ಸಮೃದ್ಧಿಯಾಗುತ್ತದೆ ಎಂದರೆ ಅವುಗಳಿಗೆ ಹಣವನ್ನು ಕೊಟ್ಟು ಸುಮ್ಮನೆ ಕುಳಿತು ಕೊಂಡುಬಿಡಬಹುದು. This is my objection. ಅದಕ್ಕೆ ಅವರು ಉತ್ತರ ಹೇಳುವುದಿಲ್ಲ. ಇನ್ನು ಈ ಸಾರಿ ಕೃಷಿ ಬಗ್ಗೆ ಬಹಳ ಹೇಳಿದ್ದಾರೆ. ಕೃಷಿ ವಿಚಾರದಲ್ಲಿ ಕೇಂದ್ರ ಸರ್ಕಾರ ಕೂಡ ಹೊಸ ಹೊಸ ಕಾರ್ಯಕ್ರಮಗಳನ್ನು ಮಾಡಿ ಹೆಚ್ಚು ಅನುದಾನ ನಮ್ಮ ರಾಜ್ಯಕ್ಕೆ ಬರುತ್ತಿದೆ. ನೀವು ನೋಡಿ ಇವರು recession ಆಗಿದ್ದರಿಂದ ನಮಗೆ ಬಹಳ ಕಷ್ಟವಾಯಿತು, ಕೇಂದ್ರ ಸರ್ಕಾರ ಕೊಡತಕ್ಕಂಥ ಅನುದಾನದಲ್ಲಿ ನಮ್ಮ tax share ಏನೂ ಕಡಿಮೆಯಾಗಿಲ್ಲ. ನೀವು ಹೇಳುವ ಕಾರಣವೇ ನಿಜವಾದರೆ ನಮಗೆ ಬರುವ ಈ tax share ಬಹಳ ಕಡಿಮೆಯಾಗಬೇಕಿತ್ತಲ್ಲವೆ? ಅಲ್ಲಿ recession ಆಗಿದ್ದರಿಂದ ನಾವೇನು tax share ಎಷ್ಟು ಬರಬಹುದು ಎಂದು estimate ಮಾಡಿದ್ದೆವೋ ಅದಕ್ಕಿಂತ ಬಹಳ ಕಡಿಮೆಯಾಗಬೇಕಿತ್ತಲ್ಲ. ನೋಡಿ, ಈಗ ಕೇಂದ್ರದಿಂದ ದೊರೆಯುವ ಸಂಪನ್ಮೂಲಗಳು tax ನಲ್ಲಿ ನಮ್ಮ share transfer ಆಗುವುದು 2006-07 ರಲ್ಲಿ 4609, 2006-07 ರಲ್ಲಿ 5374, 2007-08 ರಲ್ಲಿ 6300, 2007-08 ರಲ್ಲಿ 6779, 2008-09 ರಲ್ಲಿ 7992, 2008-09 ಕ್ಕೆ ಲೆಕ್ಕ 7154, 2009-10 ಕ್ಕೆ 7645 Where is the big decrease ನಮ್ಮ share ನಲ್ಲಿ. ಇವರು ತೆರಿಗೆ ನಮಗೆ All India level ನಲ್ಲಿ ಕಡಿಮೆಯಾಯಿತೆಂದರೆ, ಎಲ್ಲ revenue receipts ಕಡಿಮೆಯಾಗಿ ನಮಗೆ ಬರುವ tax share ಬಹಳ ಕಡಿಮೆಯಾಗಿಬಿಡಬೇಕಾಗಿತ್ತಲ್ಲ. ಅದೇ ರೀತಿ ಕೇಂದ್ರದ grants ನಲ್ಲಿ assistance 2008-09 ರಲ್ಲಿ 5,450 ಕೋಟಿ ರೂ. ಇದ್ದದ್ದು 2008-09 ರಲ್ಲಿ revised ನಲ್ಲಿ 5332 ಕೋಟಿ ರೂ. 2009-10 ಕ್ಕೆ 5893 ಕೋಟಿ ರೂ. ಇದ್ದದ್ದು revised ನಲ್ಲಿ 7572 ಕೋಟಿ ರೂ. ಆಗಿದೆ. ಅಂದರೆ 5893 ಕೋಟಿಯಿಂದ 7572 ಕೋಟಿ ಆಗಿದೆ. ಇದು ಜಾಸ್ತಿಯೇ ಆಯಿತಲ್ಲಾ. ಕೇಂದ್ರ ಸರ್ಕಾರದಿಂದ ಬರತಕ್ಕಂಥ grants ಜಾಸ್ತಿಯೇ ಆಯಿತು. ನಾನು ಅದಕ್ಕೇ ಹೇಳಿದ್ದು RBI Report ಅನ್ನು ಸದನದಲ್ಲಿ ಇಡಬೇಕೆಂದು. ನೀವೇನೋ ಹೇಳುತ್ತೀರಲ್ಲ, ನಮಗೆ RBI ನವರು appreciate ಮಾಡಿದ್ದಾರೆ, ನಮ್ಮ ಬೆನ್ನು

ತಟ್ಟಿದ್ದಾರೆ, World Bank ನವರು ನಮ್ಮ ಬೆನ್ನು ತಟ್ಟಿದ್ದಾರೆ ಎಂದು ಹೇಳುತ್ತೀರಲ್ಲ, ಆಯಿತು RBI Report ಸದನದಲ್ಲಿಡಿ. ನಾವು ಕೂಡ ಓದಿಕೊಳ್ಳುತ್ತೇವೆ. ಅದೇ RBI ನವರು ಏನು ಹೇಳಿದ್ದಾರೆಂದರೆ ನೀವು Non-tax revenue ವನ್ನು ಸರಿಯಾಗಿ ವಸೂಲು ಮಾಡಿಲ್ಲವೆಂದು ಹೇಳಿದ್ದಾರೆ. ಅದಕ್ಕೇನು ನೀವು ಹೇಳುತ್ತೀರಿ? All India level ನಲ್ಲಿ Non-tax Revenue ಬಹಳ ಕಡಿಮೆಯಾಗಿದೆಯೆಂದು ಹೇಳಿದ್ದಾರೆ. All India level ನಲ್ಲಿ 1.8% ಇದ್ದರೆ ಕರ್ನಾಟಕದಲ್ಲಿ ಈಗ ಕಡಿಮೆಯಾಗಿದೆಯೆಂದು ಹೇಳುತ್ತಾರೆ. ಅದಕ್ಕೇನು ನೀವು ಉತ್ತರ ಹೇಳುತ್ತೀರಿ? ಸುಮ್ಮನೆ ನೀವು, ಸಿದ್ದರಾಮಯ್ಯನವರು ಜನಗಳಿಗೆ mislead ಮಾಡುತ್ತಾರೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. ನಾನು ಸರಿಯಾದ ರೀತಿಯಲ್ಲಿಯೇ ಜನರ ಮುಂದೆ ಅಂಕಿ ಅಂಶಗಳನ್ನು ಕೊಟ್ಟು ನಿಮ್ಮ ಸರ್ಕಾರ ಹಣಕಾಸಿನ ಪರಿಸ್ಥಿತಿಯನ್ನು ಹದಗೆಡಿಸುತ್ತಿದೆ ಎಂದೇ ನಾನು ಹೇಳುತ್ತಿರುವುದು. ಇದರ ಬಗ್ಗೆ ಬೇಕಾದರೆ ಸಾರ್ವಜನಿಕವಾಗಿ ಚರ್ಚೆ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ಇಲ್ಲಿಯೂ ಮಾಡೋಣ. ಆದರೆ ಇಲ್ಲಿ ಉತ್ತರ ನಮಗೆ ಇಷ್ಟೇ ತಾನೆ ಬರುವುದು. ಈ ರೀತಿ ಹೇಳಿ ಬೈದರೆ ನಮ್ಮ ನಾಲಿಗೆ ಸೀಳಿ ಎಂದು ಹೇಳುತ್ತೀರಿ. ಅದು ಹೇಗೆ ಸೀಳುತ್ತೀರೋ ಗೊತ್ತಿಲ್ಲ. ನಾಲಿಗೆ ಸೀಳುತ್ತೀರೋ? ಬೀದರ್‌ನಲ್ಲಿ ನನ್ನ ಬಗ್ಗೆ ಅವರಿಗೆ ಬಹಳ ಕೋಪ ಬಂದು ಬಿಟ್ಟಿತಪ್ಪಾ. ಅದು ಯಾರ ಮೇಲಿನ ಕೋಪವೋ ಗೊತ್ತಿಲ್ಲ ನನ್ನ ಮೇಲೆ ತಿರುಗಿಸಿಬಿಟ್ಟಿದ್ದಾರೆ. ಅಲ್ಲೆಲ್ಲೋ ಕರುಣಾಕರರೆಡ್ಡಿಯವರನ್ನು ನೋಡಿರಬೇಕು, ನಿಮಗೆಲ್ಲೋ ಬೈದಿರಬೇಕು ಎಂದು ಕಾಣುತ್ತದೆ. ಒಳಗಡೆ ಆ ರೀತಿ ಇತ್ತೋ ಏನೊ, ಆದರೆ ನಮಗೇನು ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಕರುಣಾಕರರೆಡ್ಡಿ ಯವರ ಹೆಸರನ್ನು ಒಂದು ಸಾರಿ ನೀವು ಹೇಳದಿದ್ದರೆ ನಿಮ್ಮ ಮನಸ್ಸಿಗೆ ಸಮಾಧಾನವಾಗುವುದಿಲ್ಲವೆಂದು ಕಾಣುತ್ತದೆ.

ಶ್ರೀ ಸಿದ್ದರಾಮಯ್ಯ : ಇಲ್ಲಿ ಸಚಿವರಾಗಿರುವವರ ಹೆಸರನ್ನು ಬಿಟ್ಟು ಹೊರಗಡೆ ಇರುವವರ ಹೆಸರನ್ನು ಹೇಳುವುದಕ್ಕಾಗುತ್ತದೆಯೆ? ಸರ್ಕಾರದಲ್ಲಿ ಇರುವ ಮಂತ್ರಿಗಳ ಹೆಸರನ್ನೇ ಹೇಳಬೇಕು. ಆ ರೀತಿಯಲ್ಲಿ ನಿಮ್ಮ ಹೆಸರನ್ನೇ ಹೇಳಬೇಕು. ಈಗ ನಿಮ್ಮ ಖಾತೆಯಲ್ಲಿ ಕುಡಿಯುವ ನೀರಿಗಾಗಿ ಮುಂದಿನ

ವರ್ಷಕ್ಕೆ ಬಹಳ ಕಡಿಮೆ ಹಣವನ್ನು ಇಟ್ಟಿದ್ದಾರೆ. ನೀವು ನೋಡಿದರೆ ಸುಮ್ಮನೆ ನಗುತ್ತಾ ಕುಳಿತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಕುಡಿಯುವ ನೀರಿಗೆ ಹಣವನ್ನು ಕಡಿಮೆ ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಕಡಿಮೆ ಮಾಡಿರುವುದನ್ನು ನಿಮಗೆ ಓದಿ ಹೇಳಲೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ವಿರೋಧ ಪಕ್ಷದ ನಾಯಕರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕುಡಿಯುವ ನೀರಿಗೆ ಹಣ ಕಡಿಮೆ ಮಾಡುವುದಿಲ್ಲವೆಂದು ಹೇಳಿದ್ದಾರೆಯಾದ ಕಾರಣ ಅದಕ್ಕೆ ಯಾವುದೇ ರೀತಿಯ ತೊಂದರೆ ಆಗದ ರೀತಿ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಕೇವಲ ಬಾಯಿಯಲ್ಲಿ ಹೇಳಿದರೆ ಸಾಲದು. ಹಣ ಬರಬೇಕಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿದರೆ ಹೇಗೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಎಷ್ಟು ಕೊಡುತ್ತೇವೆಂದು ಸದನದಲ್ಲಿ ಬಜೆಟ್ ಮೇಲೆ ಉತ್ತರ ಕೊಡುವಾಗಲೇ ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತೇನೆಂದರೆ, ನೀವೇನೋ ನಮ್ಮ ಸರ್ಕಾರ ಎಲ್ಲವನ್ನೂ ಮಾಡುತ್ತದೆ ಎಂದು ಹೇಳುತ್ತೀರಿ. ಜಗದೀಶ್ ಶೆಟ್ಟರೆ, ನಿಮಗೆ ಗೊತ್ತಿಲ್ಲ, ನಿಮಗೆ ಕೊಡಬಾರದು ಎಂಬುದೇ ಅವರ ಉದ್ದೇಶವಿರುವುದು. ಇಲ್ಲದೇ ಹೋದರೆ ಮುಂದಿನ ವರ್ಷಕ್ಕೆ ಕುಡಿಯುವ ನೀರಿಗೆ ಹಣವನ್ನು ಏಕೆ ಕಡಿಮೆ ಮಾಡುತ್ತಿದ್ದರು? ನೋಡಿಕೊಂಡಿದ್ದೀರ ಈ ಬಗ್ಗೆ ಹಣವಿಟ್ಟಿರುವುದನ್ನು? ಕಡಿಮೆಯಾಗಿದೆಯೋ ಇಲ್ಲವೋ? ನೋಡಿ ನೀವು ಇದಕ್ಕೆ ಮಾತನಾಡುವುದೇ ಇಲ್ಲ. ಜಗದಿಶ್ ಶೆಟ್ಟರೆ, ಹೇಳುತ್ತೇನೆ ಕೇಳಿ. 2008–09 ರಲ್ಲಿ ಕುಡಿಯುವ ನೀರಿಗೆ Capital Account ನಲ್ಲಿ 1171 ಕೋಟಿ ಇತ್ತು. ಇದು Revised Estimate 2009–10 ಕ್ಕೆ 1341 ಕೋಟಿ ಎಂದಾಯಿತು. ಮುಂದಿನ ವರ್ಷಕ್ಕೆ 936 ಕೋಟಿ. ಅಂದರೆ ಎಷ್ಟು ಕಡಿಮೆಯಾಯಿತು? ನೋಡಿ ಹೇಗೆ, ನಿಮ್ಮನ್ನು

ಪಕ್ಕದಲ್ಲಿಯೇ ಕೂರಿಸಿಕೊಂಡು ಹೀಗೆ ಮಾಡಿದ್ದಾರಲ್ಲ. ನಾವು ಏನು ಮಾಡಬೇಕು ಹೇಳಿ. ಬಚ್ಚೇಗೌಡರೆ, ಮುಂದಿನ ವರ್ಷಕ್ಕೆ ಕುಡಿಯುವ ನೀರಿಗೆ ಹಣ ಎಲ್ಲಿ ಸಿಗುತ್ತದೆ? ಹೊಸದಾಗಿ ಏನೂ ಹೇಳಿಲ್ಲ. ಎಲ್ಲವೂ on-going projects ಬಗ್ಗೆ ಹೇಳಿರುವುದು. ಹೊಸದಾಗಿ ಒಂದೇ ಒಂದು ಕುಡಿಯುವ ನೀರಿನ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕಳೆದ ವರ್ಷಕ್ಕಿಂತ ಮುಂದಿನ ವರ್ಷಕ್ಕೆ ಹಣ ಕಡಿಮೆ ಸಿಗುತ್ತದೆಂದರೆ 1300 ಕೋಟಿಯಿಂದ 900 ಕೋಟಿ ಬಚ್ಚೇಗೌಡರೆ. ಅನ್ಯಾಯವಾಗಿ 400 ಕೋಟಿ ಕಡಿಮೆಯಾ ಯಿತಲ್ಲವೆ? ಇವತ್ತು 400 ಕೋಟಿ ಕುಡಿಯುವ ನೀರಿಗೆ ಕಡಿಮೆಯಾದರೆ how do you take up new works? ಏನು ನಿಮ್ಮ ಬಜೆಟ್ ಬಹಳ ಚೆನ್ನಾಗಿದೆ ಎಂದು ನಿಮಗೆ ಹೇಳಬೇಕೆ? ಬಹಳ ಒಳ್ಳೆಯ ಬಜೆಟ್, ಕುಡಿಯುವ ನೀರಿನ ವಿಚಾರದಲ್ಲಿ ಮತ್ತು ಹಳ್ಳಿಯವರ ವಿಚಾರದಲ್ಲಿ ಹಳ್ಳಿಯವರ ಪರವಾಗಿರುವ ಬಜೆಟ್ ಇದು ಎಂದು ನಿಮಗೆ ಶಹಭಾಷ್‌ಗಿರಿ ಕೊಡಬೇಕೆ? ನೀವು ಕೊಟ್ಟಿರುವ ಅಂಕಿ ಅಂಶಗಳನ್ನೇ ನಾನು ಈಗ ಹೇಳಿರುವುದು. Revenue account ಹಾಗು Capital account ಎಷ್ಟು ಎಂದು ಇದರಲ್ಲಿಯೇ ತಾನೇ ನೀವು ಖರ್ಚು ಮಾಡುವುದನ್ನೆಲ್ಲಾ ಹೇಳಿರುವುದು.

ಇದು ಬಿಟ್ಟು ಬೇರೆ ಎಲ್ಲಿ ಖರ್ಚು ಮಾಡಿದ್ದೀರಿ? ನೀವು ಇನ್ನ್ಯಾವುದಾದರೂ account ಇಟ್ಟುಕೊಂಡಿದ್ದಿರಾ? ಇದೆ, ಅಲ್ಲವೇ? PWD ಬಗ್ಗೆ ಹೇಳೋಣವೆಂದರೆ ನಮ್ಮ ಉದಾಸಿಯವರು ಹೊರಟೇ ಹೋದರು. ಮಾನ್ಯ ಯಡಿಯೂರಪ್ಪನವರೇ, ನೋಡಿ ಇದು ಒಂದು ಬಹಳ ದೊಡ್ಡ issue ಆಗುತ್ತದೆ. Current year ನ Appendix-C & Appendix-E ಈಗ ಕೊಟ್ಟಿದ್ದು, ಅದು ಮೊನ್ನೆ ನಮ್ಮ ಮನೆಗಳಿಗೆ ಬಂದಿದೆ. ರೇವಣ್ಣನವರೇ, ನೀವು PWD minister ಆಗಿದ್ದಾಗ ಹೀಗೆ ಮಾಡಿದ್ದಿರಾ? ಸ್ವಲ್ಪ ಮಾಡಿದ್ದಿರಿ. ರೇವಣ್ಣನವರೇ, ನಾನು ಈಗ ಎಲ್ಲಾ ಹೇಳಿಬಿಡುತ್ತೇನೆ, ಆಮೇಲೆ ನೀವು ಹೇಳಿ. ನೀವೆಲ್ಲ ಸದಸ್ಯರು PMGSY ದುಡ್ಡು ಯಾರದು ಎಂದು ಸ್ವಲ್ಪ ನೋಡಿಕೊಳ್ಳಿ. ಆ ಹಣ ಯಾರದು? 100% ಕೇಂದ್ರ ಸರ್ಕಾರದ ದುಡ್ಡು. ಆದರೆ ಇಲ್ಲಿ ಹೇಗೆ ಕೊಟ್ಟಿದ್ದಾರೆಂದು ನೋಡಿ. ಹಾವೇರಿಗೆ 19 ಕೋಟಿ 69 ಲಕ್ಷ ರೂಪಾಯಿ, ಹಾನಗಲ್‌ಗೆ 39 ಕೋಟಿ 54 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದು ಯಾರ constituency ಎಂದರೆ ಮಾನ್ಯ

ಉದಾಸಿಯವರದು. ಬ್ಯಾಡಗಿಗೆ 62 ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಸುರೇಶ್ ಗೌಡ ಬ್ಯಾಡಗಿ ಕ್ಷೇತ್ರದ ಸದಸ್ಯ. ರಾಣೆಬೆನ್ನೂರು 24 ಕೋಟಿ ರೂಪಾಯಿ, ಸವಣೂರು 20 ಕೋಟಿ, ಶಿಗ್ಗಾಂವ್ ಎಂಟು ಕೋಟಿ 55 ಲಕ್ಷ, ಹಿರೇಕೆರೂರು 20 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇದು ಕೇವಲ ಹಾವೇರಿ ಜಿಲ್ಲೆಯದು ಮಾತ್ರ ಹೇಳುತ್ತಿದ್ದೇನೆ. ಇದನ್ನು inclusive growth ಎಂದು ಕರೆಯಬೇಕೇ? ಬರೀ ಹಾನಗಲ್ ಬೆಳೆದರೆ ಪಕ್ಕದ ಬ್ಯಾಡಗಿ ಬೆಳೆದುಬಿಟ್ಟ ಹಾಗೆ ಆಯಿತೆ? How can you claim that it is an inclusive growth? ನೀವು ಮತ್ತೆ ಏನು ಹೇಳಿದಿರಿ ಎಂದರೆ ಯಾವ ರಾಷ್ಟ್ರದಲ್ಲೂ ಮಾಡಿರಲಿಲ್ಲ. ನಾವು ಜಿಲ್ಲಾ ಮಟ್ಟದಲ್ಲಿ Human Development Index ತಯಾರು ಮಾಡಿಕೊಂಡು inclusive growth ಅನ್ನು ಮಾಡುತ್ತಿದ್ದೇವೆ ಎಂದರೆ ಇದೆಯೇ? ಅದನ್ನು ಏಕೆ ಮಾಡಿದಿರಿ? ಪುಸ್ತಕವನ್ನು ಸುಮ್ಮನೆ ಇಟ್ಟುಕೊಂಡು ನೋಡುವುದಕ್ಕೆ ಮಾಡಿದಿರಾ? ಅದನ್ನು ಯಾರೂ ಓದುವುದಿಲ್ಲ, ಬರೆಯುವುದಿಲ್ಲ. I don't know Finance Department ನವರು ಅದನ್ನು ಓದಿಕೊಂಡು ಬಜೆಟ್ ತಯಾರು ಮಾಡಿದ್ದಾರೇನೊ ಎಂದು ಗೊತ್ತಿಲ್ಲ. ಅದನ್ನು ಹೇಳಿಬಿಡಲಿ ನೋಡೋಣ. ಇದನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಬೇಕು. ಐದು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ Human Development Index report ಏನು ತಯಾರು ಮಾಡಿದ್ದೇವೆ, ಅದರ ಆಧಾರದ ಮೇಲೆ ಬಜೆಟ್ ತಯಾರು ಮಾಡಿದ್ದೇವೆಂದು ಹೇಳಿಬಿಡಲಿ ನೋಡೋಣ. ಇದನ್ನೆಲ್ಲ ಕೇಳಿಕೊಂಡು ನಿಮಗೆ ಹೇಳಿದರೆ ನೀವು ನಾಲಗೆ ಕತ್ತರಿಸಿ ಎಂದು ಹೇಳುತ್ತೀರಿ. ಮಾನ್ಯ ಯಡಿಯೂರಪ್ಪನವರೇ, ನೀವು ಈ ರೀತಿ ಮಾಡಿದರೆ ಹೇಗೆ ಹೇಳಿ ನೋಡೋಣ. ನಾವು ಹೊರಗಡೆ ಏನಾದರೂ ಹೇಳಿದರೆ ಬನ್ನಿ ಅಖಾಡಕ್ಕೆ ಎಂದು ಹೇಳುತ್ತೀರಿ. ಇಲ್ಲಿ ಬಂದರೆ ನೀವು ಇರುವುದಿಲ್ಲ. ಒಳಗಡೆ ಬೇಡ, ಹೊರಗಡೆ ಎಲ್ಲಾದರೂ ಹೋದಾಗ ಮಾತನಾಡೋಣ ಎಂದು ಹೇಳುತ್ತೀರಿ. ನಾವು ಎಲ್ಲಿ ಹೋಗಿ ಹೇಳಬೇಕು. For us this is the best forum to hear our views. Whatever we submit, whatever we mention, it is the views of the people. ಅದನ್ನು ಇಲ್ಲಿ ಹೇಳುತ್ತೇವೆ. ಇನ್ನು ನಾವು ಹಣಕಾಸಿನ ಸಾಲ ಮಾಡಿಯೇ ಇಲ್ಲವೆಂದು ಹೇಳುತ್ತಾರೆ. ನೀವು GDP 26%ಗೆ ಉಳಿಸಿಕೊಂಡಿದ್ದೇವೆ ಎಂದು ಹೇಳುತ್ತೀರಿ. ಆಯಿತು, ಉಳಿಸಿಕೊಳ್ಳಿ. ನಮಗೆ ಇನ್ನು 2,000 ಕೋಟಿ

ರೂಪಾಯಿ ಸಾಲ ಮಾಡುವುದಕ್ಕೆ ಅವಕಾಶವಿದೆ. ಸಾಲ ಸಿಗುತ್ತದೆಂದು ತೆಗೆದುಕೊಳ್ಳುವುದಲ್ಲ. ಅದಕ್ಕೆ basic principle ಏನೇಳುತ್ತದೆ, ಸಾಲ ಸಿಗುತ್ತದೆಂದು ಸಾಲ ಮಾಡುವ ಹಾಗೆ ಇಲ್ಲ. 'Not on the basis of availability, it is on the basis of affordability of the State'. That should be the basic principle. ನೀವು ಅದನ್ನು ಎಲ್ಲಿ follow ಮಾಡಿದ್ದೀರಿ? ಮುಂದಿನ ವರ್ಷಕ್ಕೆ 94,000 ಕೋಟಿ ರೂಪಾಯಿ ಸಾಲ ಆಗುತ್ತದೆಂದು ಹೇಳಿದಿರಿ. All right, next year 10,128 ಕೋಟಿ ರೂಪಾಯಿ You have to give for debt service. You mean to say that it is for the creation of the assets. You mean to say that is a developmental expenditure. That is why I said. ಹಾಗಂತ ಹೇಳಿ ಸಾಲ ತೆಗೆದುಕೊಂಡು ಬಂದು ಹೋಳಿಗೆ ಮಾಡಿಕೊಂಡು ತಿನ್ನುವುದಲ್ಲ. ನಮ್ಮ ಮಂತ್ರಿಯವರಾದ ಸುಧಾಕರ್‌ರವರು ಕುಳಿತಿದ್ದಾರೆ. ಈ ವರ್ಷಕ್ಕೆ 950 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇತ್ತು. ಆದರೆ 400 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದು, ಸುಧಾಕರ್‌ರವರೇ, ನೀನು ಎಲ್ಲಿಂದ ಕೊಡುತ್ತೀಯಪ್ಪ? ನಾನು ಪ್ರೀತಿಯಿಂದ singular ನಲ್ಲಿ ಹೇಳುತ್ತಿದ್ದೇನೆ, ತಾವು ತಪ್ಪು ತಿಳಿದುಕೊಳ್ಳಬೇಡಿ. Scheduled Caste Association ನವರು ಬಂದಾಗ ಪಾಪ! ನೀವು ಪೆಚ್ಚಾಗಿಬಿಟ್ಟಿರಿ. ಈ ವರ್ಷ ಗಂಗಾಕಲ್ಯಾಣ ಯೋಜನೆಯಲ್ಲಿ ಒಂದೇ ಒಂದು ಬೋರ್‌ವೆಲ್ ತೋಡಿಸಿದ್ದೀರಾ ಎಂದು ಹೇಳಿ ನೋಡೋಣ. ಇನ್ನು ನಿಮಗೆ ಪಟ್ಟಿಯೇ ಬಂದಿಲ್ಲ. ಈ ವರ್ಷ 2009–10 ಕ್ಕೆ ಇನ್ನು agency fix ಆಗಿಲ್ಲ.

ಶ್ರೀ ಸುಧಾಕರ್ : 2009–10ಕ್ಕೆ ಪ್ರಾರಂಭವಾಗಿದೆ.

ಶ್ರೀ ಸಿದ್ದರಾಮಯ್ಯ : ಅದು ಯಾವುದು ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೊರೆದಿದ್ದೀರಿ ಎಂದು ಲಿಸ್ಟ್ ಕೊಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಇಡೀ ರಾಜ್ಯದಲ್ಲಿ ಒಂದೇ ಒಂದು ಕೊಳವೆ ಬಾವಿ ಕೊರೆದಿಲ್ಲ.

ಶ್ರೀ ಸಿದ್ದರಾಮಯ್ಯ : ಏನಿಲ್ಲ ಬಿಡಿ, I am also representative of one constituency. In my constituency not a single bore-well is drilled.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ನಮ್ಮ ಇಡೀ ಜಿಲ್ಲೆಯಲ್ಲಿ ಇಲ್ಲ.

ಶ್ರೀ ರೇವು ನಾಯಕ್ ಬೆಳಮಗಿ : ನಮ್ಮ ಕಡೆ ಆಗಿವೆ. ಅದಕ್ಕೆ ಈಗ ಎಂಎಲ್‌ಎ ಛೇರ್ಮನ್ ಆಗಿದ್ದು, ಎಂಎಲ್‌ಎರವರೇ ಗಂಗಾಕಲ್ಯಾಣ ಯೋಜನೆಗೆ ಲಿಸ್ಟ್ ಕೊಡಬೇಕು, ಕೊಟ್ಟ ತಕ್ಷಣ order ಆಗುತ್ತವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇವರು ತಪ್ಪು ಅಂಕಿಅಂಶ ಕೊಡುತ್ತಿದ್ದಾರೆ. ಈ ವರ್ಷ ಒಂದೇ ಒಂದು ಬೋರ್‌ವೆಲ್ ಕೊರೆದಿಲ್ಲ.

ಅಧ್ಯಕ್ಷರು : ನೋಡಿ clarification ಗೆ ಸೀಮಿತವಾಗಿರಲಿ.

ಶ್ರೀ ಸಿದ್ದರಾಮಯ್ಯ : ಅವರು ಉತ್ತರ ಕೊಡಲಿಲ್ಲವೆಂದು clarification ಕೇಳುತ್ತಿರುವುದು. Minorities ಗೆ ಈ ವರ್ಷಕ್ಕೆ 167 ಕೋಟಿ ರೂಪಾಯಿ ಇಟ್ಟಿದ್ದೇವೆಂದು ಹೇಳಿದರು, ಆದರೆ ಮಾರ್ಚ್ ಒಳಗೆ 46 ಕೋಟಿ ರೂಪಾಯಿ ಬಿಡುಗಡೆ ಮಾಡಿರುವುದು.

Sri Qamarul Islam : only Rs. 40 crores were released by the end of February. They have declared 167 crores. When they are going to do it? This time they are declaring 210 crores.

ಡಾ: ಹೆಚ್.ಸಿ. ಮಹದೇವಪ್ಪ : ಎಲ್ಲಾ ಇಲಾಖೆಗಳ ಬಜೆಟ್ cut ಮಾಡಿಬಿಟ್ಟಿದ್ದಾರೆ.

ಶ್ರೀ ಖಮರುಲ್ ಇಸ್ಲಾಂ : ಸುಮ್ಮನೆ ಜನರಿಗೆ ತೋರಿಸುವುದಕ್ಕೆ ಕೊಡುವುದು, ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ spend ಮಾಡುತ್ತಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : 2009–10ನೇ ಸಾಲಿನಲ್ಲಿ ಒಂದು ಬೋರ್ ಕೊರೆಸಿಲ್ಲ ಎಂದು ಹೇಳಿದಿರಿ. ನಾನು ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಈಗ 20% ಮಾಡಬೇಕೆಂದು ಕೊಟ್ಟಿದ್ದಾರೆ. "2009–10 ಸಾಲಿನಲ್ಲಿ ಶೇಕಡ 20 ರಷ್ಟು ಕೊಳವೆ ಬಾವಿಗಳನ್ನು ಕೊರೆಯುವುದನ್ನು ಮುಂದುವರೆಸಲು ಉಲ್ಲೇಖಿತ ಕಡತದಲ್ಲಿ ಆದೇಶವಿರುವುದರಿಂದ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ನೀರಿಲ್ಲದಿದ್ದರೆ ಹಣವಿಲ್ಲವೆಂಬ ನಿಬಂಧನೆ ಯೊಂದಿಗೆ ಬೆಳಗಾಂ ಜಿಲ್ಲೆಯಲ್ಲಿ 30 ಕೊಳವೆ ಬಾವಿಗಳನ್ನು ಕೊರೆಯಲು ಈ ಕೆಳಕಂಡ ಷರತ್ತುಗಳನ್ನು ನೀಡಲಾಗಿದೆ" ಎಂದು ಈಗ ಕೊಟ್ಟಿದ್ದಾರೆ. ಶೂನ್ಯವೇಳೆಯಲ್ಲಿ 2009–10 ಸಾಲಿಗೆ ಎಂದು ಕೊಟ್ಟಿರುವ ಆದೇಶ ಇಲ್ಲಿಯೇ ಇದೆ.

ಶ್ರೀ ಸಿದ್ದರಾಮಯ್ಯ : ಅವರು ಕೊಟ್ಟಿಲ್ಲ, ಅದನ್ನು ಅಧಿಕಾರಿಗಳು ಬರೆದು ಕೊಟ್ಟುಬಿಟ್ಟಿದ್ದಾರೆ. ಇವತ್ತು ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಕೇಂದ್ರ ಸರ್ಕಾರದವರು ಅವರ ಬಜೆಟ್‌ನಲ್ಲಿ Scheduled Bank ಗಳು prompt ಆಗಿ payment ಮಾಡುವಂತಹ ರೈತರಿಗೆ 7% ನಿಂದ 5% ಗೆ rate of interest reduce ಮಾಡಿದ್ದಾರೆ. ನೀವು ರೈತರಿಗೆ 2009–10ರಲ್ಲಿ 3% ನಲ್ಲಿ ಸಾಲ ಕೊಡುತ್ತಿದ್ದೀರಿ. ನಿಮಗೆ ಅಲ್ಲಿ 2% burden ಕಡಿಮೆಯಾಗುವುದರಿಂದ, you please reduce your rate of interest from 3% to 1%, that is my request. ನೀವು ಉತ್ತರ ಕೊಡುವಾಗ ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದ್ದೇನೆ, ರೈತರ ಮಗ ಎಂದು ನಾಲ್ಕು ಬಾರಿ ಹೇಳಿದಿರಿ. ಆದರೆ ಅದಕ್ಕೆ ಉತ್ತರ ಕೊಡಲಿಲ್ಲ. That is the major request. ನಿಮಗೆ ಅದರಿಂದ ಹೆಚ್ಚಿಗೆ burden ಆಗುವುದಿಲ್ಲ. The same burden will continue, but farmers are going to be benefited by the decision of the Government of India. ಆದ್ದರಿಂದ ನೀವು ಬೆಳೆ ಸಾಲ ತೆಗೆದುಕೊಂಡು prompt payment ಮಾಡಿರುವವರಿಗೆ ನೀವು ಮಾಡಬೇಕು. 3% ನಂದ 1% ರವರೆಗೆ ಮಾಡಿದರೆ, the same burden will be continued, there will be no additional burden on Government of Karnataka. ನೀವು 14 ಜಿಲ್ಲೆಗಳಲ್ಲಿ unprecedented flood, ಶತಮಾನದಲ್ಲಿ ಆಗದಿರುವತಂಹ flood ಆಗಿದೆಯೆಂದು ಹೇಳುತ್ತಿದ್ದೀರಿ. ಆ ಕಾರಣಕೋಸ್ಕರ ನೀವು ಆ ಭಾಗದಲ್ಲಿರುವಂಥ ರೈತರ ಬೆಳೆ ಸಾಲವನ್ನು ಮನ್ನಾ ಮಾಡುವಂಥ ಕೆಲಸವನ್ನು ದಯವಿಟ್ಟು ಮಾಡಬೇಕು. ಅವರ ಬಡ್ಡಿ ಮನ್ನಾ ಮಾಡುವಂಥದ್ದು, ಸಾಲವನ್ನು ಮನ್ನಾ ಮಾಡುವಂಥದ್ದನ್ನು ಮಾಡಿದರೆ ಬಹಳ ಒಳ್ಳೆಯದೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಏಕೆಂದರೆ ನೀವು ಪ್ರವಾಹದಿಂದ ಹದಿನೆಂಟು ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳು ನಷ್ಟವಾಗಿದೆಯೆಂದು ಹೇಳಿದರೂ ಕೂಡ, ನೀವು ಪ್ರವಾಹ ಪರಿಹಾರಗಳಿಗೋಸ್ಕರ ಬೀದಿ ಬೀದಿಗಳಿಗೆ ಹೋಗಿ ಭಿಕ್ಷೆ ಬೇಡಿರುವುದು ಬೇರೆ. ನಾವು ಅದನ್ನು appreciate ಮಾಡೋಣ, ನೀವು ಬೀದಿ ಬೀದಿಗೆ ಹೋದಿರಿ, ಭಿಕ್ಷೆ ಬೇಡಿದ್ದೀರಿ, ಜನಗಳ ಹತ್ತಿರ ವಸೂಲು ಮಾಡಿದ್ದೀರಿ, ಮಠಗಳ ಸ್ವಾಮಿಜಿಗಳ ಹತ್ತಿರ ಹೋಗಿದ್ದೀರಿ, ಅದಕ್ಕೆಲ್ಲಾ ತಾರಿಫ್ ಮಾಡೋಣ. ಆದರೆ ನಿಮ್ಮ

ಖಜಾನೆಯಿಂದ ಅವರಿಗೆ ಒಂದು ರೂಪಾಯಿಯನ್ನು ಕೊಟ್ಟಿಲ್ಲ. So far whatever you have released, ತಾವು 1,778 ಕೋಟಿ ರೂಪಾಯಿಗಳನ್ನು ಏನು release ಮಾಡಿದ್ದೀರಿ, ಕೇಂದ್ರ ಸರ್ಕಾರದಿಂದ 1,733 ಕೋಟಿ ರೂಪಾಯಿಗಳು ಬಂದಿದೆ. ನಿಮಗೆ ಜನರಿಂದ ವಂತಿಗೆ 700 ರಿಂದ 800 ಕೋಟಿ ರೂಪಾಯಿಗಳು ಬಂದಿದೆ. ನೀವು ಪರಿಹಾರಕ್ಕೋಸ್ಕರ ನಿಮ್ಮ ಖಜಾನೆಯಿಂದ ಒಂದು ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ. ನೀವು ಒಂದು ordinance ಮಾಡಿಕೊಂಡು ಏಳೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು consolidated fund ನಿಂದ ಖರ್ಚು ಮಾಡುವುದಕ್ಕೆ ಅವಕಾಶಬೇಕೆಂದು ಮಾಡಿಕೊಂಡಿದ್ದರೂ ಕೂಡ ನಿಮ್ಮ ಖಜಾನೆಯಿಂದ ಏನು ದುಡ್ಡನ್ನು ಬಿಡುಗಡೆ ಮಾಡಿಲ್ಲ. ಕೇಂದ್ರ ಸರ್ಕಾರದಿಂದ ಬಂದ ಹಣವನ್ನು ಖರ್ಚು ಮಾಡಿದ್ದೀರಿ. ಆದ್ದರಿಂದ ನೀವು ಬಡ್ಡಿ ಮನ್ನಾ ಮಾಡಿದರೂ ಕೂಡ, there will be no burden. 14 ಜಿಲ್ಲೆಗಳಲ್ಲಿ ಪ್ರವಾಹ ಬಂದಿತ್ತು, ಅದಕ್ಕೋಸ್ಕರ ರೈತರಿಗೆ ಸಹಾಯ ಮಾಡಿದ್ದೇವೆಂದು ಹೇಳಿ, you please take a decision. ರೈತರು, farmers are going to be benefited. ಏಕೆಂದರೆ ನಾವು ಆ calamity ನಿಯಮಾವಳಿಗಳ ಪ್ರಕಾರ ಅವರಿಗೆ ಸರಿಯಾಗಿ ಪರಿಹಾರವನ್ನು ಕೊಡುವುದಕ್ಕೆ ಆಗಿಲ್ಲ. ಇನ್ನು ಕುರಿಗಳು, ಮೇಕೆಗಳು, ಜಾನುವಾರುಗಳು, ಕೊಚ್ಚಿ ಹೋಗಿವೆ. ಅವುಗಳಿಗೆ ಸರಿಯಾಗಿ ಪರಿಹಾರ ಕೊಟ್ಟಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಬೆಳೆ ಪರಿಹಾರವನ್ನು ಕೊಡುವುದಕ್ಕೆ ಆಗಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಹಣವನ್ನು ಕೊಟ್ಟಿಲ್ಲ. ದಯಮಾಡಿ ಇವೆಲ್ಲಕ್ಕೂ ಪರಿಹಾರವನ್ನು ಕೊಟ್ಟಿಲ್ಲವೆಂದು ನಮಗೆ ಬಹಳ ಅಸಮಾಧಾನವಾಗಿದೆ. I am very very unhappy. ಕೊನೆಯದಾಗಿ ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾನ್ಯ ಯಡಿಯೂರಪ್ಪನವರು ಕಳೆದ ನಾಲ್ಕು ವರ್ಷಗಳಲ್ಲಿ 2005ರಲ್ಲಿ.. ..

ಅಧ್ಯಕ್ಷರು : ಇದು clarification ಆಗುವುದಿಲ್ಲ, ಮತ್ತೆ ಭಾಷಣವಾಗುತ್ತದೆ.

ಶ್ರೀ ಸಿದ್ದರಾಮಯ್ಯ : Clarification ಆಗುವುದಲ್ಲವೇ? ನಾನು ಹೇಳಿರುವುದಕ್ಕೆ ಅವರು ಉತ್ತರ ಹೇಳಬೇಕಲ್ಲಾ, Clarification ಎಂದರೆ,

whatever suggestions I have made, whatever criticism I have made, all those criticisms and suggestions have not been replied by the Hon'ble Chief Minister.

MR. SPEAKER : Whatever the Chief Minister has replied, ಅದರಲ್ಲಿ ಏನಾದರೂ ಇದ್ದರೆ ಕೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು Finance Minister ಆಗಿದ್ದಾಗ, ನಾನು ಇದಕ್ಕೆಲ್ಲಾ ಉತ್ತರವನ್ನು ಕೊಡುತ್ತಿದ್ದೆ. ನಾನು ಮೂರು ಗಂಟೆ, ನಾಲ್ಕು ಗಂಟೆಗಳ ಕಾಲ ಉತ್ತರವನ್ನು ಕೊಟ್ಟಿದ್ದೇನೆ. ಇವರು ಒಂದು ಗಂಟೆಗೆ ಉತ್ತರವನ್ನು ಮುಗಿಸಿ ಬಿಟ್ಟರು.

ಶ್ರೀ ಬಿ.ಎನ್.ಬಚ್ಚೇಗೌಡ : ಎರಡು ಗಂಟೆಗಳ ಕಾಲ ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಬಚ್ಚೇಗೌಡರೆ, ಎರಡು ಗಂಟೆಯೇ, ನಾನು ನಾಲ್ಕು ಗಂಟೆಗಳ ಕಾಲ ಉತ್ತರವನ್ನು ಕೊಟ್ಟಿದ್ದೇನೆ, ನಿಮಗೆ ಗೊತ್ತಿದೆಯಲ್ಲಾ, ಬೇರೆ ರಾಜ್ಯಗಳಿಗೆಲ್ಲಾ compare ಮಾಡಿದರೆ ತಾವು ತೆರಿಗೆಯನ್ನು ಬಹಳ ವಸೂಲು ಮಾಡಿ ಬಿಟ್ಟಿದ್ದೇವೆಂದು ಹೇಳುತ್ತೀರಿ. 2003–04ರಲ್ಲಿ Commercial Tax ನಲ್ಲಿ tax growth. 22.49%, 2004–05 ರಲ್ಲಿ 30.5%, 2005–06ರಲ್ಲಿ 14.19%, 2006–07ರಲ್ಲಿ 19.42%, 2007–08ರಲ್ಲಿ 13.04%, 2008–09ರಲ್ಲಿ 7.3%, 2009–10ರಲ್ಲಿ 5% ಇದೆ. ಇದನ್ನು ಬಹಳ ಚೆನ್ನಾಗಿದೆಯೆಂದು ಹೇಳಬೇಕಾ, 2004–05ರಲ್ಲಿ 30.05% ಇದ್ದದ್ದು growth 5% ಗೆ ಇಳಿದಿದೆ. ಇದನ್ನು ನೀವು ಬೇರೆ ರಾಜ್ಯಗಳಿಗೆ compare ಮಾಡಿ ಅಲ್ಲಿ ಚೆನ್ನಾಗಿದೆ, ಇಲ್ಲಿ ಚೆನ್ನಾಗಿದೆ, ನಾವು ಚೆನ್ನಾಗಿದೆಯೆಂದು ಹೇಳುವಂಥದ್ದು. ಈಗ ಬಿಹಾರ್‌ನಲ್ಲಿ ಜಂಗಲ್ ರಾಜ್ ಎಂದು ಇದೆ, ನೀವು ಬಿಹಾರ್‌ಗೆ ಹೋಲಿಕೆ ಮಾಡಿಕೊಳ್ಳುತ್ತೀರಾ? ಆದುದರಿಂದ ರಾಜ್ಯದಲ್ಲಿ ತೆರಿಗೆ ವಸೂಲು ಮಾಡುವುದರಲ್ಲಿ both tax revenue and non-tax revenue and also fiscal management revenue surplus ಅನ್ನು ಸರಿಯಾದ ರೀತಿ ನೋಡಿಕೊಳ್ಳುವುದರಲ್ಲಿ, fiscal deficit ಅನ್ನು ಕಡಿಮೆ ಮಾಡುವುದರಲ್ಲಿ ಈ ವರ್ಷಕ್ಕೆ 3.77 ಎಂದು ನೀವೇ admittedly ಹೇಳುತ್ತೀರಿ. ನಮಗೆ 4%ಗೆ ಅವಕಾಶವನ್ನು ಕೊಟ್ಟು ಬಿಟ್ಟಿದ್ದಾರೆ, ಅದಕ್ಕೋಸ್ಕರ 3,4 ಆಗಬಹುದು, ಮುಂದಿನ ವರ್ಷಕ್ಕೆ ಇದನ್ನು 2.96ಗೆ

ಇಳಿಸುತ್ತೇವೆಂದು ಹೇಳುತ್ತೀರಿ. Can we believe it? ಮಾನ್ಯ ಶ್ರೀನಿವಾಸ ಮೂರ್ತಿಯವರು retire ಆಗುತ್ತಿದ್ದಾರೆ. ಅವರು ಇರುವುದಿಲ್ಲ, ಈಗ ಅವರು ಹೇಳಿಬಿಟ್ಟಿದ್ದಾರೆ, ಅವರು ಹೋಗುತ್ತಾರೆ. ಇಲ್ಲಿ ಇರುವ ವಾಸ್ತವ ಪರಿಸ್ಥಿತಿಗೂ ಇವರು ಹೇಳುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಆದುದರಿಂದ ಎಲ್ಲಿ core sector ಗಳು ಇವೆ, growthoriented sector ಗಳು ಇವೆ, this budget is not growth oriented, not pro-farmers, not pro-poor. ಹಾಗಾಗಿ ಇದು ರೈತರ ವಿರೋಧಿ, ಇವರು ಈಗಲೂ ಕೂಡ ರೈತರ, ಜನರ ವಿಶ್ವಾಸವನ್ನು ಉಳಿಸಿಕೊಳ್ಳಬೇಕೆಂದರೆ 3% ನಿಂದ 1% Scheduled Bank ಬಡ್ಡಿದರವನ್ನು ಇಳಿಸಿ, ಅವರ ಸಾಲ ಮನ್ನಾ ಮಾಡುವಂಥ ಕೆಲಸವನ್ನು ಮಾಡಿ, at least ನಿಮಗೆ ಎಲ್ಲೋ ಹೋಗಿರುವ ಮಾನ ಎಲ್ಲೋ ಬಂತು ಎನ್ನುವ ರೀತಿಯಲ್ಲಿ ಆಗುತ್ತದೆ, ಮತ್ತೆ ತೊಗರಿ ಬೆಳೆಗೆ ಬೆಂಬಲ ಬೆಲೆ, ಅಡಿಕೆಗೆ ಬೆಂಬಲ ಬೆಲೆ, ಇವೆಲ್ಲವೂ ಇದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಮುಳುಗಿ ಹೋಯಿತೆಂದು ಹೇಳುತ್ತಿಲ್ಲ. ನೀವು debt trap ಕಡೆಗೆ ಹೋಗುತ್ತಿದ್ದೀರೆಂದು ಹೇಳಿದ್ದೇನೆಯೇ ಹೊರತು, debt service ಜಾಸ್ತಿಯಾಗಿ ದೆಯೆಂದು ಹೊರಗಡೆ ಹೇಳಿದ್ದೇನೆಯೇ ಹೊರತು, ಆರ್ಥಿಕ ಪರಿಸ್ಥಿತಿ 2004–2005–2006 ರಲ್ಲಿ ಏನು ಸುಧಾರಣೆ ಆಗಿತ್ತು, ಅದು ಮತ್ತೆ deteriorate ಆಗುತ್ತಿದೆ ಎಂದು ಹೇಳಿದ್ದೇನೆಯೇ ಹೊರತು, I stand by my statement. ಆದ್ದರಿಂದ ಮಾನ್ಯ ಯಡಿಯೂರಪ್ಪನವರು ಮಂಡಿಸಿರುವಂಥ ಈ ಆಯವ್ಯಯದ ಮೇಲೆ ನೀಡಿದ ಉತ್ತರದಿಂದ ಯಾರಿಗೂ ಸಮಾಧಾನವಾದ ಹಾಗೆ ಇಲ್ಲ. ನಮ್ಮ ಸಲಹೆಗಳಿಗೆ, ಸೂಚನೆಗಳಿಗೆ, ನಮ್ಮ ಟೀಕೆಗಳಿಗೆ ಒಂದಕ್ಕೂ ಕೂಡ ಉತ್ತರವನ್ನು ಕೊಟ್ಟಿಲ್ಲವೆಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಈಗಾಗಲೇ ಮಾನ್ಯ ಯಡಿಯೂರಪ್ಪನವರಿಗೆ 12 ಇಲಾಖೆಗಳು ಇವೆ. ಇವುಗಳನ್ನು ಎಲ್ಲಿ ನೋಡುವುದಕ್ಕೆ ಆಗುತ್ತದೆ? ಮಾನ್ಯ ಯಡಿಯೂರಪ್ಪನವರೆ, ನೀವು you are a verey very busn man. ಮತ್ತೆ ತೆರಿಗೆ ಸಂಪನ್ಮೂಲ ಕ್ರೋಢೀಕರಣ ಮಾಡುವುದರಲ್ಲಿ ಕಬ್ಬಿಣದ ಅದಿರುಗಳನ್ನು ತೆಗೆದುಕೊಂಡು ಹೋಗುವ ಲಾರಿಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಹಾಕುತ್ತೇವೆಂದು ಈ ಸಾರಿ ಬಜೆಟ್‌ನಲ್ಲೂ ಹೇಳಿದ್ದೀರಿ. ಅದು 16 ಮೆಟ್ರಿಕ್ ಟನ್ ತೆಗೆದುಕೊಂಡು ಹೋಗುವವರಿಗೆ ಮಾತ್ರವೆಂದು ಹೇಳಿದ್ದೀರಿ, ಅದಕ್ಕಿಂತ ಕಡಿಮೆ ತೆಗೆದುಕೊಂಡು ಹೋದರೆ ಅದಕ್ಕೆ ಹಾಕುವುದಿಲ್ಲವೇ? ಅದರಿಂದ ರಸ್ತೆ

ಹಾಳಾಗುವುದಿಲ್ಲವೇ? ಅದು P.W.D. ಇಲಾಖೆಯಿಂದ 1,000 ರೂಪಾಯಿ ಗಳೆಂದು ಒಂದು order issue ಆಯಿತು, ಅದನ್ನು ಎಲ್ಲೋ ಮೂಲೆಗೆ ಎಸೆದು ಬಿಟ್ಟಿದ್ದೀರಿ. ಹಾಗಾಗಿ ನೀವು ಸಂಪನ್ಮೂಲವನ್ನು ಕ್ರೋಢೀಕರಣ ಮಾಡಲಿಲ್ಲ. ಮತ್ತೆ ಖರ್ಚು ಅನ್ನು ಕೂಡ ಅಭಿವೃದ್ಧಿ ಪರವಾದಂಥ ಇಲಾಖೆಗಳಿಗೆ, ಈ ರಾಜ್ಯದ ಅಭಿವೃದ್ಧಿಗೆ ಬೇಕಾಗಿರುವಂಥ core subject ಗಳಲ್ಲೂ ಕೂಡ ವಿದ್ಯುತ್ ಉತ್ಪಾದನೆ, ಆಹಾರ ಉತ್ಪಾದನೆ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಇವೆಲ್ಲಕ್ಕೂಕೂಡ ಕಡಿಮೆ ಮಾಡಿದ್ದೀರಿ. ಹಾಗಾಗಿ ಇದು growth oriented ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ರೇವಣ್ಣನವರೆ, ನೈಸ್ ವಿಚಾರವನ್ನು ನಾಳೆ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗ ನೈಸ್ ಬಗ್ಗೆ ಹೇಳುವುದಿಲ್ಲ, ಇವತ್ತು ನೈಸ್ ಬೇಡ, ಏಕೆಂದರೆ ನಿಮಗೆ ನೈಸಾಗಿ ಹೇಳಬೇಕಾಗುತ್ತದೆ, ಅದನ್ನು ನಾಳೆ ನೈಸಾಗಿ ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ಕೆಲವು ವಿಷಯಗಳನ್ನು ಹೇಳಿದರು. ಅದು ಕೃಷಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ 90% ಎಂದು ಎಲ್ಲಾ ಹೇಳಿದರು. ಇದನ್ನು ನಾನು ಹೇಳುವುದಲ್ಲ, ಅವರ Action Taken Report ನಲ್ಲಿ last year 2009-10 ರಲ್ಲಿ ಹಣವನ್ನು ಎಷ್ಟು ಇಟ್ಟಿದ್ದರು? ಇಲಾಖಾವಾರು ಎಷ್ಟು ಹಣ ಬಿಡುಗಡೆ ಮಾಡಿದ್ದಾರೆಂಬುದನ್ನು ಹೇಳಲಿಲ್ಲ. ಉದಾಹರಣೆಗೆ ಹೇಳುವುದಾದರೆ ಕೃಷಿ ಇಲಾಕೆಯಲ್ಲಿ 3% ನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 250 ಕೋಟಿ ರೂಪಾಯಿಗಳ ಸಾಲವನ್ನು ಕೊಡುವುದಕ್ಕೆ ಮಾಡಿದ್ದೇವೆಂದು ಹೇಳಿದ ಒಂದು ಉದಾಹರಣೆಯನ್ನು ನಿಮಗೆ ಕೊಡುತ್ತೇನೆ. ಆ 250 ಕೋಟಿ ರೂಪಾಯಿಗಳಲ್ಲಿ ನೀವು ಎಷ್ಟು ಜನರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲವನ್ನು ಕೊಟ್ಟಿದ್ದೀರಿ? ಈ 250 ಕೋಟಿ ರೂಪಾಯಿಗಳಲ್ಲಿ ಹಣ ಎಷ್ಟು ವಿನಿಯೋಗವಾಗಿದೆ? ಅದರ ಬಗ್ಗೆ ತಾವೇ Action Taken Report ನಲ್ಲಿ ಹೇಳಿದ್ದೀರಿ, ಏನೂ ಪ್ರಗತಿ ಆಗಿಲ್ಲ. ತಾವು ಈಗ ಇಡೀ ಹಿಂದೂ ಸ್ಥಾನದಲ್ಲಿ ಪ್ರಥಮವಾಗಿ 3% ನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹಣವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇಲ್ಲಿ ತಮ್ಮ Action Taken Report ನಲ್ಲಿ ತೆಗೆದುಕೊಂಡಿರುವ ಕ್ರಮದಲ್ಲಿ 2009–10ರಲ್ಲಿ ಪ್ರಗತಿ ಏನೂ ಸಾಧಿಸಿಲ್ಲವೆಂದು ತಮ್ಮ report

ನಲ್ಲೇ ಬಂದಿದೆ. ಇದು ಅಲ್ಲದೇ ಇವತ್ತು ಏನು ಆಗಿದೆಯೆಂದರೆ, ತೋಟಗಾರಿಕೆ ಇರಬಹುದು ಅಥವಾ ಸಾವಯವ ಕೃಷಿಯ ಬಗ್ಗೆ ತಾವು ನೂರು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ಈ ನೂರು ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣವನ್ನು release ಮಾಡಿದ್ದೀರಿ? ಬರೀ 8 ಕೋಟಿ ರೂಪಾಯಿಗಳು release ಆಗಿರುವುದು. ನೀವು ಸುಮ್ಮನೆ ಸಾವಿರಾರು ಕೋಟಿ ರೂಪಾಯಿಗಳೆಂದು ಹೇಳುತ್ತಿದ್ದೀರಿ, ನೀವು P.W.D. ಯಲ್ಲಿ 90% ಪ್ರಗತಿ ಇದೆಯೆಂದು ಹೇಳುತ್ತಾರೆ. ಮಾನ್ಯ ಉದಾಸಿಯವರು ಸದನದಲ್ಲೇ ಇದ್ದಾರೆ, ಎಷ್ಟು ಬಿಲ್‌ಗಳು ಇವೆಯೆಂದು ಅವರನ್ನು ಕೇಳಿ. ಇನ್ನು 600 ಕೋಟಿ, 700 ಕೋಟಿ ರೂಪಾಯಿಗಳ ಬಿಲ್‌ಗಳು pending ಇರಬಹುದು.

(5-20 PM)

ಈಗ P.W.D. ಯಲ್ಲಿ 1,096 ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇದೆ. 90% ಪ್ರಗತಿಯಾಗಿದೆ ಎಂದು ಹೇಳುತ್ತಾರೆ. ಯಾವ ರೀತಿ 90% ಪ್ರಗತಿಯಾಗಿದೆ ಎನ್ನುವುದನ್ನು ದಯಮಾಡಿ ತಿಳಿಸಬೇಕಾಗುತ್ತದೆ. ಚಾಮರಾಜನಗರಕ್ಕೆ ತೋಟಗಾರಿಕೆಗೆ 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದಿರಿ. ಅದರಲ್ಲಿ 10 ರೂಪಾಯಿ ಆದರೂ ಬಿಡುಗಡೆಯಾಗಿದೆಯೇ? ಅದೇ ರೀತಿ, ಹಲವಾರು ಮೈನಾರಿಟಿ ಸಂಸ್ಥೆಗಳಿಗೆ ಹಣವನ್ನು ಇಟ್ಟಿದ್ದಿರಿ. ಕೆಲವು ಅಂಕಿಅಂಶಗಳನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಅಲ್ಪಸಂಖ್ಯಾತ ಸಂಸ್ಥೆಗಳಿಗೆ 167 ಕೋಟಿ ರೂಪಾಯಿ ಹಣ ಇಟ್ಟಿದ್ದಿರಿ. ಆದರೆ ಹಣ ಕೊಟ್ಟಿರುವುದು 46 ಕೋಟಿ. ಬಾಕಿ 125 ಕೋಟಿ ರೂಪಾಯಿ ಏನಾಗಿದೆ? ಅದನ್ನು ಇನ್ನೊಂದೆರಡು ತಿಂಗಳಲ್ಲಿ ಖರ್ಚು ಮಾಡುವಿರಾ? ಅದೇ ರೀತಿ, ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿಗೆ 5 ಕೋಟಿ ರೂಪಾಯಿಗಳನ್ನು ಇಟ್ಟಿರುವುದಾಗಿ ಹೇಳಿದ್ದಿರಿ, ಅದರಲ್ಲಿ ಬರೀ 2 ಕೋಟಿ ಕೊಟ್ಟಿದ್ದೀರಿ. ಅದೇ ರೀತಿ, ಕ್ರೈಸ್ತರಿಗೆ 10 ಕೋಟಿ ಎಂದು ಹೇಳಿದ್ದಿರಿ, ಇವತ್ತಿನವರೆಗೆ 2 ರೂಪಾಯಿಯನ್ನೂ ಕೊಟ್ಟಿಲ್ಲ. ಕೆಲವು ಇಲಾಖೆಗಳಲ್ಲಿ ಇಟ್ಟಿರುವ ಹಣದಲ್ಲಿ ಇವತ್ತಿನವರೆಗೂ 10 ರೂಪಾಯಿಯನ್ನೂ ಕೊಟ್ಟಿಲ್ಲ ಎಂದು ಹೇಳಬೇಕಾ ಗುತ್ತದೆ. 2009–10ರ ಬಜೆಟ್‌ನಲ್ಲಿ ಏನಿತ್ತು, ಅದರಲ್ಲಿ 38% ಮಾತ್ರ ಹಣ ಕೊಟ್ಟಿದ್ದೀರಿ. ಉದಾಹರಣೆಗೆ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಜಿಲ್ಲಾ ಕೇಂದ್ರಗಳ ಅಭಿವೃದ್ಧಿ, ಇದರಲ್ಲಿ ಕಾಗಿನೆಲೆಗೆ 10 ಕೋಟಿ ಇಟ್ಟಿದ್ದಿರಿ, ಅದರಲ್ಲಿ 5 ಕೋಟಿ ಕೊಟ್ಟಿದ್ದೀರಿ. ಕಾಗಿನೆಲೆ ಸಂಸ್ಥೆಗೆ ಈಶ್ವರಪ್ಪನವರು

ಅಧ್ಯಕ್ಷರಾಗಿರುವುದಕ್ಕಾದರೂ ನೀವು 10 ಕೋಟಿ ಬಿಡುಗಡೆ ಮಾಡಲು ತೊಂದರೆ ಏನಿತ್ತು. 10 ಕೋಟಿ ಕೊಡುತ್ತೇವೆ ಎಂದು ಹೆಸರಿಡುವುದು, ಬರೀ 5 ಕೋಟಿ ಕೊಡುವುದು ಆಗಿದೆ. ಅದೇ ರೀತಿ, ಮೇಲುಕೋಟೆಗೂ ಆಗಿದೆ. ಕೆಲವು ಮಠಗಳಿಗೆ 100% ಕೊಟ್ಟಿದ್ದಾರೆ. ಆದರೆ ಬಿಜಾಪುರದಲ್ಲಿರುವ ಖಾಜಾ ಅಮ್ಮೃದ್ ದರ್ಗಾ ಎನ್ನುವುದಕ್ಕೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಅದೇ ರೀತಿ, ಗದಗ್ ಜಿಲ್ಲೆಯ ಶಿರಹಟ್ಟಿಯ ಮಠ, ಇದಕ್ಕೂ ಪ್ರಸ್ತಾವನೆ ಪರಿಶೀಲನೆಯಿಲ್ಲಿದೆ ಎಂದು ಹೇಳಿದ್ದಾರೆ. ಅಲ್ಪಸಂಖ್ಯಾತರಿಗೆ ಸೇರಿದುದಕ್ಕೆಲ್ಲಾ ಪರಿಶೀಲನೆಯಲ್ಲಿದೆ, ಬಾಕಿ ಮಠಗಳಿಗೆಲ್ಲಾ ಅವರು ಕೇಳದೇ ಇದ್ದರೂ ದುಡ್ಡು ಬಿಡುಗಡೆಯಾಗಿದೆ. ಮೈನಾರಿಟೀಸ್ ದರ್ಗಾಗಳಿಗೆ ಎಂದು 10 ಕೋಟಿ ರೂಪಾಯಿ ಇಟ್ಟಿರಿ, ಅವುಗಳಿಗೆ 5 ರೂಪಾಯಿ ಆದರೂ ಬಿಡುಗಡೆಯಾಗಿದೆಯೇ? ಅದು ಏನಾಗಿದೆ ಎಂದರೆ ಬರೀ ಪುಸ್ತಕದಲ್ಲಿ ಇದೆ, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಇದೆ.

Sri Qamarul Islam : One more important thing sir, Backward classes and schedule caste all MLAs are the Chairman instead of the CEO. But the Hon'ble Minister for the Minority has not issued the G.O. even though there is cabinet decision to that effect whether all the other MLAs are not interested for the minority. If they are all interested, but they cannot select. Only the Hon'ble Minister has to select. Why that discrimination? Why that G.O. has not been issued. Backward classes will issue, that MLAs will select. Some MLAs will select for minorities also that is a great discrimination on the part of the Government. Whether there is an indirect instruction to the Hon'ble Minister for the Minority to not to issue the G.O. When the cabinet decision is there? I want to get the clarification from this House.

ಶ್ರೀ ಹೆಚ್.ಡಿ.ರೇವಣ್ಣ : ಸವದತ್ತಿಯ ರೇಣುಕ ಯಲ್ಲಮ್ಮ ದೇವಸ್ಥಾನಕ್ಕೆ 50 ಕೋಟಿ ಇಟ್ಟರು, 5 ರೂಪಾಯಿಯನ್ನೂ ಕೊಟ್ಟಿಲ್ಲ.

ಅಧ್ಯಕ್ಷರು : ನೀವು clarification ಗೆ ಸೀಮಿತವಾಗಿ ಹೇಳಿ. ಬೆಳಿಗ್ಗೆ ಹೇಳಿದ್ದನ್ನೇ ಮತ್ತೆ ನೀವು ಪ್ರಸ್ತಾಪ ಮಾಡುತ್ತಿದ್ದೀರಿ. ಇದು clarification ಆಗುವುದಿಲ್ಲ. ಮತ್ತೆ ಅದೇ repetition ಬೇಡ.

ಶ್ರೀ ಹೆಚ್.ಡಿ.ರೇವಣ್ಣ : ಕಳೆದ ಸಾರಿ ಬಜೆಟ್‌ಗೆ ಅವರು ಉತ್ತರ ಕೊಡುವಂಥ ಸಂದರ್ಭದಲ್ಲಿ, ಹಣವನ್ನು ಪ್ರತಿ ಮೂರು ತಿಂಗಳಿಗೊಂದು ಸಾರಿ, ಒಟ್ಟು ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು. ನಾಲ್ಕು ಕಂತು ಇರಲಿ, 12 ತಿಂಗಳಾದರೂ ಇನ್ನೂ 25% ಬಿಡುಗಡೆಯಾಗಿಲ್ಲ. 2009–10ರಲ್ಲಿ P.W.D. ಯಲ್ಲಿ 90% ಪ್ರಗತಿಯಾಗಿದೆ ಎಂದು ಹೇಳುತ್ತಾರಲ್ಲ, Appendix-E ಯಾವಾಗ approve ಆಯಿತು ಎಂದು ಕೇಳಿ. ಅದು approve ಆಗಿ ಈಗ ಒಂದು ವಾರವಾಯಿತು. Appendix-E ನಲ್ಲಿರುವಂತೆ ಒಂದು ವಾರದಲ್ಲಿ ನೀವು 2,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಿರಾ? Appendix- E ಮಾಡುವುದಕ್ಕೇ 9 ತಿಂಗಳಾಯಿತು. ಇನ್ನು ನೀವು ಹಣವನ್ನು ಖರ್ಚು ಮಾಡುವುದು ಯಾವಾಗ ಎಂದು ಹೇಳಿ. 2004–05 ರಲ್ಲಿ 30% ರಷ್ಟಿದ್ದ ತೆರಿಗೆ ಹಣ ಸಂಗ್ರಹ ಈಗ 5% ಗೆ ಬಂದಿದೆ ಎಂದು ಸಿದ್ದರಾಮಯ್ಯನವರು ಹೇಳಿದರು. ಮುಖ್ಯಮಂತ್ರಿಗಳನ್ನು ನಾವು ದೂಷಣೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರಿಗೆ 17 ಖಾತೆಗಳಿವೆ. 17 ಖಾತೆಗಳಿರುವಾಗ ಅವರು ತೆರಿಗೆಯನ್ನೂ ನೋಡುವುದಕ್ಕಾಗುವುದಿಲ್ಲ, ಹಣಕಾಸಿನ ವಿಚಾರವನ್ನೂ ನೋಡುವುದಕ್ಕಾಗುವುದಿಲ್ಲ. ನೈಸ್ ಬಗ್ಗೆ ಹೇಳಿದರು. ಅದನ್ನು ನಾಳೆ ಚರ್ಚೆ ಮಾಡೋಣ, ಈಗ ನೈಸ್ ವಿಷಯ ಬೇಡ ಎಂದು ಹೇಳಿದರು. 20,000 ಎಕರೆ ಜಮೀನು ಕೊಡುತ್ತೇನೆ ಎಂದು ಹೇಳಿದರು. ರಸ್ತೆ ಮಾಡುವುದಕ್ಕೆ ನಾವು ವಿರೋಧ ಮಾಡುತ್ತಿಲ್ಲ. ಆದರೆ 1998 ರಲ್ಲಿ 70 ರೂಪಾಯಿ ಇದ್ದಂಥ ಕಂಪನಿ ಇವತ್ತು ರಾಜ್ಯದ 30,000 ಕೋಟಿ ರೂಪಾಯಿ ಹಣವನ್ನು ಲೂಟಿ ಮಾಡುವಂಥ ಒಂದು ಕಾರ್ಯಕ್ರಮ ಸಿದ್ಧವಾಗಿದೆ. ಅದಕ್ಕಾಗಿ, ಯಡಿಯೂರಪ್ಪನವರಿಗೆ ಕೆಟ್ಟ ಹೆಸರು ಬರಬಾರದು ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನಾವು ತಪ್ಪು ಮಾಡಿದ್ದರೆ ಸಿ.ಓ.ಡಿ.ಗೆ ಹಾಕಿ, ಸಿ.ಬಿ.ಐ.ಗೆ ಹಾಕಿ. ನಿಮಗೆ ನಾಚಿಕೆಯಾಗುವುದಿಲ್ಲವೇ? ಏಕೆ ನೀವು ಹೆದರುತ್ತೀರಿ? ದೇವೇಗೌಡರು ಏನಾದರೂ ತಪ್ಪು ಮಾಡಿದರೆ ನೀವು ಏಕೆ ಹೆದರಬೇಕಾಗುತ್ತದೆ?

ಅಧ್ಯಕ್ಷರು : ಮತ್ತೆ ಅದರ ಬಗ್ಗೆ ಈಗ ಏಕೆ ಪ್ರಸ್ತಾಪ ಮಾಡುತ್ತೀರಿ. ಇದು clarification ಆಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಇವರು ಏನೂ ಮಾಡಿಲ್ಲವೇ? ಇವರು ಪ್ರಾಮಾಣಿಕರು. ಏಕೆ ಹೆದರಬೇಕಾಗುತ್ತದೆ? ಹೆದರಿಕೆ ಇಲ್ಲದವರು ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಲಿ.

(ಗೊಂದಲ)

ಅಧ್ಯಕ್ಷರು : ಇದು Clarification ಹೇಗೆ ಆಗುತ್ತದೆ.?

ಹೆಚ್.ಡಿ.ರೇವಣ್ಣ : 2009–10ರ ವರ್ಷ ಮುಗಿಯಲು ಇನ್ನೂ 18 ದಿವಸವಿದೆ. ಕಳೆದ ಸಾರಿ ಏನು ಹಣ ಇಟ್ಟಿದ್ದರು, ಅವರೇ Action Taken Report ನಲ್ಲಿ ಹೇಳಿರುವಂತೆ ಅದರಲ್ಲಿ 38% ಮಾತ್ರ ಬಿಡುಗಡೆಯಾಗಿದೆ. ಬಾಕಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ನಾನು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ, ನಮ್ಮ ಬೆಳಗಾವಿ ಜಿಲ್ಲೆಯಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮನ ಹೆಸರಿನಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಕಳೆದ ವರ್ಷದ ಬಜೆಟ್‌ನಲ್ಲಿ ಪಂಡರಾಪುರದಲ್ಲಿ ಯಾತ್ರಿ ನಿವಾಸ್ ಕಟ್ಟಲಿಕ್ಕೆ ಮುಖ್ಯಮಂತ್ರಿಗಳು ಒಂದು ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದರು. ಈ ವರ್ಷ ಬಜೆಟ್‌ನಲ್ಲಿ ಅದಕ್ಕೆ ಏನೂ ಹಣ ಇಟ್ಟಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇವೆ, ಪಂಡರಾಪುರದ ಯಾತ್ರಿನಿವಾಸಕ್ಕೆ ಈ ವರ್ಷ ಕೂಡ ಹಣವನ್ನು ಒದಗಿಸಿ, ಅದನ್ನು ಕಟ್ಟಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ನಾವು ಬಜೆಟ್ ಮೇಲೆ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ. ನಾವು ಪ್ರಸ್ತಾಪ ಮಾಡಿದಂಥ ಅನೇಕ ವಿಷಯಗಳಿಗೆ ಉತ್ತರ ಬಂದಿಲ್ಲ ಎಂದು ತುಂಬ ವಿಷಾದದಿಂದ ಹೇಳಬೇಕಾಗಿದೆ. ಈಗಾಗಲೇ ಅವರು ಅನೇಕ ಇಲಾಖೆಗಳಿಗೆ ಹಣವನ್ನು ನಿಗದಿ ಮಾಡಿದ್ದಾರೆ. ಹಣವನ್ನು ನಿಗದಿ ಮಾಡುವುದೇ ದೊಡ್ಡ ಕೆಲಸ ಎಂದು ಮಾನ್ಯ ಮುಖ್ಯಮಂತ್ರಿಗಳು ಭಾವಿಸಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ, ಎಷ್ಟು ಖರ್ಚು ಮಾಡಿದ್ದೇವೆ ಎಂದು ಯಾವ ಇಲಾಖೆಯ

ಬಗ್ಗೆಯೂ ಹೇಳಿಲ್ಲ. ಅದರಲ್ಲೂ ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳಿಲ್ಲ. ಜನಸಾಮಾನ್ಯರು ಏನು ಭಾವಿಸುತ್ತಾರೆ ಎಂದರೆ, ಮಾಧ್ಯಮಗಳಲ್ಲಿ, ಟಿ.ವಿ.ಗಳಲ್ಲಿ ಬಂದಾಗ, ಸಾವಿರಾರು ಕೋಟಿ, ಲಕ್ಷಾಂತರ ಕೋಟಿ ಇಟ್ಟಿದ್ದೇವೆ ಎಂದು ಹೇಳಿದಾಗ ಅಷ್ಟನ್ನು ಕೊಡುತ್ತಾರೆ ಎಂದು ತಿಳಿದುಕೊಳ್ಳುತ್ತಾರೆ. ಆದರೆ ಅದು ಬಿಡುಗಡೆಯಾಗದಿದ್ದಾಗ, ಕಾರ್ಯಕ್ರಮ ಜಾರಿಗೆ ಬರದೇ ಇದ್ದಾಗ ಅದರ ಬಗ್ಗೆ ನಿರಾಶರಾಗುತ್ತಾರೆ. 2008–09ನೇ ಸಾಲಿನಲ್ಲಿ ಆನೆ ಹಾವಳಿಗೆ ಸಂಬಂಧಿಸಿದಂತೆ ಹೇಳಿ, ಆನೆಧಾಮಗಳನ್ನು ಸ್ಥಾಪಿಸುತ್ತೇವೆ, ಪಾರ್ಕ್ ಸ್ಥಾಪಿಸುತ್ತೇವೆ, ಶ್ರೀಲಂಕಾ ಮಾದರಿಯಲ್ಲಿ, ನಾವು ಆನೆಗಳನ್ನು ಸ್ಥಳಾಂತರಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಿರಿ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಅದೊಂದು ಜ್ವಲಂತ ಸಮಸ್ಯೆ. ಎಷ್ಟರ ಮಟ್ಟಿಗೆ ರೈತರ ಆಸ್ತಿಪಾಸ್ತಿ ನಷ್ಟವಾಗುತ್ತಿದೆ, ಜೀವಹಾನಿಗಳು ಆಗುತ್ತಿವೆ, ಆನೆಗಳು ಸಹ ಸಾವಿಗೀಡಾಗುತ್ತಿವೆ, ಇದರ ಬಗ್ಗೆ ತಾವು ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪ ಮಾಡಿಲ್ಲ, ಯಾವುದೇ ಚಕಾರವೆತ್ತಲಿಲ್ಲ. ಇನ್ನು coffee package ಬಗ್ಗೆ, ಕೇಂದ್ರ ಸರ್ಕಾರ ಕಾಫಿ ಬೆಳೆಗಾರರ ಬಗ್ಗೆ ನಿರ್ಲಕ್ಷ್ಯ ವಹಿಸಿದೆ. ರಾಜ್ಯ ಸರ್ಕಾರ ಕೂಡ ಇದರ ಬಗ್ಗೆ ಚಕಾರವೆತ್ತಲಿಲ್ಲ. ಅತಿವೃಷ್ಟಿ ಗೋಳಗಾಗಿ ತಮ್ಮ ಕ್ಷೇತ್ರದಲ್ಲಿರಬಹುದು, ನಮ್ಮ ಹಾಸನ ಜಿಲ್ಲೆಯಲ್ಲಿರಬಹುದು, ಕೊಡಗು, ಚಿಕ್ಕಮಗಳೂರು ಜಿಲ್ಲೆಯಲ್ಲಿರಬಹುದು, ಅತಿವೃಷ್ಟಿಯಿಂದಾಗಿ ಸಾಕಷ್ಟು ಬೆಳೆ ಹಾನಿಯಾಗಿ ಕಾಫಿ ಬೆಳೆಗಾರು ತುಂಬಾ ಸಂಕಷ್ಟದಲ್ಲಿದ್ದಾರೆ. ಹಾಸನ ಜಿಲ್ಲೆಗೆ 2007–08ರ ಸಾಲಿನಲ್ಲಿಯೇ ಬರಬೇಕಾದಂಥ ಹಣ 6 ಕೋಟಿ 43 ಲಕ್ಷ ರೂ. ಬಾಕಿ ಬಂದಿಲ್ಲ. ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಹಣ ಕೊಟ್ಟಿದ್ದಾರೆ, ಇದರಲ್ಲಿ ತಾರತಮ್ಯ ಮಾಡಿದ್ದಾರೆನ್ನುವುದನ್ನೂ ಸಹ ಹೇಳಿದ್ದೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಚಕಾರವೆತ್ತಲಿಲ್ಲ. ಇನ್ನು, ಆಲೂಗಡ್ಡೆ ಬೆಳೆ ನಷ್ಟದ ಬಗ್ಗೆ ಮೊನ್ನೆ ನಮ್ಮ ಪಕ್ಷದ ನಾಯಕರಾದ ರೇವಣ್ಣನವರು, ನಾವು ಮಾತನಾಡಿ ಕಳೆದ ವರ್ಷ 250 ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ ಎಂದು ರೈತರು, ನಾವು ನಮ್ಮ ಪ್ರತಿನಿಧಿಗಳು ಎಲ್ಲರೂ ಕೂಡ ಹೋರಾಟ ಮಾಡಿದ್ದೆವು. ಆಲೂಗಡ್ಡೆ ನಷ್ಟದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಏನು ಪರಿಹಾರ ಕೊಡುತ್ತೇವೆ, ಏನು ಮಾಡುತ್ತೇವೆ ಎನ್ನುವುದರ ಬಗ್ಗೆ ಕೂಡ ಚಕಾರವೆತ್ತಲಿಲ್ಲ. ಇನ್ನು, PWD ಯಲ್ಲಿ ಬಿಡುಗಡೆ ಮಾಡತಕ್ಕಂಥ LOC ಬಗ್ಗೆ, ಹಾಸನ ಜಿಲ್ಲೆಗೆ ಕಳೆದ ಎರಡು

ವರ್ಷಗಳಲ್ಲಿ ಅಂದರೆ 2008–09 ಮತ್ತು 2009–10ಕ್ಕೆ ಹಾಸನ ಜಿಲ್ಲೆಗೆ ಎಷ್ಟು LOC ಬಿಡುಗಡೆ ಮಾಡಿದ್ದಾರೆ? ಶಿವಮೊಗ್ಗ ಜಿಲ್ಲೆಗೆ ಎಷ್ಟು ಬಿಡುಗಡೆ ಮಾಡಿದ್ದಾರೆ? ಹಾವೇರಿ ಜಿಲ್ಲೆಗೆ ಎಷ್ಟು ಬಿಡುಗಡೆ ಮಾಡಿದ್ದಾರೆ? ದಯವಿಟ್ಟು ಈ ಬಗ್ಗೆ ಹೇಳಬೇಕು. LOC ಬಿಡುಗಡೆ ಮಾಡುವುದರಲ್ಲಿ ಈ ತರಹ ತಾರತಮ್ಯ ಮಾಡಿದರೆ ಹೇಗೆ? ಅದರ ಬಗ್ಗೆ ಉತ್ತರ ಕೊಡಬೇಕು. ಕೆಲವು ಯೋಜನೆಗಳಿಗೆ ಹಣಕಾಸನ್ನು ಬಿಡುಗಡೆ ಮಾಡುವುದರ ಬಗ್ಗೆ ಏನು ವಿಳಂಬವಾಗಿದೆ ಮತ್ತು ಶೇಕಡ 30–40 ರಷ್ಟು ಮಾತ್ರ ಬಿಡುಗಡೆ ಆಗಿದೆ, ಅದನ್ನು ಪೂರ್ತಿ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸರ್ವಜ್ಞ ಪ್ರಾಧಿಕಾರವನ್ನು ರಚಿಸಬೇಕೆನ್ನುವ ಬಗ್ಗೆ ನಾನು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಆದರೆ, ಅದಕ್ಕೆ ಅವಕಾಶ ಸಿಗಲಿಲ್ಲ. ಈಗಲೂ ಕೂಡ ತಮ್ಮ ಮೂಲಕ ಅವರನ್ನು ಕೇಳುವುದಕ್ಕೆ ಬಯಸುತ್ತೇನೆ. ಬಜೆಟ್‌ನಲ್ಲಿ "ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದರೆ ನಿಲಬಹುದೇ" ಎಂದು ಬಸವಣ್ಣನವರ ವಚನವನ್ನು ಮಾನ್ಯ ಮುಖ್ಯಮಂತ್ರಿಯವರು ಪ್ರಸ್ತಾಪ ಮಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ "ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪಾರಂಪರಿಕ ಕ್ಷೇತ್ರಗಳ ಅಭಿವೃದ್ಧಿಗಾಗಿ ಶಿವಮೊಗ್ಗದಲ್ಲಿ 'ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ' ವನ್ನು ಸ್ಥಾಪಿಸಲು ರೂ.20 ಕೋಟಿ ನೀಡಲಾಗುವುದು' ಎಂದು ತಿಳಿಸಿದ್ದಾರೆ. ಅಂದರೆ, ಒಂದು ರಾಜ್ಯದ ಮುಖ್ಯಮಂತ್ರಿಯವರು ಅವರು ಹೇಳಿದಂಥ ಬಸವಣ್ಣನವರ ವಚನವನ್ನು ಪ್ರಸ್ತಾಪ ಮಾಡಿದರೆ, ಅವರೇ ತಾರತಮ್ಯವನ್ನು ಮಾಡಿದರೆ ಹೇಗೆ? ಹಾಗಾಗಿ ಸರ್ವಜ್ಞ ಪ್ರಾಧಿಕಾರವನ್ನು ಏಕೆ ರಚನೆ ಮಾಡುತ್ತಿಲ್ಲ? ಸರ್ವಜ್ಞರಿಂದ ಈ ರಾಜ್ಯಕ್ಕೆ ಏನು ನಷ್ಟವಾಗಿದೆ? ಸರ್ವಜ್ಞನ ಪ್ರತಿಮೆಯನ್ನು ನಾವು ತಮಿಳುನಾಡಿನಲ್ಲಿ ಸ್ಥಾಪನೆ ಮಾಡಿದೆವು, ತಿರುವಳ್ಳುವರ್‌ರವರ ಪ್ರತಿಮೆಯನ್ನು ಇಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆ ಮಾಡಿರುವುದರಿಂದ ಒಂದು ಸೌಹಾರ್ದ ಯುತವಾದ ವಾತಾವರಣ ಐತಿಹಾಸಿಕವಾಗಿ ಸೃಷ್ಟಿಯಾಯಿತು ಎಂದು ಮಾನ್ಯ ಮುಖ್ಯಮಂತ್ರಿಯವರಾದ ತಾವೇ ಹಿಂದೆ ಹೇಳಿದ್ದೀರಿ. ಇವತ್ತು ಅಂಥ ಇತಿಹಾಸವನ್ನು ಸೃಷ್ಟಿ ಮಾಡಿದಂಥ ದಾರ್ಶನಿಕ, ತ್ರಿಪದಿ ಕವಿ ಸರ್ವಜ್ಞನ ಬಗ್ಗೆ ಸರ್ವಜ್ಞ ಪ್ರಾಧಿಕಾರವನ್ನು ಅದೂ ಕೂಡ ಜಾತ್ಯಾತೀತ ನಿಲುವನ್ನು ಹೊಂದಿದಂಥ ಸರ್ವಜ್ಞನ ಬಗ್ಗೆ ಪ್ರಾಧಿಕಾರವನ್ನು ಏಕೆ ಮಾಡುತ್ತಿಲ್ಲ?

ಮಾಡುವ ಇಚ್ಛೆ ಸರ್ಕಾರಕ್ಕೆ ಇದೆಯೋ, ಇಲ್ಲವೋ? ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಮುಖ್ಯಮಂತ್ರಿಯವರು ನಮ್ಮ ಕ್ಷೇತ್ರಕ್ಕೆ ಬಂದಾಗ ಉಳವಿಯ ಅಭಿವೃದ್ಧಿಗೆ ಬಜೆಟ್‌ನಲ್ಲಿ 2 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟಿದ್ದರು. ಈ ಬಜೆಟ್‌ನಲ್ಲಿ ಅದು ಎಲ್ಲಿಯೂ ಕಂಡುಬರಲಿಲ್ಲ. ಅದೇ ರೀತಿ ಎಲ್ಲ ರೈತರ ಕೃಷಿಗಳಿಗೆ ಸಹಾಯವಾಗುವ ಹಾಗೆ ರೈತರ ಜಾನುವಾರುಗಳು ಸತ್ತಾಗ ಅವರಿಗೆ ಯಾವುದೇ ರೀತಿಯ ಪರಿಹಾರಗಳು ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದಲೂ ಇಲ್ಲ, ಅಥವಾ ಸರ್ಕಾರದಿಂದಲೂ ಇಲ್ಲ. ಮನುಷ್ಯರಿಗೆ ಯಾವ ರೀತಿ ವಿಮೆ ಮಾಡುತ್ತಾರೋ ಅದೇ ರೀತಿ ಸರ್ಕಾರ ಪಶು ವಿಮೆಯನ್ನು ಕಡ್ಡಾಯವಾಗಿ ಜಾರಿಗೊಳಿಸಿ ರೈತರ ಜಾನುವಾರುಗಳು ಸತ್ತಾಗ ಅವರಿಗೆ ಪರಿಹಾರ ಸಿಗುವ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಘೋಷಣೆ ಮಾಡಬೇಕು. ಅದೇ ರೀತಿ ಉಳವಿಗೆ ಕೊಡುವಂಥ 2 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಆದರೆ, ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ಪ್ರದೇಶಗಳಿಗೆ ಇಟ್ಟಂಥ 2570 ಕೋಟಿ ರೂಪಾಯಿಗಳಲ್ಲಿ 2009–10ನೇ ಸಾಲಿನಲ್ಲಿ ಕೇವಲ 12 ಸಾವಿರ ಕೋಟಿ ರೂಪಾಯಿ ಮಾತ್ರ ಬಿಡುಗಡೆಯಾಗಿದೆ. ಅಂದರೆ 50% ಗಿಂತ ಕಡಿಮೆ ಹಣ ಬಿಡುಗಡೆಯಾಗಿದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು clarification ಕೊಡಬೇಕು. ಇನ್ನು, 2007ರಲ್ಲಿ APMC Act ಗೆ amendment ಆಯಿತು. ಅದರಲ್ಲಿ ಏನು ಹೇಳಲಾಗಿದೆ ಎಂದರೆ, ರೈತರಿಗೆ ಹಣ ಪಾವತಿಯಾಗುವಾಗ ಒಂದು ದಿವಸ ರೈತರಿಗೆ ಹಣ ತಡವಾಗಿ ಕೊಟ್ಟರೆ 1% every day interest ಕೊಡಬೇಕೆಂದು ಮಾಡಿದ್ದರು. ಆದರೆ, ಅದ್ಯಾವುದೂ implement ಆಗಿಲ್ಲ. ರೈತರಿಗೆ ಈಗಲೂ ಕೂಡ ಅನ್ಯಾಯವಾಗುತ್ತಿದೆ. Delayed Payment ಆಗುತ್ತಿದೆ. ಇನ್ನು, ನಮ್ಮ NEKRTC ಸಂಸ್ಥೆ ಉಳಿಯಬೇಕು. ಕಳೆದ ಸಲ ನೀವು Motor Vehicle Tax exemption ಕೊಟ್ಟಿದ್ದಿರಿ. ಆದರೆ, ಈ ಬಜೆಟ್‌ನಲ್ಲಿ Motor Vehicle

Tax ವಸೂಲಿ ಮಾಡುತ್ತೇವೆಂದು ಹೇಳಿದ್ದೀರಿ. ಅದರಿಂದಾಗಿ 40 ಕೋಟಿ ರೂಪಾಯಿಗಳಷ್ಟು ಈ ಸಂಸ್ಥೆಗೆ loss ಆದರೆ ಪುನಃ ಈ ಸಂಸ್ಥೆ loss ನಲ್ಲಿ ನಡೆಯಬೇಕಾಗುತ್ತದೆ. ದಯವಿಟ್ಟು tax ಹಾಕುವುದನ್ನು ಕೈಬಿಡಬೇಕು. ಇನ್ನು, Article 371 ಗೆ ತಾವು resolution ತಂದಿದ್ದೀರಿ, ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಯವರು ಸರ್ವಪಕ್ಷದ ನಿಯೋಗವನ್ನು ಕೇಂದ್ರಕ್ಕೆ, ಪ್ರಧಾನ ಮಂತ್ರಿಯವರ ಹತ್ತಿರ ಕರೆದುಕೊಂಡು ಹೋಗಿ ಅವರ ಮನವೊಲಿಸುವ ಪ್ರಯತ್ನವನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ, ನಮ್ಮಲ್ಲಿ ಆದಂಥ flood damage ನಲ್ಲಿ ಕೆಲಸ ಮಾಡಿದ್ದಕ್ಕೆ ಇನ್ನೂ ಕೂಡ 15 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿದೆ. ಅದನ್ನು ಕೂಡಲೇ ಬಿಡುಗಡೆ ಮಾಡಬೇಕು. ಹಾಗೆಯೇ HKDB ಯಲ್ಲಿ 23 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಇಲ್ಲಿಗೆ 40 ಕೋಟಿ ರೂಪಾಯಿಗಳನ್ನು ಕೊಡುತ್ತೇವೆನ್ನುವ ಆಶ್ವಾಸನೆಯನ್ನು ತಾವು ಕೊಟ್ಟಿದ್ದೀರಿ. ಅದನ್ನು ಕೂಡ ಹೆಚ್ಚಿಗೆ ಮಾಡಿ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ಇದು ಬಜೆಟ್‌ಗೆ ಸಂಬಂಧವಿಲ್ಲದಿದ್ದರೂ ಕೂಡ ಒಂದು ಮಹತ್ವದ ವಿಷಯವಿರುವುದರಿಂದ, ಬೆಂಗಳೂರಿನ ಇಂದಿರಾ ನಗರದಲ್ಲಿ ರಾಮಕೃಷ್ಣ ಮಠ ಇದೆ. ಅದರ ಎದುರುಗಡೆ ಒಂದು wine shop ಅನ್ನು ತೆರೆದಿದ್ದು ಅದು ಕಾನೂನು ಬಾಹಿರವಾಗಿದೆ. ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದರೂ ಕೂಡ close ಮಾಡುತ್ತಿಲ್ಲ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಯವರು intervene ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಈ ರಾಮಕೃಷ್ಣ ಮಠ ಬಹಳ ಪ್ರಸಿದ್ಧವಾಗಿರತಕ್ಕಂಥ ಪ್ರತಿಷ್ಠೆಯನ್ನು ಹೊಂದಿರತಕ್ಕಂಥ ಮಠವಾಗಿದೆ. ಅದರ ಎದುರುಗಡೆ ಇರುವ wine shop ಕಾನೂನು ಬಾಹಿರವಾಗಿದ್ದು ಅದನ್ನು ತಕ್ಷಣ ಮುಚ್ಚಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಯವರು ಬಸವಕಲ್ಯಾಣಕ್ಕೆ ಸುಮಾರು 38 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಪ್ರಗತಿಪರವಾದಂಥ ಸಾಕಷ್ಟು ಕೆಲಸ ಬಸವಣ್ಣನವರ ಕರ್ಮಭೂಮಿಯಾದಂಥ ಕ್ಷೇತ್ರದಲ್ಲಿ ನಡೆಯುತ್ತಿದೆ. ಪ್ರಸ್ತುತ ವರ್ಷದಲ್ಲಿ ಕೇವಲ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ,

ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇನ್ನೂ ಹೆಚ್ಚಿನ ಹಣವನ್ನು Development Authority ಗೋಸ್ಕರವಾಗಿ ಬಸವ ಕಲ್ಯಾಣ ಕ್ಷೇತ್ರದಲ್ಲಿ 12ನೇ ಶತಮಾನದಲ್ಲಿ ಬಸವಣ್ಣ ಮಾಡಿದಂಥ ಮಹತ್ವದ ಕಾಯಕದ development ಆಗಬೇಕಾಗಿದೆ. ಇದಕ್ಕೆ ಇನ್ನೂ ಹೆಚ್ಚು ಹಣ ಒದಗಿಸಿಕೊಡ ಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಬಸವ ಉತ್ಸವಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ, ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ (ಕೋಲಾರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುವುದೇನೆಂದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆದು 2008–09, 2009–10ನೇ ಸಾಲಿನಲ್ಲಿ ಅನೇಕ ರೋಗಗಳಿಂದಾಗಿ ಅನೇಕ ಎಕರೆಗಳಲ್ಲಿ ಬೆಳೆದ ಬೆಳೆ ಹಾಳಾಗಿ ನಷ್ಟವಾಗಿದೆ. ಅದಕ್ಕೆ insurance ಕೊಡತಕ್ಕಂಥ ವ್ಯವಸ್ಥೆ ಇತ್ತು. ಆ insurance ಹಣ ಕೂಡ ಬಂದಿರಲಿಲ್ಲ. ಎರಡನೆಯದಾಗಿ ಇಲ್ಲಿ tomato, ತರಕಾರಿಯನ್ನು ನಮ್ಮ ಈ ಎರಡೂ ಜಿಲ್ಲೆಯಲ್ಲಿ ಹೆಚ್ಚಿಗೆ ಬೆಳೆಯುತ್ತಿದ್ದಾರೆ. ಈ ರೈತರೆಲ್ಲ ಬಹಳ ನಷ್ಟದಲ್ಲಿದ್ದಾರೆ. ಆದ್ದರಿಂದ, ಅದಕ್ಕೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಹೀಂಖಾನ್ : ಮಾನ್ಯ ಅಧ್ಯಕ್ಷರೆ, ನಮ್ಮ ಬೀದರ್ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಯವರು visit ಕೊಟ್ಟಿದ್ದರು. ಅಲ್ಲಿ mini Vidhana Soudha ಕ್ಕೆ 5 ಕೋಟಿ ರೂಪಾಯಿಗಳನ್ನು immediate ಆಗಿ release ಮಾಡುತ್ತೇವೆಂದು ಹೇಳಿ ಬಂದಿದ್ದಾರೆ. ಆದರೆ, ಹಣ ಕೊಟ್ಟಿಲ್ಲ. ಅಲ್ಲಿ ಒಂದು function hall ಆಗಲಿ, ZP ನಲ್ಲಿ ಮೀಟಿಂಗ್ ಹಾಲ್, ಯಾವುದೇ hall ಇಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಅಲ್ಲಿ ಪರಿಸ್ಥಿತಿ ನೋಡಿದ್ದಾರೆ. ಆ hall ನಲ್ಲಿ 50 ಮಂದಿ ಸಹ ನಿಲ್ಲುವುದಕ್ಕೆ ಆಗಲಿಲ್ಲ. ಆಗ ಮಾನ್ಯ ಮುಖ್ಯಮಂತ್ರಿಯವರು 5 ಕೋಟಿ ರೂಪಾಯಿಗಳನ್ನು immediate release ಮಾಡುತ್ತೇವೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಮಿನಿ ವಿಧಾನಸೌಧ ಇದೆ. ಬೀದರ್‌ನಲ್ಲಿ ಮಿನಿ ವಿಧಾನಸೌಧ ಇಲ್ಲ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಭರವಸೆ ಕೊಟ್ಟ

ಹಾಗೆ immediate ಆಗಿ 5 ಕೋಟಿ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು request ಮಾಡಿಕೊಳ್ಳುತ್ತೇನೆ. ಹಾಗೆಯೇ, ನಮ್ಮಲ್ಲಿ drainage system ಬಹಳ worst ಆಗಿದೆ. ಅಲ್ಲಿ ಎಲ್ಲರೂ ತುಂಬಾ ಕಷ್ಟದಲ್ಲಿದ್ದಾರೆ. ಅಲ್ಲಿ disease ತುಂಬಾ ಬರುತ್ತಿದೆ. ಆದ್ದರಿಂದ drainage ಸಲುವಾಗಿ ಹಣ ಬಿಡುಗಡೆ ಮಾಡಬೇಕೆಂದು request ಮಾಡಿಕೊಳ್ಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ರೈತರ ಪರವಾಗಿ ಕಾಳಜಿ ವಹಿಸಿ ರೈತರ ಉತ್ಪಾದನೆ ಹೆಚ್ಚಿಗೆ ಮಾಡುವಂಥ ಗುರಿ ಇಟ್ಟುಕೊಂಡು 4% growth ಎಂದು ಹೇಳಿದ್ದಾರೆ. ಕಳೆದ ಸಲ ಕೃಷಿ ನೀತಿ ಹಾಗೂ ಕೆಲವು ಅಧಿಕಾರಿಗಳು ಮಾಡಿದಂಥ ಕಾರ್ಯಕ್ರಮಗಳಲ್ಲಿ ಯಾವ ರೀತಿಯಲ್ಲೂ ಬಜೆಟ್‌ನಲ್ಲಿ ಹಣ ಕೊಟ್ಟಿಲ್ಲ. ಹಾಗಾಗಿ ಉತ್ಪಾದನೆ ಯಾವ ರೀತಿಯಾಗಿ ಹೆಚ್ಚಾಗುತ್ತದೆ ಎನ್ನುವುದೂ ಗೊತ್ತಿಲ್ಲ. ನಮ್ಮ ಭಾಗದಲ್ಲಿ ಯಾವ ರೀತಿ flood ಬಂತು ಎನ್ನುವುದು ತಮಗೆಲ್ಲ ಗೊತ್ತಿದೆ. ಆದರೆ, flood ಗಿಂತ ಹೆಚ್ಚಾಗಿ drought ನಿಂದ ಬಹಳಷ್ಟು ರೈತರು ತೊಂದರೆಗೊಳಗಾಗಿದ್ದಾರೆ. ಹಾಗಾಗಿ drought ನಿಂದ ತೊಂದರೆಗೊಳಗಾದ ರೈತರಿಗೆ ಎಕರೆಯೊಂದಕ್ಕೆ minimum 10 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ನಾವೂ ಬೇಡಿಕೆಯನ್ನಿಟ್ಟಿದ್ದೆವು. ಆದರೆ, ಅದರಿಂದ ಏನೂ ಆಗಿಲ್ಲ.

ಸನ್ಮಾನ್ಯ ಮುಖ್ಯಮಂತ್ರಿಯವರೆ, ಬೀದರ್‌ನಲ್ಲಿ airport ready ಇದೆ. ಅದು ಏಕೋ ಕಾರ್ಯರೂಪಕ್ಕೆ ಬಂದಿಲ್ಲ, ಚಾಲೂ ಆಗಿಲ್ಲ. ಅದಕ್ಕೆ ನೀವೇನಾದರೂ ಮಾಡಿ GMR ರವರ ಹತ್ತಿರ ಮಾತನಾಡಿ immediate ಆಗಿ ಬೇರೆ ಕಡೆ ಎಲ್ಲಾದರೂ ಹಣ ಕೊಟ್ಟು ready ಮಾಡಿಸಬೇಕು. ಆಮೇಲೆ, ಗಂಗಾಕಲ್ಯಾಣದಲ್ಲಿ ಹೆಚ್ಚಿಗೆ ಹಣ ಕೊಡಬೇಕು. Tractor subsidy ಕೊಡದೆ ಬಹಳಷ್ಟು ತೊಂದರೆಯಾಗಿದೆ. ಅದಕ್ಕಾಗಿ tractor subsidy ಯನ್ನು ತೆಗೆದುಹಾಕಬೇಡಿ. Central Government ನವರು ಆ subsidy ಯನ್ನು ತೆಗೆಯುತ್ತಾರೆಂದು ಗೊತ್ತಾಯಿತು. ಅದರ ಜೊತೆಯಲ್ಲಿ, State Government subsidy ಕೊಡುವುದನ್ನು continue ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರಿನಲ್ಲಿ ಹೊಸ rail project ಬಗ್ಗೆ ಹೇಳಿದರು. ಬೆಂಗಳೂರಿನಲ್ಲಿ ಆಗಲೇ 'namma metro project' ನಡೆಯುತ್ತಿದೆ. ಒಂದು ಕಡೆ ಮೆಟ್ರೋ ಕೆಲಸ ನಡೆಯುತ್ತಿದೆ. ಬೆಂಗಳೂರು ನಗರದಿಂದ Airport ಗೆ Express rail link ಮಾಡಬೇಕೆಂದು ಬಿ.ಆರ್.ವಿ. parade ground ನಿಂದ Cricket stadium ನಿಂದ ಸೀದಾ airport ಗೆ ಒಂದು direct line ಮಾಡಬೇಕೆನ್ನುವ ಒಂದು proposal ಇದೆ. ಈ rail project ಬಗ್ಗೆ ಹೇಳಿದರಲ್ಲ, ಅದು ಎಲ್ಲಿಂದ ಎಲ್ಲಿಗೆ? ನಾನು ಮಮತಾ ಬ್ಯಾನರ್ಜಿಯವರನ್ನು ಮೀಟ್ ಮಾಡಿ ಬಂದಿದ್ದೇನೆ, ಈ ತರಹ Proposal ಇದೆ ಎಂದಿರಿ. ಇದು ಎಲ್ಲಿಂದ ಎಲ್ಲಿಗೆ ಎಂಬುದು ಗೊತ್ತಾಗಬೇಕಲ್ಲವೇ? ಇದನ್ನು ಕೇವಲ ಬೆಂಗಳೂರು ಮಹಾನಗರ ಪಾಲಿಕೆ election ಇದೆ ಎಂದು ಹೇಳಿದಿರಾ? ಅಥವಾ ಇದರಲ್ಲೇನಾದರೂ ನಿಜಾಂಶವಿದೆಯೇ? ಎಲ್ಲಿಂದ ಎಲ್ಲಿಯವರೆಗೂ rail line ಮಾಡುತ್ತೀರಿ? ಎಷ್ಟು stations ಇರುತ್ತವೆ? ಏನು proposal ಎಂದು ವಿವರವಾಗಿ ಹೇಳಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಯವರಲ್ಲಿ ನಾನು ಗಮನಕ್ಕೆ ತರುವುದೇನೆಂದರೆ, 'ಆರಾಧನಾ' ದಲ್ಲಿ ಈ ವರ್ಷ ಹಣ ಬಿಡುಗಡೆಯಾಗಿಲ್ಲ. ಬೇಲೂರು ಚನ್ನಕೇಶವ ದೇವಸ್ಥಾನ, ಅದು ಜಗದ್ವಿಖ್ಯಾತ ದೇವಸ್ಥಾನವಾಗಿದೆ. ಸರ್ಕಾರದ ಭೂಮಿಗೆ ಸರ್ಕಾರವೇ ಹಣ ಕೊಟ್ಟು ಕೊಂಡುಕೊಂಡಿದೆ. ಸರ್ಕಾರದ ಒಂದೂಕಾಲು ಎಕರೆ ಜಮೀನಿಗೆ ಸರ್ಕಾರವೇ ಒಂದೂವರೆ ಕೋಟಿ ರೂ.ಗಳನ್ನು ಕೊಟ್ಟು ಕೊಂಡುಕೊಂಡಿದೆ. ಇದನ್ನು clarify ಮಾಡಿ ಯಾರು ತಪ್ಪಿತಸ್ಥರಿದ್ದಾರೆ, ಅವರನ್ನು ಜೈಲಿಗೆ ಕಳುಹಿಸುವಂಥ ವ್ಯವಸ್ಥೆಯಾಗಬೇಕು. ಸರ್ಕಾರಿ ಆಸ್ತಿಯನ್ನು ಸರ್ಕಾರವೇ ಹಣ ಕೊಟ್ಟು ಕೊಂಡುಕೊಳ್ಳುವಂಥ ಪರಿಸ್ಥಿತಿ ಇವತ್ತು ಬಂದಿದೆ. ಹಾಸನ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆಯಲ್ಲಿ ಆಲೂಗೆಡ್ಡೆ ಬೆಳೆ ಬೆಳೆದಿದ್ದಾರೆ. ಈಗ ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆಯನ್ನು ಬೆಳೆಯಲೇಬೇಡಿ ಎಂದು ಹೇಳುವುದು ತಪ್ಪು ಅಭಿಪ್ರಾಯ. ಏಕೆಂದರೆ, ಉತ್ತರ ಕರ್ನಾಟಕದಲ್ಲಿ ಅವರಿಗೆ ಜೋಳ ಬೆಳೆಯಬೇಡಿ ಎಂದರೆ ಅವರಿಗೆ ಎಷ್ಟು ಸಿಟ್ಟು ಬರುತ್ತದೋ, ಹಾಸನ

ಜಿಲ್ಲೆಯವರಿಗೆ ನೀವು ಆಲೂಗೆಡ್ಡೆಯನ್ನು ಬೆಳೆಯಬೇಡಿ ಎಂದು ಹೇಳಿದರೆ ನಮ್ಮನ್ನು ಹಿಡಿದು ಹೊಡೆದೇ ಬಿಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಈಗ ಮುಖ್ಯಮಂತ್ರಿಯವರಿಂದ ಉತ್ತರ. ಯಾರೂ ಕೂಡ ಅವಕಾಶ ಕೊಡಲೇಬೇಕೆಂದು ಒತ್ತಾಯ ಮಾಡುವ ಹಾಗಿಲ್ಲ. ಯಾರ್ಯಾರು ಮಾತನಾಡಿಲ್ಲ, ಅವರಿಗೆಲ್ಲ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಸದನಕ್ಕೆ ಬೆಳಿಗ್ಗೆ 10 ಗಂಟೆಗೆ ಬಂದು ರಾತ್ರಿ 9 ಗಂಟೆವರೆಗೂ ಕುಳಿತುಕೊಳ್ಳುತ್ತೇವೆ. ಬಜೆಟ್ ಮೇಲೆ ಮಾತನಾಡಿದ್ದೇವೆ. ಆದರೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವ ಸಂದರ್ಭದಲ್ಲಿ "108 ambulance ಯೋಜನೆ" ಬಹಳ ಒಳ್ಳೆಯ ಯೋಜನೆ ಎಂದು ಅದರ ಬಗ್ಗೆ ಗಂಭೀರವಾಗಿ ಮಾತನಾಡಿದರು. ನಾನು108 ambulance ಯೋಜನೆಯ ವಿರೋಧಿಯಲ್ಲ. ಅದು ಒಳ್ಳೆಯ ಯೋಜನೆ ಎಂದು ನನಗೆ ಗೊತ್ತು. ಚಿನ್ನದ ಸೂಜಿ ಎಂದು ಕಣ್ಣಿಗೆ ಚುಚ್ಚಿಕೊಳ್ಳಬಾರದು, ಚುಚ್ಚಿಕೊಂಡರೆ ರಕ್ತವೇ ಬರುವುದು ಎಂದು ನಾನು ಪ್ರತಿ ಸಲ ಹೇಳಿದ್ದೇನೆ. ಈ ವಿಚಾರದಲ್ಲಿ Estimates committee ಯಲ್ಲಿ ಮಾತನಾಡಿದ್ದೇನೆ. ನಾನೊಬ್ಬ ಸದಸ್ಯನಾಗಿ ಇದೇ ವಿಚಾರದಲ್ಲಿ ಪದೇ ಪದೇ questions ಕೇಳಿದ್ದೇನೆ, ಉತ್ತರ ಕೇಳಿದ್ದೇನೆ, ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿದ್ದೇನೆ, ಹೀಗೆ ಅವಕಾಶ ಸಿಕ್ಕಿದಾಗ ಎಲ್ಲಾ ನಿಯಮ ಗಳಡಿಯಲ್ಲಿ ಮಾತನಾಡಿದ್ದೇನೆ. 108 ambulance ಯೋಜನೆ ಒಳ್ಳೆಯ ಯೋಜನೆಯಾದರೂ ಅದರ ಕಾರ್ಯಾಚರಣೆ ಮಾಡತಕ್ಕಂಥ ವಿಧಾನ ಕೆಟ್ಟದ್ದಿದೆ. ಅದನ್ನು ಸರಿಪಡಿಸಿ. ನೀವು MOU ಅನ್ನು ಮಾಡಿಕೊಂಡಿರು ವುದನ್ನು ನಾವೇನಾದರೂ ಅರ್ಥ ಮಾಡಿಕೊಂಡಿಲ್ಲವೋ? ಅಥವಾ ನೀವು ಅರ್ಥ ಮಾಡಿಕೊಂಡಿಲ್ಲವೋ? ಇಲ್ಲ, ಅದರಲ್ಲಾಗಿರುವ ಲೋಪದೋಷ ಗಳೇನು ಎನ್ನುವುದರ ಬಗ್ಗೆ ಸಮಂಜಸವಾದ ಉತ್ತರ ಕೊಡಿ ಎಂದು ನಾವು ಪದೇ ಪದೇ ಕೇಳಿದರೆ 108 ambulance ಯೋಜನೆಯಂಥದ್ದು ಈ ರಾಜ್ಯ, ದೇಶದಲ್ಲೇ ಇಲ್ಲ ಎಂದು ಹೊಗಳಿಕೊಂಡರೆ ಏನು ಪ್ರಯೋಜನ? ಜನ ಏನು ತಿಳಿದುಕೊಳ್ಳುತ್ತಾರೆಂದರೆ, ಇವರು ಅಭಿವೃದ್ಧಿಯ ವಿರುದ್ಧ ಇದ್ದಾರೆನ್ನುವ ಅಭಿಪ್ರಾಯ ಬರುವುದು ಬೇಡ. ದಯವಿಟ್ಟು, 108 ambulance ಯೋಜನೆಯ ಕಾರ್ಯಾಚರಣೆಯಲ್ಲಿ ನಡೆಯುತ್ತಿರುವಂಥ ಲೋಪದೋಷ

ವೇನಿದೆ, ಅದನ್ನು ಈ ಸದನಕ್ಕೆ ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುತ್ತೇನೆ. ನಾನೇನಾದರೂ ತಪ್ಪು ಹೇಳಿದ್ದರೆ, ತಪ್ಪು ಕೇಳಿದ್ದರೆ ಕ್ಷಮೆಯಾಚಿಸುತ್ತೇನೆ. ನಾನು ಈ ಸದನದಲ್ಲಿ, ಒಂದು trip ಅಂದರೆ 20 ಕಿ.ಮೀ.ಗೆ 1854 ರೂ. ಕೊಡುತ್ತಿದ್ದೀರಿ, ಅದನ್ನು 1200 ರೂ.ಗಳಿಗೆ ಕೊಡಿ. ಸರ್ಕಾರಕ್ಕೂ ಹಣ ಉಳಿಯುತ್ತದೆ.

(ಗೊಂದಲ)

ಅಧ್ಯಕ್ಷರು : ಸಾಕು ಕುಳಿತುಕೊಳ್ಳಿ. ಇನ್ನೂ ಮಾತನಾಡಿದರೆ ದಾಖಲೆಗೆ ಹೋಗುವುದಿಲ್ಲ. ಅವರು ಮಾತನಾಡುವುದನ್ನು ದಾಖಲೆಗೆ ತೆಗೆದು ಕೊಳ್ಳಬೇಡಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದಕ್ಕಿಂತ ಮುಂಚೆ ಒಂದು ವಿಷಯವನ್ನು ಮರೆತಿದ್ದರು, ಅದನ್ನು ಜ್ಞಾಪಿಸುವುದಕ್ಕೆ ನಾನು ಎದ್ದು ನಿಂತಿದ್ದೇನೆ. ಹಿಂದೆ ನೀವು ರೈತರ ಮತ್ತು ಗ್ರಾಮೀಣ ಜನರ ಕಲ್ಯಾಣಕ್ಕೋಸ್ಕರ ವಿಶೇಷವಾಗಿ ಸದನವನ್ನು ಕರೆದಿದ್ದಿರಿ. ಅಲ್ಲಿ ವ್ಯಾಪಕವಾಗಿ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಸುಮಾರು 35 ಅಂಶಗಳನ್ನು ನೀವು ಪ್ರಕಟಣೆ ಮಾಡಿದಿರಿ. ಯೋಜನೆಗಳನ್ನು ಮಾಡಿದಿರಿ. ಆ ಯೋಜನೆಗಳನ್ನು ಮಾಡುವಂಥ ಸಂದರ್ಭದಲ್ಲಿ ಸರ್ಕಾರಿ ಆದೇಶಗಳನ್ನು ಹೊರಡಿಸುತ್ತೇವೆ, ಮುಂದಿನ ಆಯವ್ಯಯದಲ್ಲಿ ಅದಕ್ಕೆ ಬೇಕಾದಂಥ ಸಂಪನ್ಮೂಲಗಳನ್ನು ಒದಗಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಿರಿ. ಬಹುಶಃ ನಿಮ್ಮ ಆಯವ್ಯಯದಲ್ಲಾಗಲಿ, ಮಾತಿನಲ್ಲಾಗಲಿ ಎಲ್ಲಿಯೂ ಕೂಡ ಅದರ ವಿಚಾರ ಪ್ರಸ್ತಾಪವಾಗಲಿಲ್ಲ. ಯಾವುದಾದರೊಂದು ಸರ್ಕಾರಿ ಆದೇಶವಾಗಿದೆಯೇ ಎಂದರೆ ಯಾವ ಆದೇಶ ಕೂಡ ಆಗಿಲ್ಲ. ನಾನು ಒಂದೊಂದನ್ನೂ ಕೂಡ ವಿವರವಾಗಿ ಹೇಳಬಹುದು. ಆದರೆ, ಕಾಲಾವಕಾಶವಿಲ್ಲವೆನ್ನುವ ಕಾರಣ್ಕಕಾಗಿ ನಾನು ಹೇಳುತ್ತಿಲ್ಲ. ಎರಡನೆಯದಾಗಿ, ಬಜೆಟ್‌ನಲ್ಲಿ ಹೇಳಿರುವಂಥ ಯೋಜನೆಗಳಿಗೆ ಒಂದು ರೀತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ತಳುಕು ಹಾಕುವಂಥ ರೀತಿಯಲ್ಲಿ ನೀವು ಮಾಡಿರುವುದರಿಂದ ಆ ಯೋಜನೆಗಳು ಯಶಸ್ವಿಯಾಗುವುದಿಲ್ಲವೆನ್ನುವ ಮಾತನ್ನು ನಾನು ಹೇಳಿದ್ದೆ. ಬಹುಶಃ ಬಾಂದಾರುಗಳನ್ನು ಹಾಕಬೇಕಾದಂಥ ಸಂದರ್ಭದಲ್ಲಿ ವಿಶೇಷವಾಗಿ ನಿಮ್ಮ ಬಜೆಟ್‌ನಲ್ಲಿ ಹಣ ಕೊಟ್ಟಾಗ ಮಾತ್ರ ಸಾಧ್ಯವಾಗುತ್ತದೆ, ಇಲ್ಲವಾದರೆ ಆಗುವುದಿಲ್ಲವೆನ್ನುವ ಮಾತನ್ನು ನಾನು ಹೇಳಿದ್ದೆ. ನಗರ ಪಟ್ಟಣಕ್ಕೋಸ್ಕರ

ನೀವು 5–5 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಇಲ್ಲಿಯವರೆಗೂ ಒಂದೇ ಒಂದು ತಾಲ್ಲೂಕಿನಲ್ಲೂ ಕೂಡ ಕಾಮಗಾರಿ ಪ್ರಾರಂಭವಾಗಿಲ್ಲ. ಕಾರಣವೇನೆಂದರೆ, ಇವತ್ತಿನವರೆಗೂ action plan ಅನ್ನು Deputy Commissioners ಯಾರೂ approve ಮಾಡಿಲ್ಲ. ಇದು ವಾಸ್ತವ ಸಂಗತಿ. ಅದನ್ನು ನೋಡಿ, ಹಣ ಬಿಡುಗಡೆ ಮಾಡಿದರೂ ಸಹ ಖರ್ಚು ಮಾಡಿಲ್ಲದಿರುವುದು, action plan ಮಾಡಿಲ್ಲ ದಿರುವುದು ವಾಸ್ತವ ಸಂಗತಿ. ಇನ್ನೊಂದು ಮುಖ್ಯ ವಿಚಾರವೆಂದರೆ, ಕೇಂದ್ರ ಸರ್ಕಾರದ ಯೋಜನೆಗಳೇನಿವೆ, ಅಲ್ಲಿಂದ ಬರತಕ್ಕಂಥ ಮೂಲ ಬಂಡವಾಳ ಇವತ್ತು capital investment ಗೆ ಜಾಸ್ತಿ ಹೋಗುತ್ತದೆ. ಇವತ್ತು ಆರೋಗ್ಯ ಕವಚ ಯೋಜನೆಯಲ್ಲಿ 70% ಹಣವನ್ನು NRHM, ಕೇಂದ್ರ ಸರ್ಕಾರದಿಂದ ಬರುವ ಹಣದಿಂದಾಗುತ್ತದೆ. ಆದರೆ, ಆ ವಾಹನದ ಮೇಲೆ ಮುಖ್ಯಮಂತ್ರಿಯವರ ಮತ್ತು ಆರೋಗ್ಯ ಸಚಿವರ ಫೋಟೋ ಮಾತ್ರ ಇರುತ್ತದೆನ್ನುವ ಆಕ್ಷೇಪವನ್ನು ಸಾಕಷ್ಟು ಸದಸ್ಯರೆಲ್ಲ ಆಡಿದರು. ಇವತ್ತು ರಾಜ್ಯ ಸರ್ಕಾರ ಮುಂದೆ ಬರಬೇಕಾದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದಿಂದ ಬರಬೇಕಾಗುತ್ತದೆಯೇ ವಿನಃ, ಫೋಟೋಗಳನ್ನು ಹಾಕುವುದನ್ನೇ ಬಿಟ್ಟುಬಿಡಿ, ಅದು ಒಳ್ಳೆಯದಾಗುತ್ತದೆ. ಆಗ ಆ ಯೋಜನೆಗೆ ಮಹತ್ವ ಬರಲಿ ಎನ್ನುವ ದೃಷ್ಟಿಯಿಂದ ಕೆಲವು clarifications ಕೇಳುತ್ತಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಸರ್ಕಾರ ಏನು ಹಣ ನಿಗದಿ ಮಾಡುತ್ತದೆ, ಆ ಹಣದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಖರ್ಚಾಗುತ್ತಿಲ್ಲ. ಅದಕ್ಕೆ ತಾವು fiscal responsibility Act Bill ಏನು ತಂದಿದ್ದೀರಿ, ಅದೇ ರೀತಿಯಲ್ಲಿ SC/ST Development Implementation Act ತಂದು ಹಣ ಏನು ಇಟ್ಟಿದ್ದಾರೆ, non lapsable and non divertable ಎಂದು Planning Commissioner ರವರೇನು direction ಕೊಟ್ಟಿದ್ದಾರೆ, ಅದನ್ನು ಖರ್ಚು ಮಾಡುವುದಕ್ಕೆ ಒಂದು Act ನ್ನೇ ತಂದು ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ನಾವು ಪದೇ ಪದೇ SC/ST ಗಳಿಗೇ ಇಷ್ಟು ಖರ್ಚು ಮಾಡುತ್ತೇವೆ, ಇಷ್ಟು ಹಣ ಕೊಟ್ಟೆವು ಎಂದು ಹೇಳಿ ಹಣವನ್ನೇ ಖರ್ಚು ಮಾಡದಿರುವುದು ತಪ್ಪುತ್ತದೆ. Single Window Agency ಮಾಡಿ ಎಲ್ಲಾ ಹಣವನ್ನೂ ಅಲ್ಲಿ ಸೇರಿಸಿ

Social Welfare ನವರು ಮಾಡುವ ತರಹ ಆಗಬೇಕು. SC/ST, Backward Class, Minority ವಿದ್ಯಾವಂತ ತರಬೇತಿ ಪಡೆದ ಯುವಕರು ಬದುಕುವುದಕ್ಕೆ, ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುವುದಕ್ಕೆ Procurement Bill ತಂದು ಅವರಿಗೆ ಅಲ್ಲಿ ಅವಕಾಶ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮುಖ್ಯಮಂತ್ರಿಯವರಲ್ಲಿ ಒತ್ತಾಯಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ. ನೀವು ಆ ತರಹ ಪ್ರಶ್ನೆ ಮಾಡುವ ಹಾಗಿಲ್ಲ.

ಶ್ರೀ ಯು.ಟಿ. ಖಾದರ್ : ಬಜೆಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಜನರಿಗೆ ಯಾವುದೇ ಅನುದಾನ ಇಲ್ಲ. ಬಹುಶಃ ಅನ್ಯಾಯ ಮಾಡಿದಂತಾಗುತ್ತದೆ.

ಅಧ್ಯಕ್ಷರು : ನಾನು ನಿಮ್ಮನ್ನು ಕರೆದೇ ಇಲ್ಲ. ದಯಮಾಡಿ, ಕುಳಿತುಕೊಳ್ಳಿ.

(5-50 PM)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಕಾಲದಲ್ಲಿ ನಿಮಗೆ ಯಾರು ಸರ್ಟಿಫಿಕೇಟ್ ಕೊಟ್ಟರು? ಅದು ಯಾವ ಬುಕ್ ನಲ್ಲಿದೆ? ತೋರಿಸಿ ಎಂದು ಕೇಳಿದರು. ಇದು State Finances Study of Budgets 2009-10 at Page-48: "Karnataka registered the highest own tax Revenue (OTR)-GSDP ratio of 10.7% in 2008-09, followed by Tamil Nadu (9.9%), Andhra Pradesh (9.6%) and Madhya Pradesh (9.0%). It may be noted that OTR-GSDP ratio of West Bengal (4.7%) was one of the lowest in the non-special category states". ಈ ರೀತಿಯಾಗಿ ಕರ್ನಾಟಕದ ಬಗ್ಗೆ Reserve Bank of India ಹೇಳಿದೆ.

ಶ್ರೀ ಸಿದ್ದರಾಮಯ್ಯ : ರಿಸರ್ವ್ ಬ್ಯಾಂಕ್‌ನವರು ಹಿಂದಿನ ವರ್ಷ 2008-09ರ ಬಗ್ಗೆ ಏನು ಹೇಳಿದ್ದಾರೆ, ಅದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : Reserve Bank ನವರು ಹಿಂದಿನ ವರ್ಷದ್ದನ್ನೇ ತಾನೇ ಕೊಡುವುದು, ಹಿಂದಿನ ಹೋದ ವರ್ಷದ್ದೇ ನಾನು ಹೇಳುತ್ತಿರುವುದು. ಎರಡನೆಯದಾಗಿ, ಲೇಖಾನುದಾನಕ್ಕೆ ನಾನು ಅನುಮತಿ

ಕೇಳುತ್ತಿರುವ ಟೈಮ್‌ನಲ್ಲಿ ನಮ್ಮ ಅನೇಕ ಗೌರವಾನ್ವಿತ ಸದಸ್ಯರು ಅನೇಕ ಪ್ರಮುಖವಾದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಬಹುಶಃ ನಾವು ಪೂರ್ಣ ಬಜೆಟ್ ಚರ್ಚೆ ಮಾಡುತ್ತಿರುವ ಕಾಲದಲ್ಲಿ ಒಂದು ಸಂಪ್ರದಾಯವಿತ್ತು. ಯಾವ್ಯಾವುದೊ ಕಾರಣಕ್ಕಾಗಿ ಬಹುಶಃ ಈ ಎಲೆಕ್ಷನ್ ಬರದೆ ಇದ್ದಿದ್ದರೆ ಪೂರ್ಣ ಬಜೆಟ್‌ನ್ನು ಮಂಡಿಸಿ, ಚರ್ಚಿಸಿ, ಪ್ರತಿಯೊಬ್ಬ ಸಚಿವರು ತಮ್ಮ ತಮ್ಮ ಇಲಾಖೆಯಲ್ಲೇನು ಪ್ರಗತಿಯಾಗಿದೆ ಆ ಬಗ್ಗೆ ಮಾತನಾಡಿ ಇನ್ನೂ ವಿವರವಾಗಿ ಚರ್ಚಿಸಲಿಕ್ಕೆ ಅವಕಾಶವಾಗುತ್ತಿತ್ತು. ಮುಂದೆ ಬರುವಂಥ ದಿವಸಗಳಲ್ಲಿ ಚರ್ಚೆ ಮಾಡುವಂಥ ಕಾಲದಲ್ಲಿ ಪ್ರತಿಯೊಂದು ಇಲಾಖೆಯಲ್ಲಿ ಏನು ಪ್ರಗತಿಯಾಗಿದೆ, ಏನು ಪ್ರಗತಿಯಾಗಿಲ್ಲ ಎನ್ನುವುದನ್ನು ಸಂಬಂಧಪಟ್ಟ ಸಚಿವರು ಮಾತನಾಡುವುದಕ್ಕೆ ಅನುಕೂಲವಾಗುತ್ತದೆ, ಅದೇ ನಿಜವಾದಂಥ ಚರ್ಚೆಯ ರೂಪವಾಗಬೇಕು, ಆಗ ಅನೇಕ ವಿಷಯಗಳಿಗೆ ನಿಮ್ಮ ಸಂಶಯಕ್ಕೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಮೂರನೆಯದು, ಗೌರವಾನ್ವಿತ ಸದಸ್ಯರುಗಳು ತಾವೇನು ಸಲಹೆಗಳೇನು ಕೊಟ್ಟಿದ್ದೀರಾ, ಕೆಲವು ನಿಮ್ಮ ಕ್ಷೇತ್ರದ ಸಮಸ್ಯೆಗಳ ಬಗ್ಗೆ, LOC ಬಿಡುಗಡೆಯ ಬಗ್ಗೆ, ಹೀಗೆ ಬೇರೆ ಬೇರೆ ವಿಷಯಗಳ ಬಗ್ಗೆ ಏನು ಪ್ರಸ್ತಾಪಿಸಿದಿರಿ, ನಾನು ಅವೆಲ್ಲವನ್ನೂ ನೋಟ್ ಮಾಡಿಕೊಂಡಿದ್ದೇನೆ. ಯಾವ್ಯಾವುದು ಸಾಧ್ಯ ಇದೆಯೋ ಆ ಚೌಕಟ್ಟಿನಲ್ಲಿ ಆ ಕೆಲಸ ಮಾಡಿ ಕೊಡುವುದಕ್ಕೆ ನಾನು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆ ನಾನು ಈ ಸಂದರ್ಭದಲ್ಲಿ ನಿಮಗೆ ಕೊಡುತ್ತಿದ್ದೇನೆ. ನಾಲ್ಕನೆಯದು, ಮಾನ್ಯ ಜಯಚಂದ್ರರವರು ಕೆಲವು ಸರ್ಕಾರಿ ಆಜ್ಞೆಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ, ಅವು ಏನೇನು ಆಗಿದೆ ಆ ಎಲ್ಲಾ ಸವಿಸ್ತಾರವಾದ ಕಾಪಿ ತಮಗೆ ಕಳುಹಿಸಿ ಕೊಡುತ್ತೇನೆ. ಏಕೆಂದರೆ ನಾನು ಈ ಮನೆಯಲ್ಲಿ ಏನಾದರೂ ಭರವಸೆ ಕೊಟ್ಟರೆ ಯಾವುದು ಆಗಿದೆ, ಯಾವುದು ಆಗಿಲ್ಲ ಎಂದು ಕೇಳುವುದಕ್ಕೆ ನಿಮಗೆ ಅಧಿಕಾರವಿದೆ. ಮತ್ತೆ ಮಾಡಬೇಕಾಗಿ ರುವುದು ನನ್ನ ಕರ್ತವ್ಯ. ಆ ಮಾಹಿತಿಯನ್ನು ನಿಮಗೆ ಒದಗಿಸಿ ಕೊಡುತ್ತೇನೆ. ಯೋಜನಾ ವೆಚ್ಚದ ಬಗ್ಗೆ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪವಾಗುತ್ತಿದೆ. 23,329 ಕೋಟಿ ಖಜಾನೆಯಿಂದ ಆಗುವಂಥ ವೆಚ್ಚ, ಇದರಲ್ಲಿ 4,631 ಕೋಟಿ ನಿಗಮಗಳ ಸಂಪನ್ಮೂಲದ ಯೋಜನಾ ವೆಚ್ಚ ಸೇರಿಲ್ಲ. ಇದರಲ್ಲಿ 2,000 ಕೋಟಿ ಕೇಂದ್ರದ ಅನುದಾನ ಸೇರಿದೆ. ನಮ್ಮ ಸಂಪನ್ಮೂಲದಿಂದ ಆಗುವಂಥ ಯೋಜನಾ ವೆಚ್ಚ 21,336 ಕೋಟಿ, ನಿಗಮಗಳ ವೆಚ್ಚ 4,631 ಕೋಟಿ, ಒಟ್ಟು ಯೋಜನಾ ವೆಚ್ಚ 25,967 ಕೋಟಿ ಆಗಿದೆ. ಅಂದರೆ 29,500 ಕೋಟಿಯ

ಯೋಜನಾ ಗಾತ್ರಕ್ಕೆ ಹೋಲಿಸಿದರೆ ಶೇಕಡ 88ರಷ್ಟು ಪ್ರಗತಿಯಾಗಿದೆ. ಇದು ಮಾನ್ಯ ಸಿದ್ದರಾಮಣ್ಣನವರಿಗೆ ಮಾಹಿತಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೇ, account ಆದ ಮೇಲೆ ಇವೆಲ್ಲಾ ಲೆಕ್ಕ. Account ಇಲ್ಲ. ಇದೆಲ್ಲಾ estimated. Account ಆಗುವುದು ಯಾವಾಗ? ಮಾರ್ಚಿಯಾದ ಮೇಲೆ ಮೇ ನಲ್ಲೊ ಅಥವಾ ಜೂನ್‌ನಲ್ಲೊ ಯಾವಾಗಲೂ account ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಒಂದು ಸಂಗತಿ ನಾನು ಈ ಮನೆಯಲ್ಲಿ ಹೇಳಿರುವುದು ದಾಖಲೆಗೂ ಹೋಗಿದೆ. ನಾವು ಏನಾದರೂ ಈ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಹೇಳಿದರೆ ಅದಕ್ಕಿಂತ ಒಂದು ಹೆಜ್ಜೆ ಮುಂದಿಟ್ಟಿರುತ್ತೇವೆಯೇ ಹೊರತು ಹಿಂದೆ ಇಟ್ಟಿರುವುದಿಲ್ಲ. ಆ ಅಂಕಿ ಅಂಶ ಇಲ್ಲಿ ಹೇಳುವುದಿಲ್ಲ. ಈ ಭರವಸೆ ಕೊಡುತ್ತೇನೆ. ನೀರು ಸರಬರಾಜು ಶೀರ್ಷಿಕೆಯಲ್ಲಿ ಈ ವರ್ಷ 1,200 ಕೋಟಿ ಬಂಡವಾಳ ವೆಚ್ಚಕ್ಕೆ ಪ್ರತಿಯಾಗಿ 930 ಕೋಟಿ ತರಲು ಕಾರಣ ಮುಂದಿನ ವರ್ಷದಿಂದ ಸುಮಾರು 500 ಕೋಟಿ ಕೇಂದ್ರದ ಅನುದಾನ ಖಜಾನೆಯಿಂದ ನೀಡದೆ ನೇರವಾಗಿ ನೀರು ಸರಬರಾಜು ಸಂಘಕ್ಕೆ ನೀಡುತ್ತಾರೆ. ಹೀಗಾಗಿ ಕಡಿಮೆ ತೋರಿಸಿದ್ದೇವೆ ಹೊರತು ಬೇರೆ ಯಾವುದೇ ಕಾರಣ ಅಲ್ಲ ಎನ್ನುವ clarification ಕೊಡುವುದಕ್ಕೆ ಇಚ್ಛಿಸುತ್ತೇನೆ. ನಾನು ಎಲ್ಲಿಯೂ ಸಹ ಕೇಂದ್ರದಿಂದ ಬರುವ ಅನುದಾನ ಕಡಿಮೆಯಾಗಿದೆ ಎಂದು ಹೇಳಿಲ್ಲ. ನಮ್ಮ ತೆರಿಗೆಗಳ ಸಂಗ್ರಹ ಕಡಿಮೆಯಾಗಿಲ್ಲ. ಆದರೆ ತೆರಿಗೆಗಳ ಬೆಳವಣಿಗೆ ನೀವು ಹೇಳಿದಂತೆ ಅದರ ಪ್ರಮಾಣ ಮೊದಲಿನಷ್ಟು ಇಲ್ಲ ಎನ್ನುವುದನ್ನು ಯಾರಾದರೂ ಒಪ್ಪಿಕೊಳ್ಳಲೇಬೇಕು. ಅದರ ಬಗ್ಗೆ ಅಂಕಿ-ಅಂಶಗಳಿವೆ. ಹಿಂದಿನ ವರ್ಷಕ್ಕಿಂತ ಶೇಕಡ 6ರಷ್ಟು ತೆರಿಗೆ ಸಂಗ್ರಹಣೆಯಲ್ಲಿ ಬೆಳವಣಿಗೆಯಾಗಿದೆ ಎನ್ನುವುದನ್ನು ಮಾತ್ರ ನಾನು ನಿಮಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಕೇಂದ್ರದಿಂದ ಯೋಜನೆಯಲ್ಲಿ 7 ರಿಂದ 5ಕ್ಕೆ ಬಡ್ಡಿ ಇಳಿಸಿದ್ದೀರಾ, ನೀವು ಶೇಕಡ 3 ಕ್ಕಿಂತ ಕೆಳಗೆ ಹೋಗುವುದಕ್ಕೆ ಸಾಧ್ಯವಿಲ್ಲವೆ? ಬಡ್ಡಿ ಕಡಿಮೆ ಮಾಡಿ ಎನ್ನುವ ಮಾತನ್ನು ತಾವು ಹೇಳಿದಿರಿ. ತಮಗೆ ಗೊತ್ತಿರುವ ಹಾಗೆ ಈ ನೇಗಿಲಯೋಗಿ ರೈತನಿಗೆ ಕೃಷಿಕನಿಗೆ ಹತ್ತಾರು ಯೋಜನೆಗಳನ್ನು ತಂದಿದ್ದೇವೆ. ಹತ್ತಾರು ಕಾರ್ಯಕ್ರಮಗಳಿಗೆ ನಾವು

ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದ್ದರಿಂದ ನಾನು ನಿಮಗೆ ಒಂದು ಪ್ರಶ್ನೆ ವಾಪಸ್ ಕೇಳಿದರೆ, ಈ ದೇಶದಲ್ಲಿ ಕೇಂದ್ರದ ಸಹಾಯ ಹಸ್ತ ನೀಡುವುದಕ್ಕಿಂತ ಮುಂಚೆ ಕಡಿಮೆ ಬಡ್ಡಿ ಎಂದು ಹೇಳುವುದಕ್ಕಿಂತ ಮುಂಚೆ ನಮ್ಮ ಸರ್ಕಾರ ಬಂದ ಮೇಲೆಯೇ 3% ಬಡ್ಡಿ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮತ್ತು Co-operative Institutions ಗಳಲ್ಲಿ ಸಾಲ ಕೊಡುವುದಕ್ಕೆ ಪ್ರಾರಂಭ ಮಾಡಿದೆವು. ಹಿಂದೆ ಯಾವ ರಾಜ್ಯಗಳಲ್ಲಿಯೂ ಇದರ ಬಗ್ಗೆ ಚಿಂತನೆಯನ್ನೇ ಮಾಡಿರಲಿಲ್ಲ. In fact ಹೆಮ್ಮೆಯಿಂದ ಒಂದು ಮಾತು ಹೇಳುವುದಾದರೆ, ಪಾರ್ಲಿಮೆಂಟಿನಲ್ಲಿ ಚರ್ಚೆಯಾದ ಕಾಲದಲ್ಲಿಯೂ ಸಹ ಕರ್ನಾಟಕದಲ್ಲಿ ನಾವೇನು 3% ಇಳಿಸಿದೆವು, ಈ ಕಾರಣಕ್ಕಾಗಿ ಕೇಂದ್ರವೂ ಸಹ 2% ಕಡಿಮೆ ಮಾಡುವುದಕ್ಕೆ ನಾವೇ ಅದಕ್ಕೆ ಪ್ರೇರಣೆ ಕೊಟ್ಟಿದ್ದೇವೆಂದು ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛಿಸುತ್ತೇನೆ. ತಾವು ಇದನ್ನು ಒಪ್ಪುತ್ತೀರಾ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಇವತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ರೈತನಿಗೆ ಬೇರೆ ಬೇರೆ ಭಾಗಗಳಲ್ಲಿ ಅನೇಕ concessions ಕೊಡುತ್ತಿರುವುದರಿಂದ ಇದಕ್ಕಿಂತ ಹೆಚ್ಚಿಗೆ ಮಾಡುವ ಸ್ಥಿತಿಯಲ್ಲಿ ನಾನು ಇಲ್ಲವೆಂದು ನಿಮಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಮತ್ತೆ ಮತ್ತೆ ನಮ್ಮ ಸ್ನೇಹಿತರು ಮೊನ್ನೆ ರಾಜ್ಯಪಾಲರ ಭಾಷಣದ ಸಂದರ್ಭದಲ್ಲೂ ಸಹ ತಾವು ಪ್ರತಿಭಟಿಸಿ ತಮ್ಮ ಒಂದು ವಿಚಾರ ವ್ಯಕ್ತಪಡಿಸಿದ್ದೀರಿ. ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ. ಸರ್ವಜ್ಞ ಹುಟ್ಟೂರಿನ ಅಭಿವೃದ್ಧಿ ಕಾರ್ಯಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ, ಎರಡು ಕೋಟಿ ಅನುದಾನ ನೀಡಿ ಕಾಮಗಾರಿಗಳನ್ನು ಮಾಡುತ್ತಿದ್ದೇವೆ. ಹಿರೇಕೆರೂರು–ಹಗಲೂರು, ಹಂಸಭಾವಿ–ಹಗಲೂರು ಜೋಡು ರಸ್ತೆ ನಿರ್ಮಾಣ, ಡಾಂಬರೀಕರಣ, ಸರ್ವಜ್ಞ ಜನಿಸಿದ ಸ್ಥಳದಲ್ಲಿ ಗದ್ದುಗೆ ನಿರ್ಮಾಣ, ಸುಲಭ ಶೌಚಾಲಯ, ಸರ್ವಜ್ಞ ಸಾಹಿತ್ಯ ಪ್ರಕಟಣೆ ಮತ್ತು ಸಿ.ಡಿ., ವಸ್ತು ಸಂಗ್ರಹಾಲಯ, ಗ್ರಂಥಾಲಯ, ...

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನೀವು ಅನೇಕ ಸಂದರ್ಭಗಳಲ್ಲಿ ಇಲ್ಲಿ ಭರವಸೆ ಕೊಟ್ಟಿದ್ದೀರಿ. ನಾನು ಏನು ಹೇಳುವುದು ಎಂದರೆ, ಕಾಗಿನೆಲೆ ಪ್ರಾಧಿಕಾರ ಮಾಡಿದ್ದೇವೆ. ಬಸವ ಕಲ್ಯಾಣದಲ್ಲಿ ಪ್ರಾಧಿಕಾರ ಮಾಡಿದ್ದೇವೆ. ಸಂಗಮದಲ್ಲಿ ಪ್ರಾಧಿಕಾರ ಮಾಡಿದ್ದೇವೆ. ಅದೇ ರೀತಿಯಲ್ಲಿ ಸರ್ವಜ್ಞ ಕೂಡ ಒಬ್ಬ ದಾರ್ಶನಿಕ ವ್ಯಕ್ತಿ, ದಾರ್ಶನಿಕ ಕವಿ, ಅವರ ಹೆಸರಿನಲ್ಲಿ ಅವರ ತ್ರಿಪದಿಗಳು ಏನು ಇವೆ, ನಮ್ಮ

ಬದುಕಿಗೆ ಬಹಳ ಬೆಳಕು ಚೆಲ್ಲುವಂಥ, ಮಾರ್ಗದರ್ಶನ ಮಾಡತಕ್ಕಂಥ ತ್ರಿಪದಿಗಳು ಬಹಳಷ್ಟು ಇವೆ. ಅದಕ್ಕಾಗಿ ಅವರ ಎಲ್ಲಾ ಸಮಗ್ರವಾಗಿ ಬೇರೆ ಬೇರೆ ಭಾಷೆಗಳಿಗೆ ತರ್ಜುಮೆ ಮಾಡಲಿಕ್ಕೆ ಒಂದು ಪ್ರಾಧಿಕಾರ ಮಾಡಿ. ನಿಮಗೇನು ಅದರಿಂದ ಬಹಳ ದೊಡ್ಡದೇನೂ ಆಗುವುದಿಲ್ಲ. ಮಾಸೂರು ಮತ್ತು ಹಿರೆಕೆರೂರಿನಲ್ಲಿ ಒಂದು ಪ್ರಾಧಿಕಾರ ಮಾಡಲಿಕ್ಕೆ ನಿಮಗೇನು ತೊಂದರೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಮಠಗಳು ಮತ್ತು ಸಾಮಾಜಿಕ ಸಂಸ್ಥೆಗಳಿಗೆ ನೀಡುವ ಅನುದಾನದಲ್ಲಿ ಲೆಕ್ಕ ಬುಕ್‌ಗಳ ಬಗ್ಗೆ ಹೇಳುವವರು ಕೇಳುವವರು ಯಾರಾದರೂ ಇದ್ದಾರೆಯೇ, ಎನ್ನುವಂಥ ಪ್ರಶ್ನೆ ಎಲ್ಲರೂ ಮಾಡಿದ್ದೀರಿ. ಸ್ವಾಮಿ, ಈ ಹಣವನ್ನು Deputy Commissioner ಮೂಲಕ ಕೊಡುತ್ತೇವೆ. Deputy Commissioner ಅಭಿವೃದ್ಧಿ ಮಾಡಿರುವುದರ ಬಗ್ಗೆ Utilization Certificate ಕೊಟ್ಟ ಮೇಲೆ ಮಾತ್ರ ಹಂತ ಹಂತವಾಗಿ ಹಣ ಬಿಡುಗಡೆ ಯಾಗುತ್ತದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, Audit ಆಗುತ್ತದೆಯೆ? Is it not accountable here? ನೀವೇ ಹೇಳಿ ನೋಡೋಣ. The money spent by the Government is accountable, it should be accountable and you are answerable to this House.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಇಷ್ಟೆ ಹೇಳುವುದು. ನಾವು ಎರಡು ಕೋಟಿ ಕೆಲಸ ಮಾಡಿದ್ದರೆ ಅಲ್ಲಿ ಎರಡೂವರೆ ಕೋಟಿ ರೂಪಾಯಿ ಖರ್ಚಾಗಿದೆಯೆ ಹೊರತು, ಮೂರು ಕೋಟಿ ಕೊಟ್ಟರೆ ನಾಲ್ಕು ಕೋಟಿ ಖರ್ಚಾಗಿದೆಯೆ ಹೊರತು, ಯಾವುದಾದರೂ ಒಂದು ಸಂಸ್ಥೆಗೆ ನಾವು ಕೊಟ್ಟಿರುವ ಹಣ ದುರುಪಯೋಗವಾಗಿದೆ, ಕಡಿಮೆ ಖರ್ಚಾಗಿದೆ ಎನ್ನುವ ಒಂದು ಉದಾಹರಣೆ ಇಲ್ಲಿ ಕುಳಿತಿರುವ ಯಾರಾದರೂ ಗೌರವಾನ್ವಿತ ಸದಸ್ಯರು ತೋರಿಸಿ ಬಿಟ್ಟರೆ ನಾನು ನೀವು ಹೇಳಿದಂತೆ ಕೇಳುತ್ತೇನೆ. ಆದ್ದರಿಂದ ಅನುಮಾನ ವ್ಯಕ್ತಪಡಿಸು ವುದಕ್ಕೆ ಒಂದು ಇತಿಮಿತಿ ಇರಬೇಕು.

ಡಾ ಹೆಚ್.ಸಿ.ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, Accounts must be audited. ಜಾಸ್ತಿ ಖರ್ಚು ಮಾಡುವುದು ಬೇರೆ ಮಾತು. Audit ಮಾಡಿಸುವುದು ಸರ್ಕಾರದ ಜವಾಬ್ದಾರಿ. ಏಕೆಂದರೆ ಇದು tax payer money.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ಸ್ನೇಹಿತರು ವಾಸ್ತವಿಕ ಸ್ಥಿತಿಯನ್ನು ರಾಜ್ಯದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ನಾನು ನಿಮ್ಮಲ್ಲಿ ವಿನಂತಿ ಮಾಡುವುದು ಇಷ್ಟೆ. ಸನ್ಮಾನ್ಯ ಅಧ್ಯಕ್ಷರೆ, ನಾವು food subsidy 1,150 ಕೋಟಿ ಕೊಡುತ್ತಿದ್ದೇವೆ. Transport department ಗೆ 175 ಕೋಟಿ subsidy ಕೊಡುತ್ತಿದ್ದೇವೆ. Power ಗೆ 1,900 ಕೋಟಿ ಕೊಡುತ್ತಿದ್ದೇವೆ. Co-operative Institutions ಗೆ 150 ಕೋಟಿ ಕೊಡುತ್ತಿದ್ದೇವೆ. Agriculture ಗೆ 250 ಕೋಟಿ ಕೊಡುತ್ತಿದ್ದೇವೆ. Social Security Pension ಗೆ 50 ಲಕ್ಷ ಬಡವರಿಗೆ ಒಂದೊಂದು ಕುಟುಂಬದಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ, ಭಾಗ್ಯಲಕ್ಷ್ಮಿ, ಎರಡು ರೂಪಾಯಿಗೆ milk ಕೊಡುವುದು, ಇದೊಂದು 2,000 ಕೋಟಿಯಾಗುತ್ತದೆ. Industries ಗೆ 80 ಕೋಟಿ ಕೊಡುತ್ತಿದ್ದೇವೆ, Housing 700 ಕೋಟಿ ಕೊಡುತ್ತಿದ್ದೇವೆ. ಭಾಗ್ಯಲಕ್ಷ್ಮಿಗೆ ಈ ವರ್ಷವೇ 350 ಕೋಟಿ ತೆಗೆದಿಟ್ಟಿದ್ದೇನೆ. Milk Subsidy 250 ಕೋಟಿ ಕೊಡುತ್ತೇವೆ. ಎಷ್ಟಾಯಿತು ಸ್ವಾಮಿ? ಒಟ್ಟಾರೆಯಾಗಿ 6,800 ರಿಂದ 7,000 ಕೋಟಿ Subsidy ಆಯಿತು. ದಯಮಾಡಿ ಇಲ್ಲಿರುವಂಥ ನಮ್ಮ ಗೌರವಾನ್ವಿತ ಸದಸ್ಯರು ಇಷ್ಟು ದೊಡ್ಡ ಪ್ರಮಾಣದಲ್ಲಿ ಒಂದು ಕಡೆ Subsidy ಕೊಡುತ್ತಿದ್ದೇವೆ, ಇನ್ನೊಂದು ಕಡೆ ಅತಿವೃಷ್ಟಿಯಲ್ಲಿ ಸಂಕಷ್ಟಕ್ಕೀಡಾದವರ ನೆರವಿಗೆ ನಾವು ಹೋಗಬೇಕಾಗಿದೆ. ಮತ್ತೆ Power shortage ಇರುವಂಥ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ Power Problem ಬರಕೂಡದು ಎಂದು ಸುಮಾರು 2,000 ಕೋಟಿ ದಾಟಬಹುದು, ಅದಕ್ಕೆ ನಾವು ಮಾನಸಿಕವಾಗಿ ಸಿದ್ಧ ಮಾಡಿಕೊಳ್ಳುತ್ತಿದ್ದೇವೆ.

ಈ ಎಲ್ಲಾ ಕಾರಣಕ್ಕಾಗಿ ಕೆಲವು ಸಂದರ್ಭದಲ್ಲಿ ಸ್ವಲ್ಪ ಹಿನ್ನಡೆಯಾಗಿರಬಹುದು. ಆದರೆ, ಈ ಸಂದರ್ಭದಲ್ಲಿ ನಾನು ಭರವಸೆ ಕೊಡುವುದೇನೆಂದರೆ, ಈ ಬಜೆಟ್‌ನಲ್ಲಿ ನಾನು ಏನೇನು ಹೇಳಿದ್ದೇನೆಯೋ ಅವೆಲ್ಲಕ್ಕೂ ಏನೂ

ತೊಂದರೆಯಾಗದ ರೀತಿಯಲ್ಲಿ ಅವೆಲ್ಲವನ್ನೂ ಅನುಷ್ಠಾನ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ. ಮಾನ್ಯ ಯಡಿಯೂರಪ್ಪನವರೆ, ಅಲ್ಪಸಂಖ್ಯಾತರ ಇಲಾಖೆಗೆ ಎಷ್ಟು ಹಣ ತೆಗೆದಿಟ್ಟಿದ್ದೀರಿ ಮತ್ತು ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ಹೇಳಿ ಎಂದು ಕೇಳಿದ್ದೀರಿ. ನಿಮ್ಮ ಸಮಾಜದ ಪ್ರಮುಖರನ್ನು ಕರೆಸಿ ಯಾವ್ಯಾವ ಯೋಜನೆಗಳಿಗೆ ಎಷ್ಟು ಹಣ ಖರ್ಚು ಮಾಡಬೇಕಾಗಿದೆಯೋ ಅದನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಎಸ್‌ಸಿ:ಎಸ್‌ಟಿ ವರ್ಗದವರ ಯೋಜನೆಗಳಿಗೆ ಯಾವುದೇ ಲೋಪದೋಷಗಳಾಗುವುದಕ್ಕೆ ಬಿಡುವುದಿಲ್ಲ. ನಿಗದಿ ಮಾಡಿರುವ ಗುರಿಯನ್ನು ಮುಟ್ಟುವುದಕ್ಕಾಗಿ ಗರಿಷ್ಠ ಖರ್ಚು ಮಾಡುವುದನ್ನು ಹಿಂದಿನ ಯಾವುದೇ ವರ್ಷಕ್ಕೆ ಹೋಲಿಕೆ ಮಾಡಿದರೂ ಕೂಡ ನಾವೇನು ಯಾವುದೇ ಕಾರಣಕ್ಕೆ ಹಿಂದೆ ಬಿದ್ದಿಲ್ಲ. ರೈಲ್ವೆ ಬಗ್ಗೆ ನಾಯಕರು ಪ್ರಸ್ತಾಪ ಮಾಡಿದ್ದೀರಿ.

ಡಾ: ಹೆಚ್.ಸಿ. ಮಹಾದೇವಪ್ಪ : ಮಾನ್ಯ ಮುಖ್ಯಮಂತ್ರಿಗಳೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ Single Window Agency ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ರೋಷನ್ ಬೇಗ್‌ರವರಿಗೆ ನಾನು ಹೇಳುವುದೇನೆಂದರೆ, ರೈಲ್ವೆ ವಿಷಯಕ್ಕೆ ಸಂಬಂಧಪಟ್ಟಂತೆ ನಾನೊಬ್ಬನೆ ತೆಗೆದುಕೊಳ್ಳುವ ನಿರ್ಧಾರವಲ್ಲ. ನಿಮ್ಮನ್ನು ಮತ್ತು ಸಂಸತ್ ಸದಸ್ಯರೆಲ್ಲರನ್ನು ಕರೆದು ಮಾತನಾಡುತ್ತೇನೆ. ಸಾರ್ವಜನಿಕ ಸಮಾರಂಭದಲ್ಲಿ ಮಂತ್ರಿಗಳ ಸಮಕ್ಷಮದಲ್ಲಿ ಚರ್ಚೆ ಮಾಡಿದ್ದೇವೆ. ಇದರ ಆಧಾರದ ಮೇಲೆ ನಾನು ಈಗಾಗಲೇ ರೈಲ್ವೆ ಮಂತ್ರಿಯವರಿಗೆ ಕಾಗದ ಬರೆದು ಅದಕ್ಕೆ ಅಗತ್ಯವಾಗಿರುವ ಸುಮಾರು 200 ರಿಂದ 300 ಕೋಟಿ ರೂಪಾಯಿ ಈ ವರ್ಷವೇ ಬಿಡುಗಡೆ ಮಾಡುತ್ತೇನೆ. ಹಾಗೆಯೇ ರೈಲ್ವೆ ಯೋಜನೆಗಳಿಗೆ 50% ಭರಿಸುವುದಕ್ಕೆ ನಾನು ಸಿದ್ಧನಿದ್ದೇನೆಂದು ಹೇಳಿದ್ದೇನೆ. ಮತ್ತೆ ಪತ್ರ ಕೂಡ ಬರೆದಿದ್ದೇನೆ. ಹೇಗಿರಬೇಕೆಂಬುದರ ಬಗ್ಗೆ ನಾವು ನೀವು ಒಟ್ಟಾಗಿ ಕುಳಿತು ಚರ್ಚೆ ಮಾಡಿ ನೀವು ಕೊಡುವ ಸಲಹೆಯಂತೆ ಮಾಡೋಣ. ಒಂದೇ ಸಾರಿ ನಿರ್ಧಾರ ಮಾಡುವುದಕ್ಕೆ ನಾನ್ಯಾರು? ನಾವೆಲ್ಲರೂ ಸೇರಿಕೊಂಡು ಚರ್ಚೆ ಮಾಡೋಣ ಮತ್ತೆ ಎಕ್ಸ್‌ಪರ್ಟ್‌ಗಳ ಅಭಿಪ್ರಾಯ ತೆಗೆದುಕೊಂಡು ಮಾಡಬೇಕಾಗುತ್ತದೆ. ಅವರಿಗೆ ಒಂದು ಪ್ರೊಪೋಸಲ್ ಕಳುಹಿಸಿ ರೈಲ್ವೆ ಯೋಜನೆಗಳಿಗೆ 50% ಖರ್ಚು ಮಾಡುವುದಕ್ಕೆ ನಾವು ಸಿದ್ಧರಿದ್ದೇವೆಂದು ಹೇಳಿದ್ದೇವೆ. ನಾನು ಪ್ರತಿಯೊಂದು ವಿಷಯಗಳಿಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಒಟ್ಟಾರೆ ಬಜೆಟ್‌ನ ಹಿನ್ನೆಲೆಯಲ್ಲಿ ಉತ್ತರ ಕೊಟ್ಟಿದ್ದೇನೆ.

SRI QAMARUL ISLAM : Bidar- Gulbarga line is delayed because of not acquisition. . .Kindly acquire – that on urgency ಅಲ್ಲಿ 18 ಕೋಟಿ ಇಟ್ಟಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದರ ಬಗ್ಗೆ ಗಮನ ಕೊಡುತ್ತೇನೆ. ಮತ್ತೆ ನಿಮ್ಮನ್ನು ಕರೆದು ಅಲ್ಲಿಗೆ ಏನು ಬೇಕೋ ಅದನ್ನು ಖಂಡಿತ ಮಾಡಿಕೊಡುತ್ತೇನೆ. ಅನೇಕ ಜನ ಮಾನ್ಯ ಸದಸ್ಯರು ಅನೇಕ ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ನೀವುಗಳೆಲ್ಲಾ ಹೇಳಿರುವ ಅಂಶಗಳನ್ನು ರೆಕಾರ್ಡ್ ಮಾಡಿಕೊಂಡು ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನು ಮಾಡುವುದಕ್ಕೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಮತ್ತೆ ಮಾನ್ಯ ಸಚಿವರೆಲ್ಲರೂ ಸಹ ಅದರ ಬಗ್ಗೆ ಗಮನ ಹರಿಸುತ್ತಾರೆ. ಆದ್ದರಿಂದ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಏನೇನು ಸಾಧ್ಯವಿದೆಯೋ ಅವೆಲ್ಲವನ್ನೂ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ದಿನಾಂಕ: 31.3.2011 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ರವರೆಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಿಗಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಈ ಸಭೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ : Vote on Account ತೆಗೆದುಕೊಳ್ಳುತ್ತಿದ್ದೀರಾ?

ಅಧ್ಯಕ್ಷರು : Vote on Account ಕೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಾಲ್ಕು ತಿಂಗಳಿಗೆ ಖರ್ಚು ಮಾಡುವುದಕ್ಕೆ ಕೇಳುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೌದು. Vote on Account ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅದನ್ನೇ ನಾನು ಹೇಳುತ್ತಿದ್ದೇನೆ. ಲೇಖಾನುದಾನ ಕೇಳುತ್ತಿದ್ದೀರಿ.

ಅಧ್ಯಕ್ಷರು : ಲೇಖಾನುದಾನ ಕೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅದರ ಬಗ್ಗೆ ನಾವು ಸ್ವಲ್ಪ ಮಾತನಾಡಬೇಕು. ಮಾತನಾಡುವುದು ಬೇಡವೆಂದು ಹೇಳುತ್ತೀರಾ?

ಅಧ್ಯಕ್ಷರು : ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುವಾಗ ರೈತರ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಾರೆಂದು ನಾವು ಬಹಳಷ್ಟು ನಿರೀಕ್ಷೆ ಮಾಡಿದ್ದೆವು. ಬರ್ಡನ್ ಜಾಸ್ತಿಯಾಗುವುದಿಲ್ಲ, ಆದ್ದರಿಂದ, ರೈತರ ಸಾಲದ ಮೇಲಿನ ಬಡ್ಡಿ ಕಡಿಮೆ ಮಾಡಿ ಎಂದು ನಾವು ಹೇಳಿದ್ದಕ್ಕೆ All India level ನಲ್ಲಿ ನಾವೇ ಮೊದಲು ಮಾಡಿದ್ದೇವೆಂದು ಹೇಳಿದ್ದಾರೆ. ನಾವು ಇದ್ದಂಥ ಸಂದರ್ಭದಲ್ಲಿಯೂ ಕೂಡ 6% ಮಾಡಿದ್ದೇವೆ. ಅಂದರೆ, ನಾನು ಹಣಕಾಸಿನ ಮಂತ್ರಿಯಾಗಿದ್ದಾಗ 6% ಇತ್ತು. ಅವರು 9% ನಿಂದ 7%ಗೆ ಮಾಡಿದರು. Prompt payment ಮಾಡುವವರಿಗೆ 7% ನಿಂದ 5% ಗೆ ಮಾಡಿದ್ದಾರೆ. ಇದಕ್ಕೆ ಅಡಿಷನಲ್ ಬರ್ಡನ್ ಆಗುವುದಿಲ್ಲ ಆದ್ದರಿಂದ, ನೀವೂ ಸಹ ಮಾಡಿ ಎಂದು ಕೇಳಿದರೆ ಏಕೆ ಮಾಡುತ್ತಿಲ್ಲ. ಅಂದರೆ, ಇವರು ರೈತ ವಿರೋಧಿಗಳೇ? ರೈತ ಪರವಾಗಿರುವವರು ರೈತ ವಿರೋಧಿ ತೀರ್ಮಾನ ತೆಗೆದುಕೊಂಡರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರೆ, ನೀವು ಹೊರಗಡೆ ಹೋಗಿ ನಾವು ರೈತ ವಿರೋಧಿ ಎಂದು ಹೇಳಿದರೆ ಸಾಕು ನಿಮ್ಮನ್ನು ಅಟ್ಟಿಸಿಕೊಂಡು ಬರುತ್ತಾರೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ಇಬ್ಬರು ಜೊತೆಯಲ್ಲಿಯೇ ಹೋಗೋಣ ಬನ್ನಿ. ನೀವು ಆ ಕಡೆಗೆ ಹೋಗಬೇಕು ಗೊತ್ತಾಗುತ್ತದೆ. ನೀವು ಯಾವುದೋ ಕಾಲದಲ್ಲಿ ಅಂದರೆ, ನಿಮಗೆ ಅಧಿಕಾರ ಇಲ್ಲದೆ ಇದ್ದಾಗ ರೈತರು ರೈತರು ಎಂದು ಹೇಳಿ ಬಿಟ್ಟಿದ್ದೀರಿ. ಆದರೆ, ಈಗ ಅಧಿಕಾರ ಬಂದಾಗ ತಪ್ಪಿಸಿಕೊಳ್ಳುತ್ತಿದ್ದೀರಿ. ಈಗ ನಿಮ್ಮ ಬಂಡವಾಳ ಬಯಲಾಗುವ ಕಾಲ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ರೈತ ಸಮೂಹಕ್ಕೆ ನಾವೇನು ಮಾಡುತ್ತಿದ್ದೇವೆಂಬುದು ಪ್ರತಿಯೊಬ್ಬ ರೈತನಿಗೂ ಗೊತ್ತಿರುವ ವಿಷಯವಾಗಿದೆ. 21ನೇ ತಾರೀಕಿನ ದಿವಸ 40 ಹಳ್ಳಿಗಲ್ಲಿ ಮನೆಗಳನ್ನು ಕಟ್ಟಿಕೊಡುವ ಕಾರ್ಯಕ್ರಮ ಪ್ರಾರಂಭ ಮಾಡುತ್ತಿದ್ದೇವೆ. ತಮ್ಮನ್ನು ಸಹ ಆ ಸಮಾರಂಭಕ್ಕೆ ಕರೆಯುತ್ತೇನೆ. ಕೆಲಸ ಆದ ಮೇಲೆ ಒಂದು ವಾರದವರೆಗೆ ಆ ಭಾಗದಲ್ಲಿ

ಆನು ಕ್ಯಾಂಪ್ ಮಾಡುತ್ತೇನೆ. ಬೀದರ್‌ನಿಂದ ಪ್ರಾರಂಭ ಮಾಡಿ ಏಳೆಂಟು ಜಿಲ್ಲೆಗೆ ನಾನು ಹೋಗುತ್ತೇನೆ. ಮಾನ್ಯ ಸಿದ್ದರಾಮಯ್ಯನವರೂ ಕೂಡ ನಮ್ಮ ಜೊತೆಯಲ್ಲಿ ಬರಲಿ. ಇಬ್ಬರೂ ಸಹ ಸಾರ್ವಜನಿಕ ಸಭೆಯಲ್ಲಿ ಮಾತನಾಡೋಣ. ಯಾರು ಯಾರ ಪರವಾಗಿ ಇದ್ದಾರೆಂಬ ಬಗ್ಗೆ ಕೈ ಮೇಲೆತ್ತಿ ಎಂದು ಹೇಳೋಣ. ನನ್ನ ಪರವಾಗಿ ಕೈ ಎತ್ತಿದರೆ ನೀವು ವೇದಿಕೆಯಿಂದ ಕೆಳಕ್ಕೆ ಇಳಿಯಿರಿ ಅಥವಾ ನಿಮ್ಮ ಪರ ಕೈ ಎತ್ತಿದರೆ ನಾನು ವೇದಿಕೆಯಿಂದ ಕೆಳಕ್ಕೆ ಬರುತ್ತೇನೆ. ಇದಕ್ಕೆ ಒಪ್ಪುತ್ತೀರಾ?

SRI SIDDARAMAIAH : I accept your Challenge, ಹೋಗೋಣ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಛಾಲೆಂಜ್ ಎಲ್ಲಿ ಬಂತು. ನಾನು ವಾಸ್ತವಿಕ ಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. We go together. 100% I will come with you.

SRI SIDDARAMAIAH : I accept your proposal. ಈ ರೀತಿಯಾಗಿಯೇ ಮಾಡೋಣ ಬನ್ನಿ. ನೀವೊಬ್ಬರೆ ರೈತರ ಪರ ನಾವುಗಳೆಲ್ಲಾ ರೈತರ ವಿರೋಧಿಗಳೆಂದು ತಿಳಿದುಕೊಂಡಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಆ ರೀತಿಯಾಗಿ ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು ಹಣಕಾಸಿನ ಸಚಿವನಾಗಿದ್ದಾಗ ಬಡ್ಡಿ ದರವನ್ನು 14% ನಿಂದ 6% ಗೆ ಕಡಿಮೆ ಮಾಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರೆ, ರೈತ ವಿರೋಧಿ ಎಂಬ ಮಾತು ನಿಮ್ಮ ಬಾಯಿಂದ ಬಂತು. ರೈತ ವಿರೋಧಿಗಳೆಂದು ನಾನು ಹೇಳಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ರೈತರು ಇವತ್ತೂ ಕೂಡ ನಮ್ಮ ಪರವಾಗಿದ್ದಾರೆ. ಮತ್ತೆ ಮುಂದಕ್ಕೂ ಕೂಡ ನಮ್ಮ ಪರವಾಗಿ ಇರುತ್ತಾರೆಂದು ಹಾಗೆಯೇ ನಾವು ಬದುಕಿರುವವರೆಗೂ ಕೂಡ ನಮ್ಮ ಜೊತೆ ಇರುತ್ತಾರೆಂಬ ವಿಶ್ವಾಸ ನಮಗೆ ಇದೆ. ಆದ್ದರಿಂದ, ಇದು ಸವಾಲು ಎಂಬ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ಇದಕ್ಕೊಂದು ದಿನಾಂಕವನ್ನು ನಿಗದಿ ಮಾಡಿ ಬೆಳಗಾಂನಿಂದ ಕೊಳ್ಳೇಗಾಲದವರೆಗೆ ಸಾರ್ವಜನಿಕ ಸಭೆಯನ್ನು ಮಾಡಿ ನಾವಿಬ್ಬರೂ ಜೊತೆಯಲ್ಲಿಯೇ ಈ ಎಲ್ಲಾ ಸಾರ್ವಜನಿಕ ಸಭೆಗೆ

ಹೋಗೋಣ. ನಾವೇನು ಮಾಡಿದ್ದೇವೆ, ಮತ್ತೆ ನೀವೇನು ಮಾಡಿದ್ದೀರಿ ಎಂಬ ಬಗ್ಗೆ ಜನರಿಗೆ ಹೇಳೋಣ.

ಅಧ್ಯಕ್ಷರು : ಆಯಿತು. ನೀವಿಬ್ಬರೂ ಹೋಗಿಬನ್ನಿ, ಈಗ ಬೇಗ ತಮ್ಮ ಮಾತನ್ನು ಮುಗಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೀವು ಹೇಳುತ್ತಿರುವುದು ಸರಿ ಇದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಒಟ್ಟಿಗೆ ಓಡಾಡಬೇಕು ಮತ್ತೆ ಒಟ್ಟಿಗೆ ಸಮಾರಂಭದಲ್ಲಿ ಭಾಗವಹಿಸಬೇಕು. ಆದರೆ, ಇತ್ತೀಚೆಗೆ ತಾವು ಸಮಾರಂಭಕ್ಕೆ ಬರುತ್ತಿಲ್ಲ. ಮುಂದಿನ ತಿಂಗಳಿಂದ ಬನ್ನಿ ಒಟ್ಟಿಗೆ ಹೋಗೋಣ. ದೆಹಲಿಗೆ ಕರೆದರೂ ಸಹ ಬರುವುದಿಲ್ಲ ಮತ್ತೆ ಬೇರೆ ಕಡೆ ನಡೆಯುವ ಸಮಾರಂಭಕ್ಕೂ ಕೂಡ ಬರುವುದಿಲ್ಲ. ಆಸರೆ ಯೋಜನೆ ಸಮಾರಂಭಕ್ಕೆ ಕೇಂದ್ರ ಸರ್ಕಾರದ ಗೃಹ ಸಚಿವರು ಇಲ್ಲಿಗೆ ಬರುತ್ತಾರೆ. ಆದರೆ, ವಿರೋಧ ಪಕ್ಷದ ನಾಯಕರು ಬರುತ್ತಿಲ್ಲ. ದೆಹಲಿಗೆ ಕರೆದರೂ ಸಹ ಬರುತ್ತಿಲ್ಲ. ನಾವೇನು ಮಾಡೋಣ ಸ್ವಾಮಿ? ನಿಮ್ಮನ್ನು ಕರೆಯುವುದಕ್ಕೆ ನಾನು ರೆಡಿ ಇದ್ದೇನೆ ತಾವು ಬನ್ನಿ ಹೋಗೋಣ.

ಶ್ರೀ ಸಿದ್ದರಾಮಯ್ಯ : ನೀವು ಯಾವುದೇ ಸಮಾರಂಭಕ್ಕೆ ನಮ್ಮನ್ನು ಕರೆದಿಲ್ಲ.

SRI B.S. YEDDYURAPPA : No. I am sorry.

ಶ್ರೀ ಸಿದ್ದರಾಮಯ್ಯ : ಯಾವ ಕಾರ್ಯಕ್ರಮಕ್ಕೆ ಕರೆದಿದ್ದೀರಾ ಎಂಬ ಬಗ್ಗೆ ಮಾಹಿತಿ ತೋರಿಸಿ.

ಡಾ: ಹೆಚ್.ಸಿ.ಮಹಾದೇವಪ್ಪ : ಯಾವುದೇ ಕಾರ್ಯಕ್ರಮಕ್ಕೆ ಕರೆದಿಲ್ಲ.

ಶ್ರೀ ಸಿದ್ದರಾಮಯ್ಯ : ಸರ್ಕಾರದ ಹಣ ಖರ್ಚು ಮಾಡಿ 500ನೇ ಪಟ್ಟಾಭಿಷೇಕ ಮಾಡುತ್ತೀರಿ. ಇದಕ್ಕೆ ನಮ್ಮನ್ನು ಕರೆದಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿಗೆ ಕೇಂದ್ರದ ಗೃಹ ಸಚಿವರು ಬಂದಿದ್ದರು.

ಶ್ರೀ ಸಿದ್ದರಾಮಯ್ಯ : ಕೇಂದ್ರದಿಂದ ಅವರು ಬಂದಿದ್ದರು. ಆದರೆ, ನಾನು ಇಲ್ಲಿನ ವಿರೋಧ ಪಕ್ಷದ ನಾಯಕನಲ್ಲವೆ? ಎಂ.ಎಲ್.ಎ.ಗಳಿಗೆ ಆಹ್ವಾನ ಪತ್ರಿಕೆ ಕೊಟ್ಟಿಲ್ಲ. ಅಲ್ಲೆಲ್ಲಾ ಹೋಗಿ ಅಡಿಗಲ್ಲು ಹಾಕಿದ್ದೀರಿ. ಈ ಒಂದು ಆಹ್ವಾನ ಪತ್ರಿಕೆ ಕೊಟ್ಟಿಲ್ಲ. ಮತ್ತೆ ನಮ್ಮ ಹೆಸರುಗಳನ್ನು ಅದರಲ್ಲಿ

ಹಾಕಿಸಿದ್ದೀರಾ? ಸುಮ್ಮನೆ ಈ ರೀತಿಯಾದ ತಪ್ಪು ಮಾಹಿತಿಗಳನ್ನು ಜನರಿಗೆ ಕೊಡುವುದು ಬೇಡ. ರೈತ ವಿರೋಧಿಗಳೆಂದು ಹೇಳಿದರೆ ಅವರಿಗೆ ಕೋಪ ಬರುತ್ತದೆ. ಇವರು ರೈತರ ಪರವಾಗಿಲ್ಲ. ಬಡ್ಡಿದರವನ್ನು ಕಡಿಮೆ ಮಾಡುವು ದರಿಂದ ನಿಮಗೆ burden ಏನೂ ಆಗುವುದಿಲ್ಲವೆಂದರೂ ಕೂಡ ಬಡ್ಡಿ ದರವನ್ನು ಕಡಿಮೆ ಮಾಡುತ್ತಿಲ್ಲ. ಇವರಿಗೆ ಏನೂ burden ಇಲ್ಲದೆ ಇದ್ದರೂ ಕೂಡ 2% ನಿಂದ 1% ಕ್ಕೆ ಬಡ್ಡಿ ದರವನ್ನು ಇಳಿಸಲಿಲ್ಲವೆಂದು ನಾನೂ ಹೇಳುತ್ತೇನೆ. ರೈತರು ನನಗೆ ಚಪ್ಪಾಳೆ ತಟ್ಟುತ್ತಾರೆಯೋ ಅಥವಾ ನಿಮಗೆ ತಟ್ಟುತ್ತಾರೆಯೋ ಅಥವಾ ಯಾರಿಗೆ ಕೈ ಎತ್ತುತ್ತಾರೆಂಬುದು ನೋಡೋಣ ಬನ್ನಿ ಇಬ್ಬರೂ ಜೊತೆಗೆ ಹೋಗೋಣ. ಆದ್ದರಿಂದ, ರೈತರ ಪರ ಮತ್ತು ಬಡವರ ಪರ ನೀವಿಲ್ಲ ಎಂದು ಹೇಳುತ್ತೇನೆ. ಈ ಬಜೆಟ್ ಯಾವ ಜನರ ಪರವಾಗಿದೆ ಹೇಳಿ? ಬೆಂಗಳೂರು ನಗರಕ್ಕೆ ಖರ್ಚು ಮಾಡಿದ್ದೇವೆಂದು ಹೇಳುತ್ತೀರಿ. ಆದರೆ, ಅದು ನರ್ಮ್ಸ್ ದುಡ್ಡು ಮತ್ತೆ ಸಾಲ ತೆಗೆದುಕೊಂಡು ಬಂದಿರುವ ಹಣವಾಗಿದೆ. ಇದಕ್ಕೆ ರಾಜ್ಯ ಸರ್ಕಾರ ಒಂದು ರೂಪಾಯಿ ಕೊಟ್ಟಿಲ್ಲ. State Finance Commission ರವರ recommendation ಪ್ರಕಾರ 325 ಕೋಟಿ ರೂಪಾಯಿ ಕೊಟ್ಟಿರುವುದು ಬಿಟ್ಟರೆ ಬೆಂಗಳೂರು ನಗರಕ್ಕೆ ನೀವು ಏನೂ ಸಹ ಕೊಟ್ಟಿಲ್ಲ. ಕುಡಿಯುವ ನೀರಿಗೆ ಹಣ ಇಲ್ಲ. 1400 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದೀರಿ. ಮತ್ತೆ ಬೆಂಗಳೂರು ನಗರದಲ್ಲಿ ಸುಮಾರು 1200 ಕೋಟಿ ರೂಪಾಯಿಗಳಷ್ಟು ಬಾಕಿ ಬಿಲ್ ಇದೆ. ಇಷ್ಟೆಲ್ಲಾ ಇದ್ದರೂ ಕೂಡ ಬೆಂಗಳೂರು ನಗರವನ್ನು ಬದಲಾವಣೆ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಈ ರೀತಿ ಹೇಳಿ ಆಕಾಶದಲ್ಲಿ ಜನರನ್ನು ಇಡುವುದಕ್ಕೆ ಆಗುವುದಿಲ್ಲ. ಅಂದರೆ, ಭ್ರಮಾಲೋಕದಲ್ಲಿ ಜನರನ್ನು ಇಡುವುದಕ್ಕೆ ಆಗುವುದಿಲ್ಲ. ಭ್ರಮಾ ಅಂಕಿ-ಅಂಶಗಳಿಂದ ಜನರ ಬದುಕು ಸುಧಾರಣೆಯಾಗುವುದಿಲ್ಲ. ಮತ್ತೆ ಅವರಿಗೆ quality life ಕೊಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ಜನರಿಗೆ ಈ ರೀತಿ ಹೇಳಿಕೊಂಡರೆ ಸರಿಯಾಗು ವುದಿಲ್ಲ. ನಾವು ರೈತರ ಹತ್ತಿರ ಬರುವುದಕ್ಕೆ ನಾವು ತಯಾರಿದ್ದೇವೆ. ಯಾವುದೇ ಸಾರ್ವಜನಿಕ ಸಭೆಗೆ ಜಂಟಿಯಾಗಿ ಹೋಗೋಣ. ಬೇಕಾದರೆ ನಾಳೆ ದಿವಸ ಬೆಂಗಳೂರು ನಗರದಲ್ಲಿ ಬಿಬಿಎಂಪಿ ಚುನಾವಣೆಗೆ campaign ಮಾಡುವುದಕ್ಕೆ ಒಟ್ಟಿಗೆ ಹೋಗಿ ಒಂದೇ ವೇದಿಕೆಯಲ್ಲಿ ಮಾತನಾಡೋಣ. ಈ ರೀತಿ ಮಾಡುವುದಕ್ಕೆ ನಾವು ತಯಾರಿದ್ದೇವೆ. ಇವರ ಉತ್ತರ ದಿಂದ ನಮಗೆ

ಸಮಾಧಾನವಾಗಿಲ್ಲ. ಇವರು ಕೇಳತಕ್ಕಂಥದ್ದಕ್ಕೆ. ನಾವು ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಅದನ್ನು ಪ್ರತಿಭಟಿಸಿ ನಾವು walk out ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಮುಖ್ಯಮಂತ್ರಿಯವರು ನೀಡಿರುವ ಉತ್ತರ ಸರಿಯಾಗಿಲ್ಲ ಮತ್ತೆ ಅವರ ಉತ್ತರದ ಮೇಲೆ ನಮಗೆ ಭರವಸೆ ಇಲ್ಲ. ಆದ್ದರಿಂದ, ನಾವೂ ಸಹ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜೆ.ಡಿ.ಎಸ್. ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಮಂಡಿಸಿರುವ ಅನುದಾನ ಬೇಡಿಕೆಗಳ ಲೇಖಾನುದಾನ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

"ದಿನಾಂಕ: 31.3.2011 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಿಗಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಈ ಸಭೆ ಮಂಜೂರು ಮಾಡುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)